# ಹೊಸ ಮನುಷ್ಯ

ಹತ್ತನೇ ವರ್ಷದ ಮುಕ್ತಾಯದ ಸಂಚಿಕೆ

ಸಮಾಜವಾದಿ ಮಾಸಿಕ

ಜನವರಿ, ೨೦೨೨ | ಸಂಪಾದಕ : ಡಿ. ಎಸ್. ನಾಗಭೂಷಣ | ಸಂಪುಟ: ೧೦ ಸಂಚಿಕೆ: ೧೨

ಚಂದಾ ರೂ. ೧೫೦/- (೨೦೨೧ರ ಅಕ್ಟೋಬರ್‌ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ ರೂ. ೨೫೦/- ಪುಟ: ೨೦ ಬೆಲೆ: ರೂ. ೨೫/-



ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೯೫೬೧೨ ಸಂಚಾರಿ: ೯೪೪೮೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,,

ಈ ಸಂಚಿಕೆಯೊಂದಿಗೆ ನಮ್ಮ ಹತ್ತನೇ ವರ್ಷವನ್ನು ಪೂರೈಸುತ್ತಿದ್ದೇವೆ. ೨೦೧೧ರ ಆಗಸ್ಟ್‌ನಲ್ಲಿ ಆರಂಭವಾದ ಈ ಪತ್ರಿಕೆ ಈವರೆಗೆ ತನ್ನ ಪಯಣ ಸಾಗಿಸಿದೆ. ಕೆಲವು ಅನಿವಾರ್ಯ ಕಾರಣಗಳಿಂದಾಗಿ ೨೦೧೭ರಲ್ಲಿ ಆರು ತಿಂಗಳು ಕಾಲ ಪತ್ರಿಕೆಯನ್ನು ನಿಲ್ಲಿಸಿದ್ದ ಕಾರಣ ಈ ಹತ್ತು ವರ್ಷಗಳ ಪಯಣ ೨೦೨೨ರ ಜನವರಿಯನ್ನು ಮುಟ್ಟಿದೆ. ಪತ್ರಿಕೆಗೆ ಇದೊಂದು ಸಂಭ್ರಮದ ಸಂದರ್ಭ; ಓದುಗರಿಗೂ ಕೂಡ. ಹಾಗಾಗಿ ಪತ್ರಿಕೆಯ ಮುಂದಿನ, ಅಂದರೆ ೨೦೨೨ರ ಫೆಬ್ರುವರಿ ಸಂಚಿಕೆಯನ್ನು ನಮ್ಮ ಹತ್ತನೇ ವಾರ್ಷಿಕ ವಿಶೇಷ ಸಂಚಿಕೆಯನ್ನಾಗಿ ರೂಪಿಸುತ್ತಿದ್ದೇವೆ. ಇದರ ವಿವರಗಳನ್ನು ಈ ಸಂಚಿಕೆಯ ಮೂರನೇ ಪುಟದಲ್ಲಿ ನೋಡಬಹುದು. ಸದ್ಯಕ್ಕೆ ಇಲ್ಲಿ ಈ ವಿಷಯ ಸಾಕು.

***

ಶೇಖರ್ ಗುಪ್ತ ಓರ್ವ ಹಿರಿಯ ಇಂಗ್ಲಿಷ್ ಪತ್ರಕರ್ತ. 'ಇಂಡಿಯಾ ಟುಡೇ' ಮತ್ತು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಗಳಲ್ಲಿ ಕೆಲಸ ಮಾಡಿದ ಅನುಭವಿ. ಕೆಲ ವರ್ಷಗಳ ಹಿಂದೆ ನಮ್ಮ 'ಪ್ರಜಾವಾಣಿ'ಯ ವಾರದ ಪುರವಣಿಯಲ್ಲೂ ಅವರ ರಾಜಕೀಯ ವಿಶ್ಲೇಷಣೆಗಳ ಅಂಕಣಗಳು(ಅನುವಾದ ರೂಪದಲ್ಲಿ) ಪ್ರಕಟವಾಗುತ್ತಿದ್ದವು. ಅವು ಅಭ್ಯಾಸಪೂರ್ಣವಾದ ಮತ್ತು ಓದುಗರನ್ನು ನಿಜವಾಗಿ ಆಳದ ಚಿಂತನೆಗಳಿಗೆ ಹಚ್ಚುವಂತಹ ಹೊಸ ಒಳನೋಟಗಳಿಂದ ಕೂಡಿದ ಬರಹಗಳಾಗಿರುತ್ತಿದ್ದವು. ಇದಕ್ಕೆ ಮುಖ್ಯ ಕಾರಣ ಅವರ ವಾದಗಳು ಯಾವುದೇ ರಾಜಕೀಯ ಪಾಳೆಯಕ್ಕೆ ಬದ್ಧವಾಗಿಲ್ಲದವಾಗಿರುತ್ತಿದ್ದವು. ಇದು ನಿಜವಾದ ಪತ್ರಿಕಾ ಧರ್ಮಕ್ಕೆ ತಕ್ಕಂತೆಯೇ ಇತ್ತು. ಈಗ ಅವರು ಸಾಮಾಜಿಕ ಮಾಧ್ಯಮದಲ್ಲಿ ಸಾರ್ವಜನಿಕ ದೇಣಿಗೆ ಮತ್ತು ಚಂದಾ ಶುಲ್ಕಗಳನ್ನು ಆಧರಿಸಿದ 'ದ ಪ್ರಿಂಟ್' ಎಂಬ ತನ್ನದೇ ವರದಿಗಾರರ ಜಾಲ ಮತ್ತು ವಿಶ್ಲೇಷಕರ ಕೂಟದ ಒಂದು ವಾರ್ತಾಸಂಸ್ಥೆಯನ್ನು ಆರಂಭಿಸಿ ಬಹು ಕ್ರಿಯಾಶೀಲರಾಗಿದ್ದಾರೆ. ಇದು ಇಂದಿನ ಧೃವೀಕೃತ ರಾಜಕಾರಣದ ಸಂದರ್ಭದಲ್ಲಿ ಅಪ್ರಚೋದನಾತ್ಮಕ ಮತ್ತು ವಸ್ತುನಿಷ್ಠ ಪತ್ರಿಕೋದ್ಯಮವಾಗಿದ್ದು, ಇದನ್ನು ಉದಾರ ಹಣಕಾಸಿನ ಬೆಂಬಲದ ಮೂಲಕ ಬೆಂಬಲಿಸಬೇಕೆಂದು ಅವರು ಈ ಸಂಸ್ಥೆಯ ಚಟುವಟಿಕೆಗಳ ಭಾಗವಾಗಿ ಭಾನುವಾರದ ಹೊರತಾಗಿ ಪ್ರತಿದಿನ ಯೂಟ್ಯೂಬ್ ಮೂಲಕ ನಿರೂಪಿಸುವ 'ಕಟ್ ದ ಕ್ಲಟರ್'(ಗೋಜಲು ನಿವಾರಣೆ) ಎಂಬ ಕಾರ್ಯಕ್ರಮದಲ್ಲಿ ಆಗಾಗ್ಗೆ ಕೋರುತ್ತಿರುತ್ತಾರೆ, ಈ ಕಾರ್ಯಕ್ರಮದ ಭಾಗವಾಗಿ ಪ್ರತಿ ಶನಿವಾರ 'ನ್ಯಾಷನಲ್ ಇಂಟರೆಸ್ಟ್'(ರಾಷ್ಟ್ರಹಿತ) ಎಂಬ ಶೀರ್ಷಿಕೆಯಡಿ ನಿರ್ದಿಷ್ಟವಾಗಿ ರಾಷ್ಟ್ರ ರಾಜಕಾರಣ ಕುರಿತ ತಮ್ಮ ಸಂಪಾದಕೀಯ ಅಭಿಪ್ರಾಯಗಳನ್ನೂ ಹರಿದುಬಿಡುತ್ತಿರುತ್ತಾರೆ.

ಎಪ್ಪತ್ತರ ದಶಕದಲ್ಲಿನ 'ಇಂಡಿಯಾ ಟುಡೇ'ಯ ಓದುಗನಾಗಿದ್ದ ಕಾಲದಿಂದಲೂ ಶೇಖರ್ ಗುಪ್ತ ಅವರ ಪತ್ರಕರ್ತತನದ ಅಭಿಮಾನಿಯಾಗಿರುವ ನಾನು ಇತ್ತೀಚಿನ ಒಂದು ವರ್ಷದಲ್ಲಿ ಅವರ 'ಕಟ್ ದ ಕ್ಲಟರ್' ಕಾರ್ಯಕ್ರಮವನ್ನು ಕೇಳದೆ ಮಲಗಿದ ರಾತ್ರಿ ಬಹು ಅಪರೂಪವೆಂದೇ ಹೇಳಬೇಕು. ಈ ಅನುಭವದ ಆಧಾರದ ಮೇಲೆ ಹೇಳುವುದಾದರೆ ಮೋದಿಯವರ ಆಡಳಿತ ನಮ್ಮ ಮಾಧ್ಯಮ ಲೋಕವನ್ನು ಎಷ್ಟು ಅಲ್ಲಾಡಿಸಿದೆ, ಅದರ ವೃತ್ತಿಧರ್ಮದಿಂದ ಎಷ್ಟು ವಿಚಲಿತಗೊಳಿಸಿದೆ ಎಂದರೆ ಶೇಖರ್ ಗುಪ್ತರಂತಹವರೂ ಈ ಪರಿಣಾಮದಿಂದ ಹೊರತಾಗಿ ಉಳಿಯಲಾಗಿಲ್ಲ ಎನ್ನಬಹುದು. ಇವರೀಗ ಸಮಚಿತ್ತದ ವಿಶ್ಲೇಷಣೆಗಳಿಗಿಂತ ಸಮತೋಲನದ ವಿಶ್ಲೇಷಣೆಗಳ ಪ್ರಯತ್ನ ಮಾಡತೊಡಗಿದ್ದಾರೆ ಎನಿಸುತ್ತದೆ. ಅಂದರೆ ಮೋದಿ ಸರ್ಕಾರದ ನೀತಿಗಳನ್ನು ಟೀಕಿಸಿದ ಕಾರ್ಯಕ್ರಮ ಮಾಡಿದ್ದರಿಂದ ಚಿಂತಿತರಾದಂತೆ ಅದರ ಒಳ್ಳೆಯ ಅಂಶಗಳನ್ನು ಹುಡುಕಿ ಹೇಳುವ ಕಾರ್ಯಕ್ರಮಗಳನ್ನು ಸಂಯೋಜಿಸುವುದು. ಸರ್ಕಾರದ ರೀತಿ ನೀತಿಗಳ ಒಳ್ಳೆ ಅಂಶಗಳನ್ನು ಹೇಳಬಾರದು ಎಂದಲ್ಲ. ಆದರೆ ಅದು ರಾಜಕೀಯ ಸರಿದೂಗಿಸುವ ಕಾರ್ಯಚರಣೆಯ ಭಾಗವಾಗಿರಬಾರದು. ರಾಜಕೀಯ ವಿಚಾರ ಪ್ರಧಾನವಾದ ಮಾಧ್ಯಮಕ್ಕೆ ವಸ್ತುನಿಷ್ಠತೆ ಎಂಬುದೇ ಒಂದು ಅಸಂಗತ ಶಬ್ದವಾಗಿರಬೇಕೆಂದು ನಂಬಿರುವವನು ನಾನು. ಬದಲಾಗಿ ಅದಕ್ಕೊಂದು ಗಟ್ಟಿಯಾದ ತಾತ್ವಿಕ ಬೆನ್ನೆಲುಬಾಗಿ ಒಂದು ಸಂಪಾದಕೀಯ ನೀತಿ ಇರಬೇಕು. ವಿಶೇಷವಾಗಿ ಪ್ರಜಾಸತ್ತೆಯ ಮೂಲಭೂತ ಮೌಲ್ಯಗಳಿಗೇ ಧಕ್ಕೆ ಒದಗಿರುವ ಈ ದಿನಗಳಲ್ಲಿ. ಹಾಗಾಗಿ ನಮ್ಮ ರಾಜಕೀಯ ನಿಲುವು-ವಿಶ್ಲೇಷಣೆಗಳು ಈ ಸಂಪಾದಕೀಯ ಚೌಕಟ್ಟನ್ನು 'ವಸ್ತುನಿಷ್ಠತೆ'ಯ ಹೆಸರಿನಲ್ಲಿ ಉಲ್ಲಂಘಿಸುವಂತಿರಬಾರದು. ಕನಿಷ್ಟ, ಪರಿಸ್ಥಿತಿ ಬದಲಾಗುವವರೆಗಾದರೂ.

ಈ ದೀರ್ಘ ಪೀಠಿಕೆಗೆ ಮುಖ್ಯ ಕಾರಣವೆಂದರೆ ಈ ಶೇಖರ್ ಗುಪ್ತ ಅವರು ತಮ್ಮ ಇತ್ತೀಚಿನ 'ದ 'ನ್ಯಾಷನಲ್ ಇಂಟರೆಸ್ಟ್' ಕಾರ್ಯಕ್ರಮವೊಂದರಲ್ಲಿ ಮೋದಿ ಸರ್ಕಾರವನ್ನು ಹಿಂದೂ ಬಲಪಂಥೀಯ ಎನ್ನುವುದಕ್ಕಿಂತ ಹಿಂದೂ ಎಡಪಂಥೀಯ ಎಂದು ಕರೆಯಬಹುದಲ್ಲವೇ? ಎಂಬ ಪ್ರಶ್ನೆಯನ್ನು ಮುಂದಿಟ್ಟು ಅದಕ್ಕೆ ಪೂರಕವೆಂದು ಭಾವಿಸಿರುವ ಅಂಶಗಳನ್ನು ಪಟ್ಟಿ ಮಾಡಿರುವುದು. ಸಂದರ್ಭ ಒದಗಿ ಬಂದಾಗಲೆಲ್ಲ ಎಡಪಂಥ ಮತ್ತು ಅದರ ಒಂದು ರೂಪವಾದ ಸಮಾಜವಾದವನ್ನು ಟೀಕಿಸುವುದು, ಅದರ ಬಗ್ಗೆ ವ್ಯಂಗ್ಯವಾಡುವುದು ಶೇಖರ್ ಅವರ ಇತ್ತೀಚಿನ ಹವ್ಯಾಸವೇ ಆಗಿಹೋಗಿದೆ. ನೆಹರೂ-ಇಂದಿರಾಗಾಂಧಿಯವರ ಸಮಾಜವಾದ ದೇಶವನ್ನು ದಾರಿದ್ರ್ಯಕ್ಕೆ ತಳ್ಳಿತ್ತು ಮತ್ತು ಪಿ.ವಿ. ನರಸಿಂಹರಾವ್ ಮತ್ತು ಮನಮೋಹನ ಸಿಂಗ್ ಅವರ ಮುಕ್ತ ಮಾರುಕಟ್ಟೆ ನೀತಿಯಿಂದಾಗಿ ಅದೀಗ ಪ್ರಗತಿಯ ಹಾದಿಯಲ್ಲಿದೆ ಎಂದು ನಂಬಿರುವಂತೆ ತೋರುವ ಅವರ ಜಾಗತೀಕರಣ ಪರವಾದ ರಾಜಕೀಯ ತಾತ್ವಿಕ ನಿಷ್ಠೆಯನ್ನು ಯಾರೂ ಪ್ರಶ್ನಿಸಲಾರರು. ಆದರೆ ಅವರ ಪತ್ರಿಕಾ ವೃತ್ತಿ ಎಂಬುದು ಅದರ ಸಮರ್ಥನೆಗೆ ವೇದಿಕೆಯಾಗಬಾರದು. ಮೇಲೆ ಪ್ರಸ್ತಾಪಿಸಿದ ಶೇಖರ್ ಅವರು ಮೋದಿ ಸರ್ಕಾರಕ್ಕೆ ನೀಡಬಯಸಿರುವ ಹೊಸ ರಾಜಕೀಯ ಹಣೆಪಟ್ಟಿ ಅವರ ರಾಜಕೀಯಶಾಸ್ತ್ರ ಶಿಕ್ಷಣ ತುಂಬ ಬಡಕಲಾದದ್ದೆಂದು ಸೂಚಿಸುತ್ತದೆ. ಮೊದಲಾಗಿ ಎಡಪಂಥವೆನ್ನುವುದರ ಹೃದಯಭಾಗವಾಗಿರುವ ಸಮಾಜವಾದ ಬಹುರೂಪಿಯಾಗಿದ್ದು ವಿವಿಧ ವೇಷಗಳ ಕಮ್ಯೂನಿಸಂಗಳಲ್ಲದೆ ಭಾರತದ ರಾಜಕಾರಣದಲ್ಲೇ ನೆಹರೂ-ಇಂದಿರಾ ಗಾಂಧಿಯವರ ಸಮಾಜವಾದಗಳ ಹೊರತಾಗಿಯೂ ಪ್ರತಿಪಾದಿಸಲ್ಪಟ್ಟ ಮತ್ತು ಪ್ರಯೋಗಗೊಂಡ ಸಮಾಜವಾದಿ ರಾಜಕಾರಣದ ರೂಪಗಳಿವೆ ಎಂಬುದು ಅವರಿಗೆ ಗೊತ್ತಿದ್ದಂತಿಲ್ಲ. ಭಾರತದ ರಾಜಕೀಯ ಭೂಮಿಕೆಯನ್ನೇ ಪಲ್ಲಟಗೊಳಿಸಿದ ಮಂಡಲ್ ಆಯೋಗದ ರಾಜಕಾರಣ(ಅದರ ಉಪಪರಿಣಾಮಗಳ ಸಾಧಕ-ಬಾಧಕ ಚರ್ಚೆ ಬೇರೆ ವಿಷಯ) ಇಂತಹ ಸಮಾಜವಾದದ ಒಂದು ಪ್ರಯೋಗ ಎಂಬುದು ಅವರಿಗೆ ಗೊತ್ತಿದ್ದರೆ, ಉಜ್ವಲಾ, ಜನಧನ್, ಮುದ್ರಾ, ಕಿಸಾನ್ ಕಲ್ಯಾಣ್, ನಲ್ ಸೆ ಜಲ್ ಮುಂತಾದ ಮೋದಿ ಸರ್ಕಾರದ ಬಿಡಿ ಯೋಜನೆಗಳನ್ನು ಸಾರಾಸಗಟಾಗಿ ಎಡಪಂಥಿಯ ಎಂದು ಪರಿಗಣಿಸಿ ತಮ್ಮ ಮೋದಿ ಸರ್ಕಾರಕ್ಕೆ ಹೊಸ ನಾಮಕರಣ ಮಾಡುವ ಸಾಹಸಕ್ಕೆ ಕೈ ಹಾಕುತ್ತಿರಲಿಲ್ಲ. ಈ ಯೋಜನೆಗಳ ಒಟ್ಟು ಜನೋಪಯೋಗಿ ಪರಿಣಾಮದ ಕನಿಷ್ಟ ಹತ್ತಿಪ್ಪತ್ತು ಪಟ್ಟು ಪರಿಣಾಮ ಬೀರಿರುವ ಇಂದಿರಾ ಗಾಂಧಿಯವರ ಪಡಿತರ ವ್ಯವಸ್ಥೆ ಅಥವಾ ಮನಮೋಹನ ಸಿಂಗ್ ಅವರ 'ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ'ಯ ಬಗ್ಗೆ ಶೇಖರ್ ಗುಪ್ತ ಏನು ಹೇಳುವರೋ ತಿಳಿಯದು.

ಹೀಗಾಗಿ ಒಂದು ಸರ್ಕಾರವನ್ನು ಅದರ ಕೆಲ ಬಿಡಿ ಕಾರ್ಯಕ್ರಮಗಳನ್ನಷ್ಟೇ ಗಮನಿಸಿ ಒಂದು ರಾಜಕೀಯ ಸಿದ್ಧಾಂತ ರೂಪವಾಗಿ ಗುರುತಿಸಬಾರದು. ಶೇಖರ್ ಬಹುವಾಗಿ ಟೀಕಿಸುವ, ವಿರೋಧಿಸುವ ಸಮಾಜವಾದವೆಂದರೆ ಅದರ ವಿರೋಧಿಗಳು ದುರುದ್ದೇಶಪೂರ್ವಕವಾಗಿ ಛಾಪಿಸಿದಂತೆ 'ಪರ್ಮಿಟ್-ಲೈಸನ್ಸ್ ರಾಜ್ಯ'ವೇ ಆಗಬೇಕಿಲ್ಲ. ಅದೊಂದು ಇತಿಹಾಸ, ಅರ್ಥಶಾಸ್ತ್ರ ಮತ್ತು ಸಂಸ್ಕೃತಿಗಳನ್ನು ತನ್ನದೇ ವಿಶ್ಲೇಷಣೆ-ನಿಲುವುಗಳನ್ನು ಹೊಂದಿದ ಒಂದು ಸ್ವಯಂಪೂರ್ಣ ಮತ್ತು ಸಮಗ್ರ ಸಿದ್ಧಾಂತ. ಅದರ ಸಾವಯವ ಭಾಗವಾಗಿ ಹೊಮ್ಮಿದ ಕಾರ್ಯಕ್ರಮಗಳನ್ನಷ್ಟೇ ಸಮಾಜವಾದಿ ಅಥವಾ ಎಡಪಂಥೀಯ ಎಂದು ಕರೆಯಬಹುದು. ರಾಷ್ಟ್ರೀಯತೆಯ ಕಲ್ಪನೆಯನ್ನು ಒಂದು ಅಶ್ಲೀಲ ಅತಿಗೆ ಒಯ್ದು ದೇಶದ ಜನರನ್ನು ದೇಶಭಕ್ತ ಮತ್ತು ದೇಶದ್ರೋಹಿ ಎಂದು ವಿಂಗಡಿಸಬಯಸುವ, ತಮ್ಮ ರಾಷ್ಟ್ರೀಯತೆಯ ಆವೃತ್ತಿಗೆ ವಿರುದ್ಧವಾದವರನ್ನು ಗುಂಡಿಕ್ಕಿ ಕೊಲ್ಲಲು ಕರೆಕೊಡುವ ಪುಂಡರ ಬಗ್ಗೆ ಜಾಣ ಮೌನ ವಹಿಸಿ, ಧರ್ಮಗಳ ಅಧ್ಯಾತ್ಮಿಕತೆಯನ್ನೆಲ್ಲ ಕಳೆದು ಅವನ್ನು ಅನ್ಯದ್ವೇಷಿ ರಾಜಕೀಯ ರೂಪಗಳಿಗೆ ಇಳಿಸಿ ಈ ದ್ವೇಷದ ಭಾಗವಾಗಿ ಅನುಮಾನಗಳ ಮೇಲೆ ಜನರನ್ನು ಗುಂಪು ಹಲ್ಲೆಗೆ ಈಡು ಮಾಡುವುದನ್ನು ಪ್ರೋತ್ಸಾಹಿಸಬಯಸುವ, ಪ್ರಜಾಸತ್ತಾತ್ಮಕ ಆಡಳಿತದ ರಕ್ಷಣೆಗಾಗಿರುವ ಸಂಸ್ಥೆಗಳನ್ನು ಚುನಾವಣಾ ರಾಜಕೀಯ ಉದ್ದೇಶಗಳಿಗಾಗಿ ಬಳಸುವ, ಜನರ ಹಣದ

(೧೮ನೇ ಪುಟಕ್ಕೆ

# ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಡಿಸೆಂಬರ್ ಸಂಚಿಕೆ ಕೈಯಲ್ಲಿದೆ. ಸಂಪಾದಕೀಯದಲ್ಲಿ ನ್ಯಾಯಾಂಗ ವ್ಯವಸ್ಥೆ ಬಗ್ಗೆ ನೀವು ಬರೆದಿರುವ ಭರವಸೆಯ ಮಾತುಗಳೇ ನಮ್ಮನ್ನಿನ್ನು ಜೀವಂತವಾಗಿ ಇರಿಸಿವೆ. ಅದೊಂದೇ ಸದ್ಯದ ಆಶಾಕಿರಣ. ಇಡೀ ಸಂಚಿಕೆಯಲ್ಲಿ ತುಂಬಾ ಇಷ್ಟವಾದ ಬರಹ ಮಮತಾ ಪ್ರಭು ಅವರ ಕುಪ್ಪಳ್ಳಿಯ ಅನುಭವ ಕಥನ. ಚೆನ್ನಿ ಹಾಗೂ ಗುಹಾ ಬರಹ ಹೊಸ ನೋಟ ಕ್ರಮದಿಂದ ಗಮನ ಸೆಳೆಯುತ್ತವೆ.

**–ಲೋಕೇಶ ಅಗಸನಕಟ್ಟೆ**, ಚಿತ್ರದುರ್ಗ

ಡಿಸೆಂಬರ್ ಸಂಚಿಕೆಯ ಸಂಪಾದಕೀಯದಲ್ಲಿ ಬರೆದಿರುವಂತೆ ರೈತರ ಚಳುವಳಿಯಿಂದಾಗಿ ಜಡ್ಡುಗಟ್ಟಿದ್ದ ನಮ್ಮ ಪ್ರಜಾಪ್ರಭುತ್ವ ತನ್ನ ಕಸುವನ್ನು ಮರಳಿ ಪಡೆಯಲಿದೆ ಎಂಬುದು ನಿಜಕ್ಕೂ ಆಶಾದಾಯಕ ಬೆಳವಣಿಗೆ.

ಭೂಮಿಯ ತಾಪಮಾನ ಕಡಿಮೆಗೊಳಿಸಲು ಪಳೆಯುಳಿಕೆ ಇಂಧನಗಳ ಬಳಕೆ ತಗ್ಗಿಸುವ ಕುರಿತಾದ ಜಗತ್ತಿನ ರಾಷ್ಟ್ರಗಳು ಮಾಡುವ (ಈಡೇರಿಸುವ ಉದ್ದೇಶವೇ ಇರದ) ಪೊಳ್ಳು ಘೋಷಣೆಗಳಿಂದಾಗಿ ಗ್ಲಾಸ್ಗೋ ಸಮ್ಮೇಳನ ಮತ್ತೊಂದು ವಾರ್ಷಿಕ 'ಪ್ರಹಸನ' ಎಂಬಂತೆ ಭಾಸವಾಗುತ್ತಿದೆ. ಕಲ್ಲಿದ್ದಲು, ಪೆಟ್ರೋಲಿಯಂ ನಂತರ ಸೋಲಾರ ಶಕ್ತಿ ಮೂಲ ಕೂಡ ಆಳರಸರ ಆಪ್ತ ವರ್ಗದ ಪಾಲಾಗುವುದರಲ್ಲಿ ಸಂದೇಹವಿಲ್ಲ.

ಮಲ್ಲಿಕಾರ್ಜುನ ಹೊಸಪಾಳ್ಯ ಅವರ 'ಸಾಬರ ಮನೆಯಲ್ಲಿ ಜಂಗು, ಜೋಳಿಗೆ, ಗಂಟೆ, ಜಾಗಟೆ' ಕಥಾಪ್ರಬಂಧ ಚೇತೋಹಾರಿಯಾಗಿತ್ತು. ಓದುತ್ತಾ ಹೋದಂತೆ ನಮ್ಮ ಬಾಲ್ಯದ ದಿನಗಳಲ್ಲಿ ಶಿವರಾತ್ರಿ–ಮೊಹರಂ–ಹೋಳಿ ಹಬ್ಬಗಳನ್ನು ಗೆಳೆಯರೆಲ್ಲರ ಜೊತೆ ನಮ್ಮ ಜಾತಿ–ಭೇದ ಲೆಕ್ಕಿಸದೇ ಆಚರಿಸಿದ ಅನುಭವಗಳ ಸವಿನೆನಪು ತಂದಿತು.

ಸಿರಿ ತರುವ ಗರ ಹಾಗೂ ಅದಕ್ಕುತ್ತರವಾಗಿ ಪ್ರಕೃತಿ ನಮ್ಮನ್ನು ಶಿಕ್ಷಿಸುವ ಪರಿ–ಇವೆರಡನ್ನೂ ಚಿನೂಆ ಅಚಿಬೆ ಕತೆ (ಅನು: ಚನ್ನಪ್ಪ ಕಟ್ಟಿ) "ನಿವಾಳಿಸಿಟ್ಟ ಮೊಟ್ಟೆ" ಸ್ಪಷ್ಟವಾಗಿ ನಿರೂಪಿಸುತ್ತದೆ. ನಮ್ಮಲ್ಲೂ ಅಮಾವಾಸ್ಯೆಯ ದಿನ ಉಪ್ಪು–ಮೆಣಸಿನಕಾಯಿ–ನಿಂಬೆಹಣ್ಣು ನಿವಾಳಿಸಿ ಮೂರು ದಾರಿ ಸೇರುವ ಕೂಟದಲ್ಲಿ ಇಡುತ್ತಿದ್ದ ನೆನಪು ಬಂದು, ಹೇಗೆ ದೇಶ–ಕಾಲಗಳನ್ನು ಮೀರಿ ಮನುಷ್ಯನ (ಮೂಢ) ನಂಬಿಕೆ ಬದುಕನ್ನು ನಿಯಂತ್ರಿಸುತ್ತದೆ ಎಂಬುದು ಅಚ್ಚರಿ ಮೂಡಿಸುತ್ತದೆ.

**–ಸೋಮು**, ಹುಬ್ಬಳ್ಳಿ

ಸಾಹಿತ್ಯದ ವಿದ್ಯಾರ್ಥಿ/ಅಧ್ಯಾಪಕನಾದ ನಾನು ಪ್ರತಿ ತಿಂಗಳು 'ಹೊಸ ಮನುಷ್ಯ' ಪತ್ರಿಕೆ ಬಂದೊಡನೆ ಓದುವುದು ಸಂಪಾದಕರ ಸಾಂಸ್ಕೃತಿಕ ಬಿಡಿ ಟಿಪ್ಪಣಿಗಳನ್ನು; ನಂತರ ಪುಸ್ತಕಾವಲೋಕನದ ಬರಹಗಳನ್ನು. ನಿಮ್ಮ ಬಿಡಿ ಟಿಪ್ಪಣಿಗಳಲ್ಲಿ ತಿಂಗಳ ಸಾಹಿತ್ಯಿಕ–ಸಾಂಸ್ಕೃತಿಕ ವಿದ್ಯಮಾನಗಳನ್ನು ಎಷ್ಟು ಸೂಕ್ಷ್ಮವೋ ಅಷ್ಟೇ ತೀಕ್ಷ್ಣವಾಗಿ ನೋಡಿ ಅವುಗಳ ಬಗ್ಗೆ ಯಾರೂ ಮಾಡದ, ಮಾಡಲು ಹಿಂಜರಿಯುವಂತಹ ವ್ಯಾಖ್ಯಾನಗಳನ್ನು ಮಾಡುವ ಬಗೆ ನನಗೆ ಹೊಸ ಒಳನೋಟಗಳನ್ನು ನೀಡುವುದರಿಂದ ನನಗೆ ಇಷ್ಟವಾಗುತ್ತವೆ. ಡಿಸೆಂಬರ್ ಸಂಚಿಕೆಯಲ್ಲಿನ ಎಲ್ಲ ಟಿಪ್ಪಣಿಗಳೂ ನಿಷ್ಠುರ ಸತ್ಯಗಳಿಗೆ ಉದಾಹರಣೆಗಳಂತಿವೆ. ಪುನೀತ್ ರಾಜ್‌ಕುಮಾರ್ ಅವರ ಸಾವಿನ ಬಗ್ಗೆ ಅಭಿಮಾನದ ಶ್ರದ್ಧಾಂಜಲಿಗಳನ್ನು ಹೇಳುತ್ತಿರುವಾಗಲೇ ಈ ಸಂಬಂಧದ ಮುಖ್ಯಮಂತ್ರಿಗಳ ಘೋಷಣೆಯ ಅಸಮರ್ಪಕತೆಯ ಬಗ್ಗೆಯೂ ಬರೆದಿರುವುದು ನಿಮ್ಮ ಸಮತೋಲಿತ ಮತ್ತು ನಿಷ್ಠುರ ನಿಲುವಿಗೆ ಸಾಕ್ಷಿಯಂತಿದೆ. ಹಾಗೇ ಪದ್ಮ ಪ್ರಶಸ್ತಿಗಳ ಹಿಂದಿನ ಸಂಕುಚಿತ ರಾಜಕಾರಣ, ಕನ್ನಡಿಗರ ಉದ್ಯೋಗ ಮೀಸಲಾತಿ ಕುರಿತ ಭರವಸೆಗಳ ಹುಸಿತನ ಮತ್ತು ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಅವನತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗಳ ಬಗ್ಗೆ ಬರೆದಿರುವ ಮಾತುಗಳೂ ಕೂಡ.

ಇನ್ನು ನಿಮ್ಮ ಪತ್ರಿಕೆಯ ಪುಸ್ತಕಾವಲೋಕನಗಳು ನಿಜವಾದ ಸಾಹಿತ್ಯ ವಿಮರ್ಶೆಯ ಚಟುವಟಿಕೆಗಳು ಅಪರೂಪವಾಗುತ್ತಿರುವ ಇಂದಿನ ದಿನಗಳಲ್ಲಿ ಗುಣಮಟ್ಟದ ವಿಮರ್ಶೆ ಎಂದರೇನು ಎಂಬುದನ್ನು ಪರಿಚಯ ಮಾಡಿಕೊಡುತ್ತವೆ. ಇದಕ್ಕೆ ಮುಖ್ಯ ಕಾರಣ ನೀವು ವಿಮರ್ಶೆಗೆ ಆಯುವ ಪುಸ್ತಕಗಳು ಮತ್ತು ಅವಕ್ಕೆ ತಕ್ಕ ವಿಮರ್ಶಕರ ಗುಣಮಟ್ಟ. ಈ ಬಾರಿಯ ಐದೂ ಪುಸ್ತಕಾವಲೋಕನಗಳು, ಪುಸ್ತಕಗಳ ವೈವಿಧ್ಯದಿಂದಷ್ಟೇ ಅಲ್ಲ, ಅವುಗಳ ಬಗ್ಗೆ ಬರೆಯಲಾಗಿರುವ ವಿಮರ್ಶೆಯ ರೀತಿಗಳಿಂದಲೂ ಗಮನ ಸೆಳೆಯುವಂತಿವೆ. 'ಡ್ಯೂಯೆಟ್' ಎಂಬ ಇಂದಿಗೆ ಬಹು ಪ್ರಸ್ತುತವಾದ ಅಧ್ಯಯನಶೀಲ ಪುಸ್ತಕದ ಬಗ್ಗೆ ನನಗೆ ತಿಳಿದಂತೆ ಕನ್ನಡದ ಯಾವ ಪತ್ರಿಕೆಯೂ ಬರೆದಂತಿಲ್ಲ.

ಈ ಸಂಚಿಕೆಯಲ್ಲಿ ನನಗೆ ಬಹು ಇಷ್ಟವಾದ ಇನ್ನೊಂದು ಲೇಖನವೆಂದರೆ 'ಸಾಬರ ಮನೆಯಲ್ಲಿ ಜಂಗು, ಜೋಳಿಗೆ, ಗಂಟೆ, ಜಾಗಟೆ' ಎಂಬ ಮಲ್ಲಿಕಾರ್ಜುನ ಹೊಸಪಾಳ್ಯ ಅವರ ಲೇಖನ. ಈ ಲೇಖನ, ಕೇವಲ ಒಂದು–ಒಂದೂವರೆ ದಶಕದಲ್ಲಿ ಧಾರ್ಮಿಕ ಸಾಮರಸ್ಯದ ವಿಷಯದಲ್ಲಿ ಈ ದೇಶದಲ್ಲಿ ಎಂತಹ ಅವನತಿಯನ್ನುಂಟು ಮಾಡಲಾಗಿದೆ ಎಂಬುದನ್ನು ಸೂಚಿಸುತ್ತಾ ತೀವ್ರ ವಿಷಾದವನ್ನು ಹುಟ್ಟಿಸುತ್ತದೆ.

**–ಎಸ್.ಟಿ. ನಾಗೇಂದ್ರ ಪ್ರಸಾದ್**, ಮೈಸೂರು

'ಹೊಸ ಮನುಷ್ಯ'ದ ಡಿಸೆಂಬರ್ ೨೦೨೧ರ ಸಂಚಿಕೆಯ ನಿಮ್ಮ 'ಸಂಪಾದಕರ ಟಿಪ್ಪಣೆಗಳು', ವರ್ತಮಾನದ ರಾಷ್ಟ್ರ ಮತ್ತು ರಾಜ್ಯದ ರಾಜಕೀಯ ವಿದ್ಯಮಾನಗಳನ್ನು ಕನ್ನಡಿ ಹಿಡಿದ ಹಾಗೆ ಪ್ರತಿಫಲಿಸಿ ತೋರಿಸಿದೆ. ಆಳುವವರಿಗೆ ಅಧಿಕಾರವೇ ಪ್ರಮುಖವಾದಾಗ, ತೆಗೆದುಕೊಳ್ಳುವ ಯಾವುದೇ ನಿರ್ಧಾರವು ಆ ಅಧಿಕಾರವನ್ನು ಸಮರ್ಥಿಸಿಕೊಳ್ಳುವ ಮತ್ತು ಅದನ್ನು ಉಳಿಸಿಕೊಳ್ಳುವ ಹುನ್ನಾರದವೇ ಆಗಿರುತ್ತವೆ. ಇಲ್ಲಿ ಜನಹಿತಕ್ಕಿಂತ ಮುಖ್ಯವಾಗಿ ಆಳುವ ಪಕ್ಷಗಳ ರಾಜಕೀಯ ಹಿತಾಸಕ್ತಿಯೇ ಪ್ರಮುಖವಾಗಿರುತ್ತದೆ ಎಂಬುದನ್ನು ಸದ್ಯದ ರಾಜಕೀಯ ಪರಿಸ್ಥಿತಿ ಸ್ಪಷ್ಟವಾಗಿ ಸಾಬೀತು ಮಾಡುತ್ತಿದೆ. ಒಂದು ಸುವ್ಯವಸ್ಥೆಯ ಗಾಢ ಅಪೇಕ್ಷೆಯಾಗಿ ಇದನ್ನೆಲ್ಲ ಯಥಾವತ್ತಾಗಿ ತೋರಿಸಿರುವ ನಿಮ್ಮ ಬರವಣಿಗೆಯ ಹಿಂದೆ ಜನಹಿತದ ಕಾಳಜಿ ಎದ್ದು ಕಾಣುತ್ತದೆ.

ಪತ್ರಿಕೆಯ ಉಳಿದೆಲ್ಲ ಲೇಖನಗಳೂ ಅರಿವಿನ ವಿಸ್ತರಣೆಯ ಜೊತೆಗೆ ವರ್ತಮಾನದಲ್ಲಿ ರೂಢಿಸಿಕೊಳ್ಳಬೇಕಾಗಿರುವ ಚಿಂತನಾಕ್ರಮದ ಬಗ್ಗೆ ಜಾಗೃತಿ ಮೂಡಿಸುತ್ತವೆ. ಇಂದು ಮೂಡಿಸಿಕೊಳ್ಳಬೇಕಿರುವ ಎಚ್ಚರಕ್ಕೆ 'ಹೊಸ ಮನುಷ್ಯ' ಮಹತ್ವದ ಮಾರ್ಗಸೂಚಿಯಾಗಿದೆ.

ನಿಮ್ಮ ಈ ನಿರಂತರ ಶ್ರಮಕ್ಕೆ ಅಭಿನಂದನೆಗಳು.

**–ಬಸವರಾಜ ಸಾದರ**. ಬೆಂಗಳೂರು

ಎಂದಿನಂತೆ ಡಿಸೆಂಬರ್ ಸಂಚಿಕೆ ಸಮೃದ್ಧವಾಗಿ ಬಂದಿದೆ. ನಿಮ್ಮ ಟಿಪ್ಪಣಿಗಳು ಬಿಡಿ ಟಿಪ್ಪಣಿಗಳಲ್ಲಿ ಪ್ರಚಲಿತ ವಿಷಯಗಳ ವಿಶ್ಲೇಷಣೆ ವಸ್ತುನಿಷ್ಠವಾಗಿದೆ. ನಾಗೇಶ ಹೆಗಡೆ, ಗುಹಾ, ಚೆನ್ನಿ ಅವರ ಲೇಖನಗಳು ಆಯಾ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಚೆನ್ನಪ್ಪ ಕಟ್ಟಿಯವರು ಚಿನುಆ ಅಚಿಬೆ ಅವರ ಕಥೆಯನ್ನು ಕನ್ನಡದ ಜಾಯಮಾನಕ್ಕೆ ಒಗ್ಗುವಂತೆ ಸಮರ್ಥವಾಗಿ ಅನುವಾದಿಸಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಈ ಸಂಚಿಕೆಯಲ್ಲಿನ ಕುಪ್ಪಳಿಯ ಎರಡು ದಿನಗಳ ಶಿಬಿರದ ಅನುಭವ ಕಥನವನ್ನು ಮಮತಾ ಪ್ರಭು ಅವರು ಪ್ರತ್ಯಕ್ಷ ನಾವೇ ಶಿಬಿರದಲ್ಲಿ ಪಾಲ್ಗೊಂಡಿದ್ದೇವೊ ಎನ್ನುವಷ್ಟರ ಮಟ್ಟಿಗೆ ಕಟ್ಟಿಕೊಟ್ಟಿದ್ದಾರೆ. 'ಪರ್ಯಾಯ ಜೀವನ ಪದ್ಧತಿ' ವಿಚಾರವಾಗಿ ತಮ್ಮ ತಮ್ಮ ಅನುಭವವನ್ನು, ಸಂಜೀವ ಕುಲಕರ್ಣಿ, ರಾಘವ, ಸಚ್ಚಿದಾನಂದ, ಮಮತಾ ರೈ, ಮಲ್ಲಿಕಾರ್ಜುನ ಹೊಸಪಾಳ್ಯ ಅವರು ಅನುಭವ ಮಂಟಪದಲ್ಲಿ ನಿವೇದಿಸಿಕೊಂಡಂತೆ ಮನಮುಟ್ಟುವಂತೆ ವಿವರಿಸಿದ್ದಾರೆ. ಈ ಐವರನ್ನು ನಾನು ನಮ್ಮ ಕಾಲಮಾನದ ಸಂತರೆಂದು ಪರಿಭಾವಿಸಿದ್ದೇನೆ. ಏಕೆಂದರೆ ನಮ್ಮ ಕನ್ನಡ ಪರಂಪರೆಯ ಹೆಮ್ಮೆ ನಡೆ–ನುಡಿ ಸಿದ್ಧಾಂತ, ಆ ಪರಂಪರೆಯಲ್ಲೇ ನಡೆದು ನುಡಿದಿದ್ದಾರೆ. ಈ ಸಂತರು unsung heros. ಈ ಐವರಿಗೂ, ಇಂತಹ ಅರ್ಥಪೂರ್ಣ ಶಿಬಿರ ಏರ್ಪಡಿಸಿದ ಸಂಬಂಧಿಸಿದ ಎಲ್ಲರಿಗೂ, ಕಣ್ಣಿಗೆ ಕಟ್ಟುವಂತೆ ಈ ಕಥನವನ್ನು ಕಟ್ಟಿ ಕೊಟ್ಟಿರುವ ಮಮತಾ ಪ್ರಭು ಅವರಿಗೂ ಸಾವಿರ ಶರಣು. 'ಸಾಬರ ಮನೆಯಲ್ಲಿ ಜಂಗು.. ' ಲೇಖನದಲ್ಲಿ ತಮ್ಮ ಸವಿನೆನಪನ್ನು ಬಹಳ ಮನೋಜ್ಞವಾಗಿ ಹಂಚಿಕೊಂಡಿರುವ ಹೊಸಪಾಳ್ಯರಿಗೆ ಮತ್ತೊಂದು ನಮನ.

**–ಸಿ.ಚನ್ನಬಸವಣ್ಣ**, ಬಳ್ಳಾರಿ

ಡಿಸೆಂಬರ್ ತಿಂಗಳ ಹೊಸ ಮನುಷ್ಯ ಅನೇಕ ರೀತಿಯಲ್ಲಿ ಉತ್ತಮ ಗುಣಮಟ್ಟದ ಸಂಚಿಕೆ. ಸಂಪಾದಕೀಯದಲ್ಲಿ ಕೃಷಿ ಕಾಯಿದೆ, ಪೆಗಾಸಸ್ ಹಾಗೂ ಬಿಟ್ ಕಾಯಿನ್ ಹಗರಣ ಕುರಿತು ಗಂಭೀರವಾಗಿ ವಸ್ತುನಿಷ್ಠವಾದ ವಿಶ್ಲೇಷಣೆ ಇದೆ. ನಿಮ್ಮ ನಿಷ್ಠುರವಾದ ಮಾತುಗಳು ಆಳುವ ವರ್ಗಕ್ಕೆ ಮುಟ್ಟಬೇಕು.

ನಾಗೇಶ ಹೆಗಡೆ, ರಾಜೇಂದ್ರ ಚೆನ್ನಿ, ರಾಮಚಂದ್ರ ಗುಹಾ ಅವರ ಲೇಖನಗಳು ಸಂಚಿಕೆಯ ಉತ್ತಮ ಲೇಖನಗಳು. ಚೆನ್ನಿ ಅವರು ಅಂಬೇಡ್ಕರ್ ಅವರ ಮತಾಂತರ ಕುರಿತ ನೋಟದಲ್ಲಿ ಹಿಂದೂ ಧರ್ಮದ ಕ್ರೂರ ಅಸಮಾನತೆಗಳನ್ನು ಎಳೆಯಾಗಿ ಎಳೆಯಾಗಿ ವಿವರಿಸಿದ್ದಾರೆ ಮತ್ತು ಅದಕ್ಕೆ ಅಂಬೇಡ್ಕರ್ ಪ್ರತಿಕ್ರಿಯೆ ಹೇಗೆ ಸೂಕ್ತವಾಗಿತ್ತು ಎಂಬುದನ್ನು ವಿಶ್ಲೇಷಿಸಿದ್ದಾರೆ.

ವ್ಯಂಗ್ಯ ಹೊಗಳಿಕೆ ತಿಳಿಯಾದ ಲಘು ಹಾಸ್ಯದ ದಾಟಿಯ ಲಂಕೇಶ್ ಕುರಿತ ಬಿ.ಚಂದ್ರೇಗೌಡರ ಕೃತಿಯ ವಿಮರ್ಶೆ, ಜೊತೆಗೆ ಸಬಿತಾ ಬನ್ನಾಡಿ ಮತ್ತು ಜಿ. ಪಿ. ಬಸವರಾಜು ಅವರು ಮಾಡಿರುವ ಪುಸ್ತಕಾವಲೋಕನಗಳು ಸಂಚಿಕೆಯ ಗುಣಮಟ್ಟವನ್ನು ದ್ವಿಗುಣಗೊಳಿಸಿವೆ. ಉಳಿದಂತೆ ಕಸಾಪದ ಚುನಾಯಿತ ನೂತನ ಅಧ್ಯಕ್ಷರ ಬಗೆಗಿನ ನಿಮ್ಮ ಗುಣವಾಚಕ ಅರ್ಥವತ್ತಾಗಿದೆ. ಒಟ್ಟಾರೆ ಒಂದು ಮೌಲ್ಯಯುತ ಸಂಚಿಕೆಯನ್ನು ನೀಡಿದ ನಿಮಗೆ ವಿಶೇಷ ಅಭಿನಂದನೆಗಳು.

**–ಟಿ.ಎಸ್. ದಕ್ಷಿಣಾಮೂರ್ತಿ**, ಬೆಂಗಳೂರು

ನಮ್ಮ ಹೊಸ ಮನುಷ್ಯ ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಅರ್ಹತೆ ಇಲ್ಲದಿರುವ ವ್ಯಕ್ತಿಗಳ ಫೋಟೋಗಳನ್ನು ದಯವಿಟ್ಟು ಅಚ್ಚು ಮಾಡಬೇಡಿ. ಅಕ್ಷರಗಳಲ್ಲಿ ಅವರಿಗೆ ಮಾಡಿರುವ ಮಂಗಳಾರತಿಯೇ ಸಾಕು ಎನಿಸುತ್ತದೆ. ನಿಮ್ಮ ಬಿಡಿ ಟಿಪ್ಪಣಿಗಳ ಪುಟದ ಬಗ್ಗೆ ಈ ಮಾತುಗಳು.

**–ಎನ್.ಆರ್. ವಿಶುಕುಮಾರ್**, ಬೆಂಗಳೂರು

ನಮ್ಮ ಸಮಾಜವಾದಿಗಳು

# ಶಿಕಾರಿಪುರದ ಸಮಾಜವಾದಿ ನಾಯಕ ಅಂಗಡಿ ಷಣ್ಮುಖಪ್ಪ



ಸಮಾಜವಾದಿ ಚಳುವಳಿಯ ಏಳುಬೀಳುಗಳನ್ನು ಕಂಡ ಷಣ್ಮುಖಪ್ಪ ಅಂಗಡಿ ಅವರಿಗೀಗ ೮೬ ವರ್ಷ ವಯಸ್ಸು. ಶಿಕಾರಿಪುರದ ಹೊಳಿಯಪ್ಪ-ಈರಮ್ಮ ಅವರ ಮಗನಾದ ಷಣ್ಮುಖಪ್ಪ ಅವರು ಓದಿದ್ದು ಎಸ್ಸೆಸ್ಸೆಲ್ಸಿವರೆಗೆ ಮಾತ್ರ. ಇವರನ್ನು ಸಮಾಜವಾದಿ ಚಳುವಳಿಯತ್ತ ಸೆಳೆದಿದ್ದು ಅವರ ಓದಿನ ಆಸಕ್ತಿ. ೨೨-೨೩ ವಯಸ್ಸಿನವರಾಗಿದ್ದಾಗಲೇ ಅವರು ಸಮಾಜವಾದಿ ಚಳವಳಿಯತ್ತ ಆಕರ್ಷಿತರಾದರು.. ರಾಮ ಮನೋಹರ ಲೋಹಿಯಾ ಅವರ ಬರಹಗಳು ಅವರನ್ನು ಅತ್ತ ಸೆಳೆದಿದ್ದವು.. ಲೋಹಿಯಾ ಸಂಪಾದಕತ್ವದ ಮ್ಯಾನ್‌ಕೈಂಡ್ ಪತ್ರಿಕೆಯ ಚಂದಾದಾರರಾಗಿ ತಮ್ಮ ಜ್ಞಾನ ವೃದ್ಧಿಸಿಕೊಂಡರು. ಸುದೀರ್ಘ ಕಾಲ ಸಮಾಜವಾದಿ ಚಳುವಳಿಯ ಕಾರ್ಯಕರ್ತರಾಗಿದ್ದ ಷಣ್ಮುಖಪ್ಪ ಅವರು ತಮ್ಮ ತಮ್ಮ ಜೀವನದ ಬಹುಕಾಲವನ್ನು ಇದಕ್ಕಾಗಿ ಮುಡಿಪಾಗಿಟ್ಟರು.

ಯಾಕೆ ಸಮಾಜವಾದಿ ಚಳುವಳಿಯತ್ತ ಹೋದ್ರಿ ಅಂತ ಕೇಳಿದ್ರೆ, ಸಮಾಜಸೇವೆ ಮಾಡಬೇಕು ಅಂತ ಆಸೆ ಇತ್ತು. ಯಾವುದಾದರೂ ಮಠದ ಸ್ವಾಮಿ ಆಗೋ ಬದಲು ಸಮಾಜವಾದಿ ಪಾರ್ಟಿ ಸೇರಿದೆ ಅಂತಾರೆ ಅವರು.

ಎಸ್ಸೆಸ್ಸೆಲ್ಸಿ ನಂತರ ಷಣ್ಮುಖಪ್ಪ ತಮ್ಮ ಕುಟುಂಬದ ಕಿರಾಣಿ ಅಂಗಡಿ, ಹಿಟ್ಟಿನ ಗಿರಣಿಯಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಕನ್ನಡ ಸಾಹಿತ್ಯದ, ವಿಶೇಷವಾಗಿ ವೈಚಾರಿಕ ಸಾಹಿತ್ಯದ ಆಸಕ್ತ ಓದುಗರಾಗಿದ್ದ ಯುವಕ ಷಣ್ಮುಖಪ್ಪ, ೬೦ರ ದಶಕದಲ್ಲಿಯೇ ಗೆಳೆಯರ ಬಳಗ ಎಂಬ ಗುಂಪೊಂದನ್ನು ಕಟ್ಟಿಕೊಂಡು ವಾಚನಾಲಯವನ್ನು ಆರಂಭಿಸಿದ್ದರು. ಇದಕ್ಕಾಗಿ ತಾಲೂಕು ಕಛೇರಿ ರಸ್ತೆಯಲ್ಲಿ ಕೋಣೆಯೊಂದನ್ನು ಬಾಡಿಗೆ ತೆಗೆದುಕೊಂಡು ತಮ್ಮ ಸಂಗ್ರಹದಲ್ಲಿಯೇ ಇದ್ದ ಪುಸ್ತಕಗಳನ್ನು ಅಲ್ಲಿಟ್ಟಿದ್ದರು. ರಾಷ್ಟ್ರಮಟ್ಟದಲ್ಲಿ ಪ್ರಕಟವಾಗುತ್ತಿದ್ದ ಹಲವು ಪತ್ರಿಕೆಗಳ ಚಂದಾದಾರರಾಗಿದ್ದ ಇವರು ಸಾಂಸ್ಕೃತಿಕ ಚಟುವಟಿಕೆಯಲ್ಲಿಯೂ ಸಹ ಮುಂಚೂಣಿಯಲ್ಲಿರುತ್ತಿದ್ದರು. ಸಾಹಿತಿಗಳನ್ನು ಶಿಕಾರಿಪುರಕ್ಕೆ ಆಹ್ವಾನಿಸಿ ಕಾರ್ಯಕ್ರಮವನ್ನ ಮಾಡಿದರು. ಇವರ ಕಾರಣದಿಂದ ಬೀಚಿ ಶಿಕಾರಿಪುರಕ್ಕೆ ಬಂದಿದ್ದರು. ಹಲವು ನಾಟಕ ತಂಡಗಳನ್ನ ಶಿಕಾರಿಪುರಕ್ಕೆ ಕರೆಸಿ ಪ್ರದರ್ಶನ ಆಯೋಜಿಸಿದ್ದಾರೆ. ಗೆಳೆಯರ ಬಳಗದಿಂದ ನಾಟಕವನ್ನೂ ಆಡುತ್ತಿದ್ದರು. ಈ ಎಲ್ಲ ಚಟುವಟಿಕೆಗಳ ನಡುವೆಯೇ ಶಿಕಾರಿಪುರದಲ್ಲಿ ಅವರು ಸಮಾಜವಾದಿಗಳ ದೊಡ್ಡ ಗುಂಪೊಂದನ್ನು ಸಂಘಟಿಸಿದರು. ಇದೇ ಸಂದರ್ಭದಲ್ಲಿ ಅವರನ್ನು ಗೆಳೆಯರೆಲ್ಲರೂ ಸೇರಿ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷರನ್ನಾಗಿ ಮಾಡಿದರು. ಈ ಬ್ಯಾಂಕಿನಲ್ಲಿ ನಡೆಯುತ್ತಿದ್ದ ಅವ್ಯವಹಾರಗಳನ್ನು ಬಯಲಿಗೆಳೆದದ್ದಲ್ಲದೆ ಬ್ಯಾಂಕಿನ ಹಲವು ನಿರ್ದೇಶಕರುಗಳ ಪ್ರಭಾವ-ಒತ್ತಡಗಳನ್ನು ಲೆಕ್ಕಿಸದೆ ಅವ್ಯವಹಾರಗಳಲ್ಲಿ ತೊಡಗಿದವರಿಗೆ ಶಿಕ್ಷೆಯಾಗುವಂತೆ ಪಟ್ಟುಹಿಡಿದು ನೋಡಿಕೊಂಡದ್ದು ಅವರ ಸಮಾಜಮುಖಿ ಬದುಕಿನ ಮೊದಲ ದೊಡ್ಡ ಹೆಜ್ಜೆ. ಇದರಿಂದಾಗಿ ಈ ಷಣ್ಮುಖಪ್ಪ ಅವರು ತಮ್ಮ ವೈಯಕ್ತಿಕ ಜೀವನದಲ್ಲೂ ಕಷ್ಟ ಅನುಭವಿಸಬೇಕಾಗಿ ಬಂತು. ಅವರ ಅಂಗಡಿ ವ್ಯವಹಾರಕ್ಕೆ ತೊಂದರೆ ಮಾಡಲಾಯಿತು. ಈ ಕಷ್ಟ-ನಷ್ಟಗಳ ನಡುವೆಯೇ ಷಣ್ಮುಖಪ್ಪ ಅವರು ಟಿ. ವೆಂಟಕಪ್ಪ, ಎಂ.ಎಸ್.ರಾಮಕೃಷ್ಣ ಉರಾಳ, ಟಿ.ಹೆಚ್.ಮಹದೇವ, ರಾಮಲಿಂಗಪ್ಪ, ಶಿವಣ್ಣ ಮುಂತಾದವರೊಡಗೂಡಿ ಶಿಕಾರಿಪುರದಲ್ಲಿ ಚಳುವಳಿಯನ್ನು ಕಟ್ಟಿದರು. ಎಸ್.ಎಸ್. ಕುಮುಟ ಸೇರಿದಂತೆ ಹಲವು ಸಮಾಜವಾದಿ ನಾಯಕರನ್ನು ಶಿಕಾರಿಪುರಕ್ಕೆ ಆಹ್ವಾನಿಸಿ ರಾಜಕೀಯ ಕಾರ್ಯಕ್ರಮ ಆಯೋಜಿಸುವಲ್ಲಿ ತಮ್ಮ ಪಾಲು ನೀಡಿದ್ದರು. ನಂತರ ಷಣ್ಮುಖಪ್ಪ ಅವರು ಡಾ. ರಾಮ ಮನೋಹರ ಲೋಹಿಯಾ ಅವರನ್ನು ಶಿಕಾರಿಪುರಕ್ಕೆ ಕರೆಸಿದ್ದರಂತೆ. ಪುರಸಭೆಯಲ್ಲಿ ಪೌರ ಸನ್ಮಾನ ಕಾರ್ಯಕ್ರಮವದು. ಎತ್ತಿನ ಗಾಡಿಯ ಮೂಲಕ ಅದ್ದೂರಿ ಮೆರವಣಿಗೆ ಮಾಡಲು ಮುಂದಾಗಿದ್ದರು. ಅದನ್ನು ನೋಡಿದ ಲೋಹಿಯಾ ಅವರು ವಿರೋಧಿಸಿ ಕಾಲ್ನಡಿಗೆಯಲ್ಲಿಯೇ ಕಾರ್ಯಕ್ರಮ ಸ್ಥಳಕ್ಕೆ ಬಂದರು. ಅಲ್ಲಿಯೂ ಅವರು ಹಾರ ಹಾಕಿಸಿಕೊಳ್ಳಲಿಲ್ಲ ಅಂತ ನೆನಪಿಸಿಕೊಳ್ಳುತ್ತಾರೆ ಷಣ್ಮುಖಪ್ಪ ಅವರು. ಇನ್ನೋರ್ವ ಹಿರಿಯ ಸಮಾಜವಾದಿ ನಾಯಕ ಮಧು ಲಿಮಯೆಯವರನ್ನು ಸಹ ಶಿಕಾರಿಪುರಕ್ಕೆ ಒಮ್ಮೆ ಕರೆಸಿಕೊಂಡಿದ್ದನ್ನೂ ಇವರು ನೆನಪಿಸಿಕೊಳ್ಳುತ್ತಾರೆ. ೧೯೬೭ರ ಚುನಾವಣೆ ವೇಳೆಗೆ ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಜೆ.ಹೆಚ್. ಪಟೇಲ್, ಶಿಕಾರಿಪುರ ವಿಧಾನಸಭಾ ಕ್ಷೇತ್ರದಿಂದ ಜಿ. ಬಸವಣ್ಯಪ್ಪ ಅವರು ಸಮಾಜವಾದಿ ಅಭ್ಯರ್ಥಿಗಳಾಗಿದ್ರು. ಷಣ್ಮುಖಪ್ಪ ಅವರು ಅತ್ಯಂತ ಕ್ರಿಯಾಶೀಲರಾಗಿ ಭಾಗವಹಿಸಿದ ಚುನಾವಣೆ ಇದು. ಇಬ್ಬರೂ ಗೆದ್ದಿದ್ದರು.

ಶಿಕಾರಿಪುರ ತಾಲೂಕಿನ ಮನ್ನಾ ಜಂಗಲ್‌ನಲ್ಲಿ ಬಗರ್ ಹುಕುಂ ಮಾಡಿದ್ದ ರೈತರನ್ನು ಒಕ್ಕಲೆಬ್ಬಿಸಲು ಸರ್ಕಾರ ಮುಂದಾದಾಗ ಈ ಹೋರಾಟದಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡರು. ಈ ಚಳುವಳಿಯಲ್ಲಿ ಕೇಸು ದಾಖಲಾಗಿ ನ್ಯಾಯಾಲಯಕ್ಕೆ ಹಾಜರಾದವರಿಗೆ ಜಾಮೀನು ನೀಡುವ ಕೆಲಸ ವಹಿಸಿಕೊಂಡು ಹಲವರು ಜೈಲಿಗೆ ಹೋಗುವುದನ್ನ ತಪ್ಪಿಸಿದ್ದರು. ಕೈಯಲ್ಲಿ ಹಣವಿಲ್ಲದೇ, ಭೂಮಿ ಇಲ್ಲದೇ ಏನು ಮಾಡಬೇಕೆಂದು ದಿಕ್ಕು ತೋಚದವರಿಗೆ ದಾರಿ ತೋರಿಸಿದವರು ಷಣ್ಮುಖಪ್ಪ. ಇದೇ ಸಂದರ್ಭದಲ್ಲಿನ ಷಣ್ಮುಖಪ್ಪ ಅವರ ಇನ್ನೊಂದು ಸಾಧನೆ ಎಂದರೆ, ಶಿಕಾರಿಪುರದಲ್ಲಿ ಸಮಾಜವಾದಿಗಳ ಗುಂಪಿನ ಜೊತೆಗೂಡಿ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಸ್ಥಾಪಿಸಿದ್ದು. ಇಂದು ಈ ಬ್ಯಾಂಕ್ ಬೃಹತ್ತಾಗಿ ಬೆಳೆದಿದೆ. ಶಿಕಾರಿಪುರ ಟೌನ್ ಕ್ಲಬ್ ಆರಂಭಿಸಬೇಕೆಂಬ ಮೊದಲ ಚಿಂತನೆ ಇವರ ಬಳಗದ್ದೇ ಆಗಿತ್ತು.

ಆದರೆ ದೇಶದಲ್ಲಿ ಬದಲಾಗುತ್ತಿದ್ದ ರಾಜಕೀಯ ಪರಿಸ್ಥಿತಿಗಳು ಇವರನ್ನು ಹಲವು ಬಾರಿ ಸ್ವವಿಮರ್ಶೆಗೆ ಗುರಿಪಡಿಸಿದವು. ಅದರಲ್ಲೂ ಪ್ರಮುಖವಾಗಿ ೧೯೭೭ರಲ್ಲಿ ಸಮಾಜವಾದಿ ಪಕ್ಷ ಜನತಾ ಪಕ್ಷವೆಂಬ ಹೊಸ ಪಕ್ಷದಲ್ಲಿ ಲೀನವಾಗಿ, ನಂತರದ ಬೆಳವಣಿಗೆಗಳಲ್ಲಿ ಸಮಾಜವಾದಿಗಳೆಲ್ಲ ಬೇರೆಬೇರೆ ಪಕ್ಷಗಳಿಗೆ ವಲಸೆ ಹೋಗಿದ್ದು ಇವರನ್ನು ರಾಜಕೀಯ ವಿಮುಖರನ್ನಾಗಿ ಮಾಡಿತು. ಅವತ್ತು ಸಮಾಜವಾದಿ ಪಕ್ಷವನ್ನು ಉಳಿಸಿಕೊಂಡಿದ್ದರೆ ಇಡೀ ರಾಷ್ಟ್ರದಲ್ಲಿ ಇಂದಿಗೂ ಪರ್ಯಾಯ ರಾಜಕಾರಣದ ಕೇಂದ್ರವಾಗಿರುತ್ತಿತ್ತು ಅಂತ ನಂಬುತ್ತಾರೆ ಷಣ್ಮುಖಪ್ಪ ಅವರು. ೧೯೭೭ರ ನಂತರ ನಾನು ಯಾವ ರಾಜಕೀಯ ಪಕ್ಷವನ್ನೂ ಸೇರಲಿಲ್ಲ. ಏಕೆಂದರೆ ಯಾವ ಪಕ್ಷದಲ್ಲಿಯೂ ಸಹ ನಾನು ನಂಬಿದ ಸಿದ್ಧಾಂತ ಇರಲಿಲ್ಲ. ಹಾಗಾಗಿ ನನ್ನ ಸಮಾಜಮುಖಿ ಚಟುವಟಿಕೆಗಳ ಗುರಿಯನ್ನ ಬೇರೆಡೆಗೆ ತಿರುಗಿಸಿದೆ ಅನ್ನುತ್ತಾರೆ ಅವರು.

ನಂತರ ಷಣ್ಮುಖಪ್ಪ ಅವರು ರೈತ ಚಳುವಳಿಯತ್ತ ಮುಖ ತಿರುಗಿಸಿದರು. ಈ ೮೬ರ ಇಳಿವಯಸ್ಸಿನಲ್ಲೂ ಅವರು ಕರ್ನಾಟಕ ರಾಜ್ಯ ರೈತ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಸಮಾಜವಾದಿ ಚಳುವಳಿ ಉಳಿದು ಬೆಳೆದಿದ್ದರೆ ಅದು ಇಂದಿನ ರೈತ ಹೋರಾಟದ ನೇತೃತ್ವ ವಹಿಸಿ ಒಂದು ದೊಡ್ಡ ರಾಜಕೀಯ ಶಕ್ತಿಯಾಗಬಹುದಿತ್ತು ಎಂಬುದು ಅವರನ್ನು ಈಗಲೂ ಕಾಡುವ ಕೊರಗು.

-ಹೊನ್ನಾಳಿ ಚಂದ್ರಶೇಖರ್

‘ಹೊಸ ಮನುಷ್ಯ’ದ ಹತ್ತನೇ ವಾರ್ಷಿಕೋತ್ಸವದ ವಿಶೇಷ ಸಂಚಿಕೆ (ಫೆಬ್ರವರಿ, ೨೦೨೨)

ರಾಜಕೀಯ, ಸಾಮಾಜಿಕ-ಸಾಂಸ್ಕೃತಿಕ-ಸಾಹಿತ್ಯಿಕ ಬರಹಗಳ ಓದು ಹಬ್ಬ!

ನಮ್ಮ ಲೇಖಕರು:

ಚೆನ್ನವೀರ ಕಣವಿ, ಸುಬ್ರಾಯ ಚೊಕ್ಕಾಡಿ, ವೈದೇಹಿ, ವಿವೇಕ ರೈ, ಲಕ್ಷ್ಮೀಶ ತೋಳ್ಪಾಡಿ, ನಾಗೇಶ ಹೆಗಡೆ, ಎಚ್ಚೆಸ್ವಿ, ರಾಜೇಂದ್ರ ಚೆನ್ನಿ, ಜಯಂತ ಕಾಯ್ಕಿಣಿ, ವಿಜಯೇಂದ್ರ ಪಾಟೀಲ, ಸವಿತಾ ನಾಗಭೂಷಣ, ಟಿ.ಎಸ್. ವೇಣುಗೋಪಾಲ್, ಅಮರೇಶ ನುಗಡೋಣಿ, ಕೆ. ಪುಟ್ಟಸ್ವಾಮಿ, ಎಂ.ಎಸ್. ಶ್ರೀರಾಮ್, ಎ. ನಾರಾಯಣ, ಕೆ.ಜೆ. ಸಚ್ಚಿದಾನಂದ, ಮಮತಾ ರೈ, ವಿನಯಾ, ತಾರಿಣಿ ಶುಭದಾಯಿನಿ, ಸುಬ್ಬು ಹೊಲೆಯಾರ್, ದೇವು ಪತ್ತಾರ, ಎನ್.ಎಸ್. ಗುಂಡೂರ, ಗೀತಾ ವಸಂತ, ಜ.ನಾ ತೇಜಶ್ರೀ, ಟಿ. ಅವಿನಾಶ್ ಮುಂತಾದವರು.

ಜೊತೆಗೆ ಪುಸ್ತಕಾವಲೋಕನ ಮತ್ತು ನಮ್ಮ ಹತ್ತು ವರ್ಷಗಳ ಸಂಚಿಕೆಗಳಿಂದ ಆಯ್ದ ಹತ್ತು ಲೇಖನಗಳ ವಿಶೇಷ ಗುಚ್ಛ

ಪರ್ಯಾಯ ಜೀವನ ಪದ್ಧತಿ; ಕುಪ್ಪಳ್ಳಿ ಶಿಬಿರದ ಉಪನ್ಯಾಸ -೧

# ನಮ್ಮ ಆಹಾರ ಪದ್ಧತಿ : ಒಂದು ಪರ್ಯಾಯ ಚಿಂತನೆ

-ಸಂಜೀವ ಕುಲಕರ್ಣಿ

**"ಸ್ವಾತಂತ್ರ್ಯ ಸಿಕ್ಕ ನಂತರ ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳು ಹಸಿರುಕ್ರಾಂತಿಯ ಹೆಸರಿನಲ್ಲಿ ನಮ್ಮ ಮುಂದೆ ಒಂದು ಭ್ರಮಾಲೋಕವನ್ನೇ ಸೃಷ್ಟಿಸಿದವು. ಮೇಲೆ ಹೇಳಿದ ಸಿರಿಧಾನ್ಯಗಳನ್ನು ನಮ್ಮ ರೈತರು ಕಡಿಮೆ ಮಳೆ ಬೀಳುವ ಅತ್ಯಂತ ಕಡಿಮೆ ಫಲವತ್ತಾದ ಹೊಲಗಳಲ್ಲಿ ಯಾವುದೇ ಕೀಟಗಳ ಬಾಧೆಯಿಲ್ಲದೇ ಬೆಳೆಯುತ್ತಿದ್ದರು. ಬಹುರಾಷ್ಟ್ರೀಯ ಕಂಪನಿಗಳು 'ಯೂರಿಯಾ'ದಂತಹ ರಾಸಾಯನಿಕ ಗೊಬ್ಬರ, ಡಿಡಿಟಿಯಂತಹ ಕೀಟನಾಶಕಗಳನ್ನು ಉತ್ಪಾದಿಸಿ, ಅವುಗಳನ್ನು ಆಧುನಿಕ ಕೃಷಿಯ ಹೆಸರಿನಲ್ಲಿ ಭಾರತ ಮತ್ತು ಚೀನಾಕ್ಕೆ ತಂದರು. ಈ ಕಂಪನಿಗಳು ಬಹಳ ಚಾಣಾಕ್ಷತನದಿಂದ ಜೋಳ, ರಾಗಿ ಮುಂತಾದ ಧಾನ್ಯಗಳನ್ನು ಒರಟು ಧಾನ್ಯಗಳೆಂದು ಕರೆದು, ಸುಸಂಸ್ಕೃತರು, ಸುಶಿಕ್ಷಿತರು ಆದವರು ಅವುಗಳನ್ನು ತಿನ್ನಬಾರದು; ಮುಖ್ಯವಾಗಿ ಗೋಧಿ, ಅಕ್ಕಿ ತಿನ್ನಬೇಕು ಎಂಬುದನ್ನು ಪರೋಕ್ಷವಾಗಿ ಬಿಂಬಿಸುತ್ತಾ ಹೋದರು. ಪರಿಣಾಮವಾಗಿ ಕೇವಲ ಎರಡು ತಲೆಮಾರುಗಳ ಅವಧಿಯಲ್ಲಿ ಈ ಸಿರಿಧಾನ್ಯಗಳು ನಮ್ಮ ಹೊಲಗಳಿಂದ ಮತ್ತು ನಮ್ಮ ಊಟದ ತಟ್ಟೆಯಿಂದ ಹೆಚ್ಚು ಕಡಿಮೆ ಮಾಯವಾಗಿಬಿಟ್ಟವು."**

**'ಸ**ಕ್ಕರೆ, ಉಪ್ಪು, ಎಣ್ಣೆ, ಮೈದಾ, ಹಾಲು ಮತ್ತು ಪಾಲೀಶ್ ಅಕ್ಕಿ ಇವು ನಮ್ಮ ಆಹಾರದೊಳಗಿನ ಆರು ಬಿಳಿ ಕೊಲೆಗಾರರು.' ಎಂದು ನಾನು ಹೇಳಿದರೆ ನೀವು ತಕ್ಷಣ 'ಇದು ಎಂಥದು ಮಾರಾಯರೇ, ಇವರೆಲ್ಲ ನಮ್ಮ ಜೀವದ ಗೆಳೆಯರು. ಇವರು ಹೇಗೆ ಕೊಲೆಗಾರರಾದಾರು?' ಎಂದು ನೀವು ಕೇಳಿಯೇ ಕೇಳುವಿರಿ. ಆದರೆ ಆಹಾರ ವಿಜ್ಞಾನಿಗಳು ಹೇಳುವ ವಿವರಗಳು ಹೀಗಿವೆ.

ಈ ಆರು ಸರ್ವೇಸಾಮಾನ್ಯ ಆಹಾರ ವಸ್ತುಗಳ ಸುದೀರ್ಘ ಪರಿಚಯ ಮಾಡಿಕೊಳ್ಳುವ ಮುನ್ನ, ನಾವು ನಮ್ಮ ಶರೀರದ ಬಗ್ಗೆ ಒಂದಿಷ್ಟು ಮೂಲಭೂತ ಸಂಗತಿಗಳನ್ನು ತಿಳಿದುಕೊಳ್ಳೋಣ.

ಜೀವವಿಕಾಸ ತಜ್ಞರು ಹೇಳುವ ಪ್ರಕಾರ ನಾವು ಮನುಷ್ಯರು – ಎರಡು ಕಾಲಿನ ಮೇಲೆ ನಡೆದಾಡುವ, ಕೈಗಳನ್ನು ನೂರೆಂಟು ರೀತಿಯಲ್ಲಿ ಬಳಸುವ *ಹೋಮೋ ಸೇಪಿಯನ್ಸ್* ಎಂಬ ಪ್ರಾಣಿಗಳು ಈ ಭೂಮಿಯ ಮೇಲೆ ರೂಪುಗೊಂಡಿದ್ದು, ಸುಮಾರು ಮೂರು ಲಕ್ಷ ವರ್ಷಗಳ ಹಿಂದೆ. ನಾವು ಇಂದು ನೋಡುತ್ತಿರುವ ಈ ನಾಗರೀಕತೆ, ಸಂಸ್ಕೃತಿ, ಸಮಾಜ, ವಿಜ್ಞಾನ-ತಂತ್ರಜ್ಞಾನ ಮುಂತಾದ ವ್ಯವಸ್ಥೆಗಳೆಲ್ಲ ರೂಪುಗೊಂಡಿದ್ದು, ಇತ್ತೀಚಿನ ಕೇವಲ ಮೂವತ್ತು ಸಾವಿರ ವರ್ಷಗಳಲ್ಲಿ. ಅಂದರೆ ಮೊದಲಿನ ಎರಡು ಲಕ್ಷ ಎಪ್ಪತ್ತು ಸಾವಿರ ವರ್ಷಗಳಷ್ಟು ಸುದೀರ್ಘಕಾಲ ನಾವು ಮನುಷ್ಯರು ಇತರ ಕಾಡು ಪ್ರಾಣಿಗಳ ಹಾಗೆಯೇ ಕಾಡುಮನುಷ್ಯರಾಗಿ ಕಾಡುಮೇಡುಗಳಲ್ಲಿ ಅಲೆದಾಡುತ್ತ ಜೀವಿಸಿದವರು. ಹೀಗಾಗಿ ಈ ಅವಧಿಯಲ್ಲಿ ಬೆಂಕಿ ಇನ್ನೂ ನಮ್ಮ ನಿಯಂತ್ರಣಕ್ಕೆ ಬಂದಿರಲಿಲ್ಲ. ಇತರ ಪ್ರಾಣಿಗಳ ಹಾಗೆಯೇ ನಾವು ಕೂಡ ಸಹಜವಾಗಿ ದೊರಕುವ ಹಣ್ಣು, ಕಾಯಿ, ಚಿಗುರು, ಗಡ್ಡೆ-ಗೆಣಸು, ಮೀನು ಮುಂತಾದವನ್ನು ತಿನ್ನುತ್ತಿದ್ದೆವು. ಬೆಂಕಿ ನಮ್ಮ ನಿಯಂತ್ರಣದಲ್ಲಿ ಬಂದ ಬಳಿಕ ನಮ್ಮ ಆಹಾರದಲ್ಲಿ ಬಹಳ ದೊಡ್ಡ ಬದಲಾವಣೆ ಆಯಿತು. ಈಗ ನಾವು ಧಾನ್ಯಗಳನ್ನು ಹಾಗೂ ಇತರ ಹತ್ತಾರು ತರಹದ ಪದಾರ್ಥಗಳನ್ನು ತಿನ್ನಲಾರಂಭಿಸಿದೆವು. ಆದಿಯಿಂದಲೂ ನಮ್ಮ ಜೀರ್ಣವ್ಯವಸ್ಥೆ ರಚಿತಗೊಂಡಿರುವುದು ಈ ಸಹಜ ಆಹಾರವನ್ನು ಜೀರ್ಣಿಸಿಕೊಳ್ಳಲು. ಈ ಸಹಜ ಆಹಾರದಲ್ಲಿ ಶರೀರಕ್ಕೆ ಅವಶ್ಯವಾದ ಎಲ್ಲ ಪೋಷಕಾಂಶಗಳೂ ಇರುತ್ತವೆ. ಹಾಗೂ ಬಹಳ ಮುಖ್ಯವಾಗಿ ಸಾಕಷ್ಟು ನಾರಿನಾಂಶ ಇರುತ್ತದೆ. ನಾವು ಸೇವಿಸಿದ ಆಹಾರವು ಜಠರ ಮತ್ತು ಸಣ್ಣ ಕರುಳಿನಲ್ಲಿ ಪಚನಗೊಂಡ ಬಳಿಕ ಶರೀರಕ್ಕೆ ಬೇಕಾದ ಪೋಷಕಾಂಶಗಳು ರಕ್ತದೊಳಗೆ ಹೀರಿಕೊಳ್ಳಲ್ಪಡುತ್ತವೆ. ಉಳಿಯುವುದು ನಾರಿನಂಶ ಮಾತ್ರ. ಈ ನಾರಿನಂಶವನ್ನು ಶರೀರವು ಮಲದ ರೂಪದಲ್ಲಿ ಹೊರಗೆ ಹಾಕುತ್ತದೆ. ಆದರೆ ನಾರಿನಂಶವು ನಿರುಪಯುಕ್ತ ಅಂಶವಲ್ಲ. ನಾರಿನಂಶದ ಮಹತ್ವವು ನಮಗೆ ಈಗಷ್ಟೇ ಗೊತ್ತಾಗುತ್ತಿದೆ. ಅದು ಕೇವಲ ತಾನು ಮಾತ್ರ ಹೊರಗೆ ಹೋಗುವುದಿಲ್ಲ. ಕರುಳಿನೊಳಗಿರುವ ಹಲವು ತರಹದ ಕಲ್ಮಷಗಳನ್ನೂ ತನ್ನ ಜೊತೆಗೆ ತೆಗೆದುಕೊಂಡು ಹೋಗುತ್ತದೆ. ಅರ್ಥಾತ್ ನಾರಿನಂಶವು ನಮ್ಮ ಪಚನ ವ್ಯವಸ್ಥೆಯೊಳಗಿನ ಒಂದು ಅತ್ಯುತ್ತಮ ಕಸಬರಿಗೆಯಂತೆ ಕೆಲಸ ಮಾಡುತ್ತದೆ. ಇದು ಬಹಳ ಮುಖ್ಯವಾದ ಕೆಲಸ. ನಾವು ಉಣ್ಣುವ ಆಹಾರದಲ್ಲಿ ನಾರಿನಂಶ ಕಡಿಮೆ ಆಗಿ ಕಲ್ಮಶಗಳು ಕರುಳಿನೊಳಗೇ ಉಳಿಯಲಾರಂಭಿಸಿದರೆ ಕರುಳಿಗೆ ಬಾವು, ಅಪೆಂಡಿಕ್ಸ್ ಬಾವು, ದೊಡ್ಡಕರುಳಿನ ಕ್ಯಾನ್ಸರ್ ಮುಂತಾದ ರೋಗಗಳು ಉಂಟಾಗುವ ಸಾಧ್ಯತೆ ಹೆಚ್ಚು. ಅಲ್ಲದೆ ಆಹಾರದಲ್ಲಿ ನಾರಿನಂಶ ಕಡಿಮೆ ಇದ್ದರೆ ಮಲಬದ್ಧತೆಯುಂಟಾಗಿ ಅದರ ಪರಿಣಾಮವಾಗಿ ಮೂಲವ್ಯಾಧಿ ಮತ್ತು ಗುದದ್ವಾರದ ಹಲವಾರು ಸಮಸ್ಯೆಗಳು ಉಂಟಾಗುತ್ತವೆ. ಹೀಗೆ ನಾರಿನಂಶ ನಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ಬಹಳ ಮಹತ್ವದ ಪಾತ್ರ ವಹಿಸುತ್ತದೆ. ನಾರಿನ ಮಹತ್ವಕ್ಕೆ ಇನ್ನೂ ಎರಡು ಪುಟ್ಟ ಅಧ್ಯಾಯಗಳಿವೆ.

ಅಧ್ಯಾಯ ಒಂದು : ಹಣ್ಣು, ಗಡ್ಡೆ, ಗೆಣಸು, ಎಲೆ, ಚಿಗುರು, ಕಾಯಿ ಮುಂತಾದವನ್ನು ಸೇವಿಸಿದಾಗ ಅವುಗಳನ್ನು ಜೀರ್ಣಮಾಡಿ ಅದರೊಳಗಿನ ಸಾರವನ್ನು ಹೀರಿಕೊಳ್ಳಲು ಶರೀರಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ನಾವು ಒಮ್ಮೆ ಊಟ ಮಾಡಿದರೆ ಮುಂದೆ ನಾಲ್ಕಾರು ತಾಸುಗಳವರೆಗೆ ಈ ಜೀರ್ಣಕ್ರಿಯೆ ನಡೆದು ನಂತರ ನಮಗೆ ಹಸಿವೆ ಆಗುತ್ತದೆ.



ನಾರಿನಂಶ ಇಲ್ಲದೆ ಕೇವಲ ಸಾರ ರೂಪದ ಆಹಾರವನ್ನು (ಉದಾ: ಸಕ್ಕರೆ) ಸೇವಿಸಿದಾಗ ಅದರಲ್ಲಿ ಜೀರ್ಣಮಾಡುವ ಭಾಗವೇ ಇಲ್ಲದೆ ಇರುವುದರಿಂದ ಅದು ಬೇಗನೇ ರಕ್ತದೊಳಗೆ ಹೀರಿಕೊಳ್ಳಲ್ಪಡುತ್ತದೆ. ಆದುದರಿಂದ ನಮಗೆ ಬೇಗನೆ ಮತ್ತೆ ಹಸಿವು ಆಗುತ್ತದೆ.

ಅಧ್ಯಾಯ ಎರಡು : ನಾವು ಹಣ್ಣು, ಗಡ್ಡೆ, ತರಕಾರಿ ಮುಂತಾದವುಗಳನ್ನು ಸಮಗ್ರವಾಗಿ ಅವುಗಳ ಸಹಜ ರೂಪದಲ್ಲಿ ಸೇವಿಸಿದಾಗ ನಮ್ಮ ಆಹಾರದ ಗಾತ್ರ ಹೆಚ್ಚಾಗುತ್ತದೆ. ಆದರೆ ಅದರೊಳಗಿನ ಸಾರದ ಪ್ರಮಾಣ ಕಡಿಮೆ ಇರುತ್ತದೆ. ಉದಾಹರಣೆಗೆ ನೋಡಿ; ನೀವು ನಮ್ಮ ತೋಟಕ್ಕೆ ಬಂದು ಹೀಗೆ ಅಂಗಳದಲ್ಲಿ ಕುಳಿತು ಕಬ್ಬು ತಿನ್ನುತ್ತಿದ್ದೀರಿ ಅಂದುಕೊಳ್ಳಿ, 'ಅಯ್ಯೋ! ಕಬ್ಬು ತಿನ್ನುವುದೇ? ಅದೂ ನಾನು? ನಗರದಲ್ಲಿ ಹುಟ್ಟಿ, ನಗರದಲ್ಲಿ ಬೆಳೆದು, ನಯವಿನಯದಿಂದ ಬಾಳುತ್ತಿರುವ ನಾನೊಬ್ಬ ನಾಜೂಕು ನರಪ್ರಾಣಿ. ಕಬ್ಬು ಎಂಬ ಶಬ್ದ ಕೇಳಿದೊಡನೇ ನನ್ನ ಹಲ್ಲು ನೋಯಲು ಪ್ರಾರಂಭಿಸುತ್ತವೆ. ಬೇಡ ಬೇಡ ಕಬ್ಬಿನ ಹೆಸರು ತೆಗೆಯಬೇಡ. ಗೆಳೆಯ ಬೇರೆ ಏನಾದರೂ ಹೇಳು?' ಎಂದು ನೀವು ಅಲವತ್ತುಕೊಳ್ಳುತ್ತೀರಿ ಅಲ್ಲವೇ? ಇರಲಿ, ನಿಮ್ಮ ಸಮಸ್ಯೆ ನನಗಾದರೂ ಅರ್ಥವಾಗುತ್ತದೆ. ಪರವಾಗಿಲ್ಲ. ಸುಮ್ಮನೇ ಕೇಳಿಸಿಕೊಳ್ಳಿ. ನೀವು ಖುಷಿ ಖುಷಿಯಿಂದ ಕಬ್ಬು ತಿನ್ನುತ್ತೀರಿ. ಹತ್ತು ಗಣಿಕೆ ಅಂದರೆ ಒಂದು ಕಿಲೋ ಕಬ್ಬು ತಿಂದಾಗ ನಿಮ್ಮ ಹೊಟ್ಟೆ ತುಂಬಿರುತ್ತದೆ. ಆದರೆ ನಿಮ್ಮ ಹೊಟ್ಟೆಯೊಳಗೆ ಹೆಚ್ಚೆಂದರೆ ೨೦ ಗ್ರಾಂ ಸಕ್ಕರೆ ಸೇರಿರುತ್ತದೆ. ನೀವು ನೇರವಾಗಿ ಸಕ್ಕರೆಯನ್ನೇ ತಿಂದರೆ ನಾಲ್ಕು ಚಮಚೆಗೆ ೨೦ ಗ್ರಾಂ ತೂಕ ಆಗಿಬಿಡುತ್ತದೆ. ಇನ್ನೊಂದು ಉದಾಹರಣೆ ಕೊಡುವುದಾದರೆ ನೀವು ಇಂದು ಸಂಜೆ ನಿಮ್ಮ ಗೆಳತಿಯ ಮನೆಗೆ ಹೋದಾಗ ನಾಲ್ಕು ಕಿತ್ತಳೆ ಹಣ್ಣು ತಿನ್ನುತ್ತೀರಿ ಅಂದುಕೊಳ್ಳೋಣ. ನಿಮ್ಮ ಗೆಳತಿ ಹಣ್ಣು ಹಿಂಡಿ ರಸ ಕೊಟ್ಟರೆ ಹಣ್ಣಿನೊಳಗಿನ ನಾರಿನಂಶದಿಂದ ನೀವು ವಂಚಿತರಾಗುತ್ತೀರಿ. ಪೂರ್ತಿ ಹಣ್ಣನ್ನೇ ತಿಂದಾಗ ನೀವು ಸೇವಿಸಿದ ಆಹಾರದ ಗಾತ್ರ ಹೆಚ್ಚು. ಕೇವಲ ಹಣ್ಣಿನ ರಸ ಕುಡಿದರೆ ಗಾತ್ರ ಕಡಿಮೆ. ಆಗ ಹೊಟ್ಟೆ ತುಂಬಿತು ಎಂಬ ಅನಿಸಿಕೆ ಬೇಗನೇ ಬರುವುದಿಲ್ಲ. ಹಾಗಾಗಿ ಹೆಚ್ಚು ಹೆಚ್ಚು ಆಹಾರವನ್ನು ಸೇವಿಸುತ್ತಾ ಹೋಗುತ್ತೀರಿ.

ನಾರಿನಂಶದ ಈ ಪೀಠಿಕೆಯ ನಂತರ ನಾವು ಮತ್ತೆ ನಮ್ಮ ಆರು ಬಿಳಿ ಕೊಲೆಗಾರರನ್ನು ಭೇಟಿ ಆಗೋಣ. ಸಕ್ಕರೆ, ಉಪ್ಪು, ಮೈದಾ, ಎಣ್ಣೆ, ಹಾಲು ಮತ್ತು ಪಾಲಿಶ್ ಅಕ್ಕಿ ಇವುಗಳಲ್ಲಿ ನಾರಿನಂಶ ಇಲ್ಲವೇ ಇಲ್ಲ ಎನ್ನುವಷ್ಟು ಅತ್ಯಲ್ಪ. ಮೀನು, ಮೊಟ್ಟೆ, ಮಾಂಸ ಇವುಗಳಲ್ಲಿಯೂ ನಾರಿನಂಶ ಶೂನ್ಯ ಸಮಾನ.

ಈ ಆರು ಆಹಾರ ವಸ್ತುಗಳು ತಮ್ಮಷ್ಟಕ್ಕೆ ತಾವೇ ವಿಷಕಾರಕವಲ್ಲ. ಸಮಸ್ಯೆ ಇರುವುದು ಅವುಗಳನ್ನು ಸೇವಿಸುವ ಪ್ರಮಾಣದಲ್ಲಿ. ಹಿಂದಿನ ತಲೆಮಾರಿನವರು ಕೂಡ ಇವುಗಳನ್ನು ಸೇವಿಸುತ್ತಿದ್ದರು. ಆದರೆ ಬಹಳ ಕಡಿಮೆ ಪ್ರಮಾಣದಲ್ಲಿ. ನಾವು ಈಗ

ಸ್ಥಿತಿವಂತರು; ಸುಧಾರಿಸಿದವರು, ಸುಸಂಸ್ಕೃತರು, ಆಧುನಿಕರು ಅನ್ನುವ ಹಲವು ಹಣೆಪಟ್ಟಿಗಳ ಕೆಳಗೆ ಕಳೆದ ೩೦-೪೦ ವರ್ಷಗಳಲ್ಲಿ ಹೆಚ್ಚು ಹೆಚ್ಚು ಈ ಸಂಸ್ಕರಿತ ನಾರುರಹಿತ ಆಹಾರವಸ್ತುಗಳನ್ನು ಸೇವಿಸುತ್ತಿದ್ದೇವೆ. ಪರಿಣಾಮವಾಗಿ ಎಲ್ಲ ಜೀವನ ಶೈಲಿ ಕಾಯಿಲೆಗಳನ್ನು ಹೆಚ್ಚು ಮಾಡಿಕೊಂಡಿದ್ದೇವೆ.

ನಾವು ಮೊದಲಿಗೆ ಸಕ್ಕರೆ ಒಂದನ್ನೇ ನೋಡೋಣ. ಸಕ್ಕರೆ ಅಥವಾ ಪಿಷ್ಟ ನಮ್ಮ ಶರೀರಕ್ಕೆ ಬೇಕಾಗುವ ಒಂದು ಮುಖ್ಯ ಆಹಾರ ಘಟಕ. ಅದನ್ನು ನಾವು ಯಥೇಚ್ಛ ಪ್ರಮಾಣದಲ್ಲಿ ಹಣ್ಣುಗಳು, ಪೂರ್ಣಧಾನ್ಯಗಳು, ಗಡ್ಡೆ-ಗೆಣಸುಗಳಿಂದಲೂ ಪಡೆಯಬಹುದು. ಕಬ್ಬಿನ ರಸವನ್ನು ಹಿಂಡಿ ಅದರೊಳಗಿನ ನಾರಿನಂಶ ತೆಗೆದು ಹಾಕಿ ಸಕ್ಕರೆ ಮಾಡಿ ಸೇವಿಸಿದಾಗ ಅದು ಅಪಾಯಕಾರಿಯಾಗುತ್ತದೆ. ಕೊಕೇನ್ ಮತ್ತು ಸೆರೆ ಇವು ಅತ್ಯಂತ ಚಟಕಾರಕ ವಸ್ತುಗಳು ಎಂಬುದು ಸಾಮಾನ್ಯ ಗ್ರಹಿಕೆ. ಆದರೆ ಈಗ ವಿಜ್ಞಾನಿಗಳು ಸಕ್ಕರೆಯೇ ಅತ್ಯಂತ ಹೆಚ್ಚು ಚಟಕಾರಕ ವಸ್ತು ಎಂದು ಹೇಳುತ್ತಿದ್ದಾರೆ. ರಾಸಾಯನಿಕ ಸೂತ್ರಗಳು ಹೇಳುವ ಪ್ರಕಾರ ಸಕ್ಕರೆ, ಅಲ್ಕೋಹಾಲ್ ಮತ್ತು ಕೊಕೇನ್ ಇವು ಮೂರೂ ಹತ್ತಿರದ ಸಂಬಂಧಿಗಳೇ ಹೌದು.

ಪ್ರತಿಯೊಂದು ಆಹಾರವಸ್ತುವಿಗೂ *ಗ್ಲೈಸಿಮಿಕ್ ಇಂಡೆಕ್ಸ್* ಎಂಬ ಮಾಪನವಿರುತ್ತದೆ. ಒಂದು ಆಹಾರವಸ್ತುವನ್ನು ಸೇವಿಸಿದಾಗ ಅದು ಎಷ್ಟು ಬೇಗನೆ ಪಚನಗೊಂಡು ರಕ್ತದಲ್ಲಿ ಸೇರಿಕೊಳ್ಳುತ್ತದೆ ಎಂಬುದೇ ಈ ಮಾಪನ. ಸಕ್ಕರೆಯ *ಗ್ಲೈಸಿಮಿಕ್ ಇಂಡೆಕ್ಸ್* ಅತ್ಯಧಿಕ ಅಂದರೆ 100. ಏಕೆಂದರೆ ಸಕ್ಕರೆಯಲ್ಲಿ ಜೀರ್ಣವಾಗಬೇಕಾದ ಅಂಶ ಯಾವುದೂ ಉಳಿದೇ ಇಲ್ಲ. ಸಕ್ಕರೆಯನ್ನು ಸೇವಿಸಿದ ಕೆಲವೇ ನಿಮಿಷಗಳಲ್ಲಿ ಅದು ಹೀರಿಕೊಳ್ಳಲ್ಪಟ್ಟು ರಕ್ತದಲ್ಲಿ ಸಕ್ಕರೆಯ ಪ್ರಮಾಣ ಏರುತ್ತದೆ. ಈ ಏರಿದ ಸಕ್ಕರೆ ಪ್ರಮಾಣದಿಂದಾಗಿ ಮೆದುಳಿಗೆ ನಶೆಯ ಒಂದು *ಕಿಕ್* ದೊರೆತಂತಾಗುತ್ತದೆ. ಕೆಲವು ತಾಸುಗಳ ನಂತರ ಸಕ್ಕರೆಯ ಪ್ರಮಾಣ ಕಡಿಮೆಯಾಗುತ್ತ ಬಂದಂತೆ ಮೆದುಳು ಮತ್ತೆ ಸಕ್ಕರೆಯನ್ನು ಬೇಡಲಾರಂಭಿಸುತ್ತದೆ. ನೀವು ಮತ್ತೆ ಚಹಾ ಕುಡಿಯುತ್ತೀರಿ. ಮೆದುಳಿಗೆ ಮತ್ತೊಂದು ಸಣ್ಣ *ಕಿಕ್*! ಇದುವೇ ಸಕ್ಕರೆಯ ಚಟ. ಉತ್ತರ ಕರ್ನಾಟಕದ ಕನ್ನಡದಲ್ಲಿ ಹೇಳುವುದಾದರೆ ಸಕ್ಕರೆಯ ತಲಬು.

ಚಹಾ, ಸ್ವೀಟ್ಸ್, ತಂಪುಪಾನೀಯ, ಪಾರ್ಟಿ ಊಟ, ಹಬ್ಬದೂಟ, ಮದುವೆ ಊಟ, ಮನೆಗೆ ಅತಿಥಿಗಳ ಆಗಮನ ಹೀಗೆ ಹತ್ತು ಹಲವು ನೆವ ಮಾಡಿ ಇಂದು ನಾವು ಹೆಚ್ಚು ಹೆಚ್ಚು ಸಕ್ಕರೆ ಸೇವಿಸುತ್ತಿದ್ದೇವೆ. ಸಕ್ಕರೆಯಲ್ಲಿ ಗ್ಲುಕೋಸ್ ಹೊರತು ಬೇರ್‍ಯಾವ ಪೋಷಕಾಂಶವೂ ಇಲ್ಲ. ಹೀಗೆ ಅತಿಯಾದ ಸಕ್ಕರೆ ಸೇವನೆ ಮತ್ತು ಅದನ್ನು ಸುಡುವಷ್ಟು ಶರೀರ ಶ್ರಮ ಇಲ್ಲದೇ ಹೋದಲ್ಲಿ ಅದು ನಮ್ಮ ಶರೀರದಲ್ಲಿ ಕೊಬ್ಬಾಗಿ ಪರಿವರ್ತನೆಗೊಂಡು ಸಂಗ್ರಹವಾಗುತ್ತಾ ಹೋಗುತ್ತದೆ. ಇದುವೇ ಬೊಜ್ಜು.

ಬೊಜ್ಜು ಎಲ್ಲ ಜೀವನಶೈಲಿ ಕಾಯಿಲೆಗಳ ತಾಯಿ. ಮಧುಮೇಹ, ರಕ್ತದ ಏರೊತ್ತಡ, ಅಸ್ತಮಾ ಮತ್ತು ಅಲರ್ಜಿಗಳು, ಒಂಟಿತನ ಮತ್ತು ಖಿನ್ನತೆ, ಸೊಂಟನೋವು, ಮೊಳಕಾಲು ನೋವು, ಮುಟ್ಟಿನ ಸಮಸ್ಯೆಗಳು ಇವೆಲ್ಲವನ್ನು ಇಂದು ಜೀವನಶೈಲಿ ಕಾಯಿಲೆಗಳು ಎಂದು ಗುರುತಿಸಲಾಗುತ್ತಿದೆ. ಇಂದು ಜಗತ್ತಿನಲ್ಲಿ ಎಷ್ಟು ಜನರು ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆಯೋ ಅದಕ್ಕಿಂತ ಹೆಚ್ಚು ಜನ ಅತೀ ಆಹಾರದಿಂದ ಬಳಲುತ್ತಿದ್ದಾರೆ. ಅಮೇರಿಕಾದಲ್ಲಿ 50 ಪ್ರತಿಶತ ಜನ ಇಂದು ಅತೀ ತೂಕದ ಅಥವಾ ಬೊಜ್ಜಿನ ಮನುಷ್ಯರು. ಅವರದೇ ಜೀವನಶೈಲಿಯನ್ನು ಅನುಸರಿಸುತ್ತಿರುವ ನಾವು ಭಾರತೀಯರು ಕೂಡ ಹೆಚ್ಚು ಹೆಚ್ಚು ಬೊಜ್ಜಿನವರಾಗುತ್ತಿದ್ದೇವೆ ಹಾಗೂ ಭೂಮಿಗೆ ಭಾರವಾಗುತ್ತಿದ್ದೇವೆ.

ಕೇವಲ ಸಕ್ಕರೆಯ ಸಂಕ್ಷಿಪ್ತ ಕತೆಯೇ ಇಷ್ಟು ಉದ್ದವಾಯಿತು. ಇನ್ನು ಇತರ ಐದು ಬಿಳಿ ಕೊಲೆಗಾರರ ಕಥೆಗೆ ಇಲ್ಲಿ ಜಾಗವೇ ಇಲ್ಲ.

ಆಹಾರಕ್ಕೆ ಸಂಬಂಧಿಸಿದಂತೆ ನಮ್ಮ ಇತ್ತೀಚಿನ ಚರಿತ್ರೆಯಲ್ಲಿ ನಡೆದಿರುವ ಇನ್ನೊಂದು ದುರಂತವನ್ನು ನಾವು ಅರ್ಥಮಾಡಿಕೊಳ್ಳಬೇಕು. ಅದುವೇ ಸಿರಿಧಾನ್ಯಗಳ ದುರಂತ ವೃತ್ತಾಂತ. ಸ್ವಾತಂತ್ರ್ಯ ಬರುವ ಮೊದಲು ನಮ್ಮ ದೇಶದಲ್ಲಿ ರೈತರು ಸಾವಿರಾರು ವರ್ಷಗಳಿಂದ ಸಿರಿಧಾನ್ಯಗಳನ್ನು ಬೆಳೆಯುತ್ತಿದ್ದರು. ಜೋಳ, ರಾಗಿ, ಸಜ್ಜೆ, ಸಾವಿ, ನವಣೆ, ಊದಲು, ಬರಗು, ಹಾರಕ, ಕೊರಲೆ ಇವು ದೇಶದ ಉದ್ದಗಲಕ್ಕೂ ಜನರು ಬೆಳೆದು ಉಣ್ಣುತ್ತಿದ್ದ ಪ್ರಮುಖ ಸಿರಿಧಾನ್ಯಗಳು. ಸ್ವಾತಂತ್ರ್ಯ ಸಿಕ್ಕ ನಂತರ ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳು ಹಸಿರುಕ್ರಾಂತಿಯ ಹೆಸರಿನಲ್ಲಿ ನಮ್ಮ ಮುಂದೆ ಒಂದು ಭ್ರಮಾಲೋಕವನ್ನೇ ಸೃಷ್ಟಿಸಿದವು. ಮೇಲೆ ಹೇಳಿದ ಸಿರಿಧಾನ್ಯಗಳನ್ನು ನಮ್ಮ ರೈತರು ಕಡಿಮೆ ಮಳೆ ಬೀಳುವ ಅತ್ಯಂತ ಕಡಿಮೆ ಫಲವತ್ತಾದ ಹೊಲಗಳಲ್ಲಿ ಯಾವುದೇ ಕೀಟಗಳ ಬಾಧೆಯಿಲ್ಲದೇ ಬೆಳೆಯುತ್ತಿದ್ದರು. ಬಹುರಾಷ್ಟ್ರೀಯ ಕಂಪನಿಗಳು 'ಯೂರಿಯಾ'ದಂತಹ ರಾಸಾಯನಿಕ ಗೊಬ್ಬರ, ಡಿಡಿಟಿಯಂತಹ ಕೀಟನಾಶಕಗಳನ್ನು ಉತ್ಪಾದಿಸಿ, ಅವುಗಳನ್ನು ಆಧುನಿಕ ಕೃಷಿಯ ಹೆಸರಿನಲ್ಲಿ ಭಾರತ ಮತ್ತು ಚೀನಾಕ್ಕೆ ತಂದರು. ಈ ಕಂಪನಿಗಳು ಬಹಳ ಚಾಣಾಕ್ಷತನದಿಂದ ಜೋಳ, ರಾಗಿ ಮುಂತಾದ ಧಾನ್ಯಗಳನ್ನು ಒರಟು ಧಾನ್ಯಗಳೆಂದು ಕರೆದು, ಸುಸಂಸ್ಕೃತರು, ಸುಶಿಕ್ಷಿತರು ಆದವರು ಅವುಗಳನ್ನು ತಿನ್ನಬಾರದು; ಮುಖ್ಯವಾಗಿ ಗೋಧಿ, ಅಕ್ಕಿ ತಿನ್ನಬೇಕು ಎಂಬುದನ್ನು ಪರೋಕ್ಷವಾಗಿ ಬಿಂಬಿಸುತ್ತಾ ಹೋದರು. ಪರಿಣಾಮವಾಗಿ ಕೇವಲ ಎರಡು ತಲೆಮಾರುಗಳ ಅವಧಿಯಲ್ಲಿ ಈ ಸಿರಿಧಾನ್ಯಗಳು ನಮ್ಮ ಹೊಲಗಳಿಂದ ಮತ್ತು ನಮ್ಮ ಊಟದ ತಟ್ಟೆಯಿಂದ ಹೆಚ್ಚು ಕಡಿಮೆ ಮಾಯವಾಗಿಬಿಟ್ಟವು. ತೀರ ಇತ್ತೀಚೆಗೆ ಬೊಜ್ಜು, ಮಧುಮೇಹ, ರಕ್ತದ ಒತ್ತಡ ಮುಂತಾದವು ಹೆಚ್ಚಲಾರಂಭಿಸಿದ ಬಳಿಕ ನಮಗೆ ಈ ಸಿರಿಧಾನ್ಯಗಳ ಮಹತ್ವ ಮರಳಿ ಗೊತ್ತಾಗುತ್ತಿದೆ. ಭತ್ತ ಮತ್ತು ಗೋಧಿಗೆ ಹೋಲಿಸಿದರೆ ಈ ಸಿರಿಧಾನ್ಯಗಳನ್ನು ಬೆಳೆಯಲು ಬೇಕಾಗುವ ನೀರಿನ ಪ್ರಮಾಣ ಅತ್ಯಲ್ಪ. ಅಲ್ಲದೇ ಈ ಎಲ್ಲ ಸಿರಿಧಾನ್ಯಗಳಲ್ಲಿ ಹೇರಳವಾದ ಪ್ರಮಾಣದಲ್ಲಿ ನಾರಿನಂಶ, ಕಬ್ಬಿಣ, ಕ್ಯಾಲ್ಸಿಯಂ ಮತ್ತು ಇತರೇ ಖನಿಜ ಲವಣಗಳು ದೊರಕುತ್ತವೆ. ಆದುದರಿಂದ ಯಾವ ಧಾನ್ಯಗಳನ್ನು ಪಾಶ್ಚಾತ್ಯರು ಒರಟು ಧಾನ್ಯಗಳೆಂದು ಕರೆದು ಹೆಸರಿನ ಮೋಸದಾಟವನ್ನು ಮಾಡಿದ್ದರೋ ಆ ಧಾನ್ಯಗಳನ್ನು ಇಂದು ನಾವು ಪವಾಡಧಾನ್ಯಗಳು ಅಥವಾ ಸಿರಿಧಾನ್ಯಗಳು ಎಂದು ಕರೆಯುತ್ತಿದ್ದೇವೆ.

ಇಂದು ನಾವು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಆಹಾರದ ವಿಷಯದಲ್ಲಿ ನಾವು ನಿಜವಾಗಿಯೂ ಎಷ್ಟು ಸ್ವತಂತ್ರರು ಮತ್ತು ಎಷ್ಟು ಜಾಗೃತರು ಎಂಬ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳಬೇಕಾಗಿದೆ. ವಿಜ್ಞಾನಿಗಳು ಹೇಳುವ ಪ್ರಕಾರ ೨೦೨೫ರ ಸುಮಾರಿಗೆ ಭಾರತವು ಜಗತ್ತಿನ ಮಧುಮೇಹದ ರಾಜಧಾನಿ ಆಗುತ್ತದೆ. ಇತ್ತೀಚೆಗೆ ಬಂದಿರುವ ಇನ್ನೊಂದು ವರದಿಯ ಪ್ರಕಾರ ನಮ್ಮ ತಪ್ಪು ಆಹಾರ ಪದ್ಧತಿ ಹಾಗೂ ಕಡಿಮೆ ಶರೀರ ಶ್ರಮದ ಜೀವನ ಶೈಲಿಯಿಂದಾಗಿ ದೇಶದ ೪೦% ಜನರಿಗೆ ಹೃದಯ ಮತ್ತು ರಕ್ತನಾಳಗಳಿಗೆ ಸಂಬಂಧಿಸಿದ ಕಾಯಿಲೆಗಳು ಉಂಟಾಗುವ ಸಾಧ್ಯತೆ ಇದೆ. ಆದುದರಿಂದ ಇವತ್ತು ನಾವು ನಮ್ಮ ಆಹಾರ ಪದ್ಧತಿಯನ್ನು ಕೂಲಂಕುಷವಾಗಿ ಪರೀಕ್ಷಿಸಿ ಲಭ್ಯವಿರುವ ಹೊಸ ವೈಜ್ಞಾನಿಕ ಸಂಶೋಧನೆಗಳ ಆಧಾರದ ಮೇಲೆ ಹೆಚ್ಚು ಆರೋಗ್ಯಪೂರ್ಣವಾದ ಮತ್ತು ಪರಿಸರಸ್ನೇಹಿಯಾದ ಆಹಾರ ಪದ್ಧತಿಯನ್ನು ರೂಪಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ನಾವು ಧಾರವಾಡದ ಸಮೀಪ ಇರುವ ನಮ್ಮ 'ಸುಮನ ಸಂಗಮ' ಕಾಡು ತೋಟದಲ್ಲಿ 'ಸ್ವಯಂ ದ್ವೀಪ ಝೆನ್ ಕೇಂದ್ರ'ದ ವತಿಯಿಂದ ಅನೇಕ ಆಹಾರದ ಶಿಬಿರಗಳನ್ನು ಮಾಡುತ್ತಾ ಬಂದಿದ್ದೇವೆ. ಈ ಶಿಬಿರಗಳಲ್ಲಿ ಸಕ್ಕರೆ, ಬೆಲ್ಲ, ಎಣ್ಣೆ, ಹಾಲು ಮತ್ತು ಹಾಲಿನ ಉತ್ಪನ್ನಗಳು ಇವು ಯಾವವು ಇಲ್ಲದೆ ಪೂರ್ಣಧಾನ್ಯಗಳನ್ನೇ ಬಳಸಿ ಆಹಾರವನ್ನು ತಯಾರಿಸುವ ವಿಧಾನಗಳನ್ನು ಪರಿಚಯಿಸಲಾಗುತ್ತದೆ. 'ಅಯ್ಯೋ! ಎಣ್ಣೆ, ಸಕ್ಕರೆ, ಬೆಲ್ಲ, ಹಾಲು, ತುಪ್ಪ ಇದಾವುದೂ ಇಲ್ಲದೇ ಅಡುಗೆ ಮಾಡಿದರೆ ಅದು ಹೇಗೆ ತಾನೇ ರುಚಿಯಾಗಿರಲು ಸಾಧ್ಯ? ಅದು ಗಂಟಲೊಳಗೆ ಇಳಿಯುವುದಾದರೂ ಹೇಗೆ?' ಎಂದು ನೀವು ಕೇಳುತ್ತೀರಿ. ನನ್ನ ಉತ್ತರವಿಷ್ಟೇ - ದಯವಿಟ್ಟು ನಮ್ಮ ಈ ಆಹಾರದ ಶಿಬಿರಗಳಿಗೆ ಬರ್ರಿ. ಸಕ್ಕರೆ, ಬೆಲ್ಲ, ಎಣ್ಣೆ ಮತ್ತು ಹಾಲು ಇಲ್ಲದೆಯೂ ಅತ್ಯಂತ ರುಚಿಕರವಾದ ಆರೋಗ್ಯಪೂರ್ಣವಾದ ನಾರಿನಂಶಯುಕ್ತವಾದ ತಿಂಡಿ-ತಿನಿಸುಗಳನ್ನು ತಯಾರಿಸಿ ನಿಮಗೆ ಸಂತೋಷದಿಂದ ಉಣಬಡಿಸುತ್ತೇವೆ.

ನಾರು ಸಾರ ಸೇರಿ ನಮ್ಮ ಸಮುಚಿತ
ಆಹಾರ
ಇದು ಸಾವಿರ ಸಾವಿರ ವರ್ಷದ ಆವಿಷ್ಕಾರ
ನಾರು ತೆಗೆದು ಬರೀ
ಸಾರ ಸವಿದರೆ ಸಕ್ಕರೆಯ ಹಾಗೆ
ತರ ತರದ ರೋಗಗಳ ರೂಪದಲಿ
ಸಾರಿ ಸಾರಿ ಹೇಳುವುದು ಶರೀರ
"ಸರಿಯಲ್ಲ ನಿನ್ನ ಈ ದಾರಿ
ತೋರು ತುಸು ಕರುಣೆ ನನಗೆ
ಹೊರಗೆ ನಿನಗೆ ಹಗುರ ತೋರಿದರೂ
ಭಾರ ಇದು ನನಗೆ ಒಳಗೆ"
ತರವಲ್ಲ ತಗಿ ನಿನ್ನ ತಂಬೂರಿ
ಮಾರು ಹೋಗಿದ್ದು ಸಾಕು
ಮಾರುಕಟ್ಟೆಯ ಮಾರನಿಗೆ
ಮರಳು ನಾರು ಸಾರ ಎರಡೂ
ಸೇರಿದ ಸರಳ ಮಧುರ ಆಹಾರದ ಪರಿಗೆ
ನೂರು ವರುಷ ನಿರೋಗಿಯಾಗಿ
ಬೀರುತ್ತ ಸುತ್ತಲೂ ನಗೆ ಚುರಮೂರಿ
ನೆಮ್ಮದಿಯಿಂದ ಬಾಳಲು



**(ಧಾರವಾಡದಲ್ಲಿ ಸ್ತ್ರೀರೋಗ ತಜ್ಞರಾಗಿರುವ ಲೇಖಕರು ಪರ್ಯಾಯ ಆಹಾರ ಮತ್ತು ಆರೋಗ್ಯ ಪದ್ಧತಿಗಳ ಬಗ್ಗೆ ಪ್ರಯೋಗಶೀಲರೂ ಆಗಿದ್ದಾರೆ.)**

ಪರ್ಯಾಯ ಜೀವನ ಪದ್ಧತಿ: ಕುಪ್ಪಳ್ಳಿ ಶಿಬಿರದ ಉಪನ್ಯಾಸ – ೨

# ಪರ್ಯಾಯ ಜೀವನ ಪದ್ಧತಿ ಅರಸಿ ತುಳಿದ ಲೋಕಶಿಕ್ಷಣದ ಹೆಜ್ಜೆಗಳು

–ಕೇಶವ ಎಚ್. ಕೊರ್ಸೆ

**"ಪರಿಸರಕ್ಕೆ ಪೂರಕವಾದ ಹಾಗೂ ಬಹುಜನರ ಶ್ರೇಯೋಭಿವೃದ್ಧಿ ಸಾಧಿಸುವ ಬದಲೀ ಜೀವನ ವಿಧಾನಗಳನ್ನು ನಾವು ಒಳಗೊಳ್ಳಲೇಬೇಕಿದೆ. ನಾವು ಬಳಸುವ ನೈಸರ್ಗಿಕ ಸಂಪನ್ಮೂಲಗಳೆಲ್ಲವೂ ಆ ಪರಿಸರದಲ್ಲಿ ಪ್ರಾಕೃತಿಕವಾಗಿ ದೊರಕುವ ಮಿತಿಯಲ್ಲಿಯೇ ಇರಬೇಕಾದ ವಿವೇಕ ಮೈಗೂಡಬೇಕಿದೆ. ಬಳಸುವ ಸರಕಿರಲಿ ಅಥವಾ ಚೆಲ್ಲುವ ತ್ಯಾಜ್ಯವಿರಲಿ, ಕಡಿಮೆಯಾಗುತ್ತಾ ಸಾಗಬೇಕು. ಬಿಸಾಡುವ ಕಸವನ್ನೂ ಒಂದಲ್ಲ ಒಂದು ಬಗೆಯಲ್ಲಿ ಮರುಬಳಕೆ ಮಾಡುವ ಅಥವಾ ಮಣ್ಣಿಗೆ ಸೇರಿಸುವ ಕ್ರಮಗಳು ನಮ್ಮ ದೈನಂದಿನ ಚರ್ಯೆಯಾಗಬೇಕಿದೆ. ಇಂಥ ಒಳನೋಟಗಳುಳ್ಳ ಸರಳ ಹಾಗೂ ಸಹಜ ಜೀವನವಿಧಾನಗಳನ್ನು ಹುಡುಕುತ್ತ, ಅವನ್ನು ಸುತ್ತಲ ಸಮುದಾಯದ ಬಳಕೆಯಲ್ಲಿ ಪ್ರೋತ್ಸಾಹಿಸುವುದೇ ನಾವು ಕೈಗೊಂಡಿರುವ ಎಲ್ಲ ಜಾಗೃತಿ ಕಾರ್ಯಗಳ ಹಿಂದಿನ ಹೂರಣ."**

**ಕಾ**ಲೇಜಿನ ಅಧ್ಯಾಪಕ ಜೀವನವು ಎರಡು ದಶಕಗಳನ್ನೂ ದಾಟಿ ಸರಾಗವಾಗಿ ಹಾಗೂ ಸಂತಸದಿಂದ ಸಾಗಿತ್ತು. ಆನಂತರವೇಕೋ ಹುಟ್ಟಿದೂರಿಗೆ ಮರಳುವ ಆಸೆ ತೀವ್ರವಾಗತೊಡಗಿತು. ಊರಿಗೆ ಬಂದು, ಹೆತ್ತವರು-ಬಂಧುಗಳೊಂದಿಗೆ ಅವಸರವಿಲ್ಲದ ಜೀವನ ನಡೆಸುವುದು ಆ ಕ್ಷಣದ ಮುಖ್ಯ ಕಾರಣವೆನ್ನಬೇಕು. ಜೊತೆಗೆ, ಬೇಸಾಯಕ್ಕೆ ಪೂರ್ಣ ತೆರೆದುಕೊಂಡು ಏನನ್ನೋ ಅಸ್ಪಷ್ಟ-ಅವ್ಯಕ್ತವಾದದ್ದನ್ನು ಸಾಧಿಸುವ ಹುಂಬ ಆಶಯವೂ ಇತ್ತು! ಕೃಷಿಕುಟುಂಬದ ನನ್ನ ಹಿನ್ನೆಲೆಯ ಮುಂದುವರಿಕೆಯೋ ಎಂಬಂತೆ ಅರಳಿದ ಸಂರಕ್ಷಣಾ ಜೀವಶಾಸ್ತ್ರದ ನನ್ನ ಅಧ್ಯಯನ-ಅಧ್ಯಾಪನ ಜೀವನವೇ ಇದಕ್ಕೆ ಕಾರಣವಿದ್ದೀತು ಎಂಬುದು ನನ್ನ ನಂಬಿಕೆ. ಮಲೆನಾಡಿನ ತಪ್ಪಲಿನ ಪುಟ್ಟ ಜಮೀನಿನಲ್ಲಿ ನನ್ನ ಕೃಷಿ ಪಯಣ ಆರಂಭವಾಗಿದ್ದು ಹೀಗೆ.

ಊರಿಗೆ ಮರಳಿ ಜಮೀನಿಗೆ ಕಾಲಿಟ್ಟಾಗಲೇ ನೆನಪಾಗಿದ್ದು, ದೂರದ ಬೆಟ್ಟ ನುಣ್ಣನೆಯದಲ್ಲ ಎಂದು. ಕೇವಲ ಮೂರು ದಶಕಗಳಲ್ಲಿ, ಎಳವೆಯಲ್ಲಿ ಅನುಭವಿಸಿದ್ದ ಮಲೆನಾಡಿನ ಕೃಷಿಯ ಒಳನೋಟ ಹಾಗೂ ಆಚರಣೆಗಳೆಲ್ಲ ಇದೀಗ ಭಾರಿ ಬದಲಾಗಿರುವದು ಅರಿವಾಗತೊಡಗಿತು. ಹಟ್ಟಿಗೊಬ್ಬರ ಸಾಲದಾಗಿ ಥರಾವರಿ ರಾಸಾಯನಿಕ ಗೊಬ್ಬರ ಸುರಿಯುವುದು. ಜಮೀನಿನ ಕೆರೆ-ಬಾವಿಗಳು ಹಾಗೂ ತೋಟದಂಚಿನ ಕಾಲುವೆಯ ನೀರೆಲ್ಲ ಚಳಿಗಾಲದಲ್ಲೇ ಒಣಗುವುದರಿಂದ, ಹಳ್ಳಿಯೊಂದರ ದಶದಿಕ್ಕುಗಳಲ್ಲಿಯೂ ಕೊಳವೆಬಾವಿ ಕೊರೆಸಿರುವುದು. ವರ್ಷಕ್ಕೊಮ್ಮೆ ಮೈಲುತುತ್ತ ದ್ರಾವಣ ಸಿಂಪರಣೆ ಬಿಟ್ಟು ಬೇರೇನೂ ತಿಳಿಯದಿದ್ದ ರೈತರ ಮಕ್ಕಳ ಬಾಯಲ್ಲಿ ನಲಿದಾಡುವ ಹತ್ತಾರು ಬಗೆಯ ಕ್ರಿಮಿನಾಶಕ ಹಾಗೂ ಕಳೆನಾಶಕಗಳ ಹೆಸರುಗಳು. ತೋಟ ಬಿಟ್ಟು ಕೇರಿಯ ಅಂಗಳಕ್ಕೆ ಹೋದರೆ, ಪೆಟ್ರೋಲ್-ಬಂಕನ್ನೇ ಬೇಡುವ ಕಾರು, ಟ್ರಾಕ್ಟರ್, ಪವರ್-ಟಿಲ್ಲರ್, ಕಳೆಯಂತ್ರ- ಒಬ್ಬೊಬ್ಬರ ಮನೆಯಲ್ಲೂ ಒಂದೊಂದು! ಬೆಳೆದ ಮಕ್ಕಳೆಲ್ಲ ದೂರದೂರಿನ ಉದ್ಯೋಗದ ಪಾಲಾದರೆ, ಮನೆತುಂಬ ಮಾತ್ರ ಹತ್ತಾರು ಬಗೆಯ ಪ್ಲಾಸ್ಟಿಕ್ ಸರಕುಗಳ ಸಾಲು. ಲಾಗಾಯ್ತಿನಿಂದ ಹಳ್ಳಿಗರ ಉತ್ಪಾದನೆ-ಬಳಕೆಯಲ್ಲಿ ರೂಢಿಗತವಾಗಿದ್ದ ಒಂದು ಬಗೆಯ ಚಕ್ರೀಯ ಸಮತೋಲನವೇ ತಪ್ಪಿಹೋದಂತಿದೆ. ಮನೆ-ಕೊಟ್ಟಿಗೆ, ಗದ್ದೆ-ತೋಟ, ಊರು-ಕೇರಿ, ಒಂದೊಂದೂ ಪರಾವಲಂಬಿಯಾಗಿವೆ. ಎಷ್ಟೆಲ್ಲ ದುಡಿದು ಗಳಿಸಿದ ಹಣವನ್ನೆಲ್ಲ ಹಳ್ಳಿಗಳು ಪಟ್ಟಣದಲ್ಲಿ ಚೆಲ್ಲುತ್ತಿವೆ ಅಥವಾ ಚೆಲ್ಲಲಿಕ್ಕೆಂದೇ ಗಳಿಸುತ್ತಿವೆ! ನಗರಗಳಿಗೆ ಕಡಿಮೆಯಿಲ್ಲವೆಂಬಂತೆ, ವಾತಾವರಣದ ಇಂಗಾಲದ ಭಾರ ಹೆಚ್ಚಿಸಲು ತಾವೂ ಕೊಡುಗೆ ನೀಡುತ್ತಿವೆ. ಆರ್ಥಿಕವಾಗಿ ಹಾಗೂ ಪಾರಿಸರಿಕವಾಗಿ ನಮ್ಮ ಹಳ್ಳಿಗಳು ಗಂಭೀರ ಅಪಾಯದೆಡೆಗೆ ವೇಗವಾಗಿ ಜಾರುತ್ತಿರುವ ಪ್ರಸಕ್ತ ವಿದ್ಯಮಾನವಿದು.

ಮಲೆನಾಡಿನ ಕೃಷಿಯೆಂದರೆ, ಇಲ್ಲಿನ ಕಾಡು-ನದಿ-ಕಣಿವೆಗಳ ಪರಿಸರದ ಜೊತೆಗೇ ವಿಕಾಸವಾದ ಸಾವಯವ ಸಂಬಂಧಗಳ ಸರಪಣಿಯೇ ಸರಿ. ಹೀಗಾಗಿ, ಕೃಷಿ ಕ್ಷೇತ್ರದಲ್ಲಿ ಆದ ಏನೆಲ್ಲ ಪಲ್ಲಟಗಳ ಪರಿಣಾಮ ಸುತ್ತಲ ಪ್ರಕೃತಿಯ ಮೇಲೂ ಆಗಲೇಬೇಕಲ್ಲವೇ? ಅದಕ್ಕೇ ತಾನೆ, ಕಾಡು ನಾಶವಾಗುತ್ತಿರುವದು ಅಥವಾ ಗೋಮಾಳಗಳು ಕಣ್ಮರೆಯಾಗುತ್ತಿರುವುದು, ಕೆರೆಗಳು ಹೂಳುತುಂಬಿ ಅತಿಕ್ರಮಣವಾಗುತ್ತಿರುವುದು? ಹೊಳೆ-ತೊರೆಗಳ ನೀರು ಮಾಲಿನ್ಯಗೊಳ್ಳುತ್ತಿರುವುದು? ಮಲೆನಾಡಿನ ಒಟ್ಟೂ ಪರಿಸರ ಹಾಗೂ ಅದನ್ನಾಧರಿಸಿದ ಸಮುದಾಯದ ಬದುಕು-ಇವೆರಡೂ, ಹದ-ಹದ್ದು ಮೀರಿ, ಅಪಾಯದೆಡೆಗೆ ಜಾರುತ್ತಿವೆ ಎನ್ನುವುದಕ್ಕೆ ಕಣ್ಮುಂದೆ ಇಂದು ನೂರೆಂಟು ಸಾಕ್ಷಿಗಳಿವೆ. ಇದಕ್ಕೆಲ್ಲ ತಡೆಯೊಡ್ಡಲು ಸರ್ಕಾರ ಏನು ಮಾಡಬೇಕೆಂಬುದು ಬಹಳ ಸಂಕೀರ್ಣವಾದ ಪ್ರತ್ಯೇಕ ವಿಚಾರ. ಆದರೆ, ಸಮುದಾಯದ ಭಾಗವಾಗಿ ನಾವೇನಾದರೂ ಮಾಡಬೇಕಲ್ಲವೇ?

ಈ ನಿಟ್ಟಿನಲ್ಲಿ ಚಿಂತಿಸಿ, ಪಶ್ಚಿಮಘಟ್ಟದ ತಪ್ಪಲಿನ ನಮ್ಮ ಕೃಷಿಯಾಧಾರಿತ ಸಮುದಾಯಗಳ ಬದುಕನ್ನು ಸುಸ್ಥಿರ ನಿಲುವಿನೆಡೆಗೆ ತಿರುಗಿಸಲು ಕೊಂಚವಾದರೂ ಪ್ರಯತ್ನಿಸಬೇಕೆಂಬ ತುಡಿತದಿಂದ ಆರಂಭವಾದದ್ದೇ, ನಮ್ಮ 'ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ'. ಹಲವಾರು ಮಿತ್ರರ ಜೊತೆಯಾಗಿ ಆರಂಭಿಸಿದ ಪುಟ್ಟ ಶೈಕ್ಷಣಿಕ ಸಂಸ್ಥೆಯಿದು. ಇದರಲ್ಲಿ ಮೂರು ಮುಖ್ಯ ಕಾರ್ಯಕ್ರಮಗಳಿವೆ.



ಒಂದನೆಯದು, ಸಂಶೋಧನಾ ಕಾರ್ಯ. ಇಲ್ಲಿನ ಕಾಡು-ಗೋಮಾಳಗಳ ಸ್ವರೂಪ, ಸಸ್ಯವೈವಿಧ್ಯದ ಹರವು, ಗಿಡಮೂಲಿಕೆಗಳ ಗುಣಲಕ್ಷಣಗಳು, ನದಿ-ಕೆರೆಗಳ ಜೈವಿಕಲೋಕ ಇತ್ಯಾದಿ ವಿಷಯಗಳ ಕುರಿತು ಕೆಲವು ಅಮೂಲ್ಯ ಅಧ್ಯಯನಗಳು ಇದೀಗ ಇಲ್ಲಿ ಸಾಗಿವೆ. ಇವನ್ನೆಲ್ಲ ವಿವಿಧ ಶೈಕ್ಷಣಿಕ ಹಾಗೂ ಸಂಶೋಧನಾ ಸಂಸ್ಥೆಗಳ ಆರ್ಥಿಕ ಸಹಾಯದೊಂದಿಗೆ ಕೈಗೊಳ್ಳುವ ಪ್ರಯತ್ನ ಮಾಡಲಾಗುತ್ತಿದೆ. ಈ ಮೂಲಕ ಕೆಲವು ಆಸಕ್ತ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂಶೋಧನಾ ತರಬೇತಿ ನೀಡಲೂ ಸಾಧ್ಯವಾಗುತ್ತಿದೆ.

ಎರಡನೆಯದು, ಸಾರ್ವಜನಿಕ ನೀತಿನಿರೂಪಣಾ ಕಾರ್ಯ. ನಮ್ಮೀ ಆಧುನಿಕ ಸಮಾಜದ ಅಭಿವೃದ್ಧಿ ಆಶಯಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆಯಲ್ಲವೇ? ವಿವಿಧ ಸರ್ಕಾರಿ ಅಥವಾ ಖಾಸಗಿ ಮೂಲದ ಬೃಹತ್ ಯೋಜನೆಗಳು, 'ಅಭಿವೃದ್ಧಿ' ಎಂಬ ಹೆಸರಿನಲ್ಲಿ ದಿನಂಪ್ರತಿ ಬರುತ್ತಿವೆ. ಕಾಡು-ಕೆರೆ ನಾಶ ಮಾಡಿಯೇ ಸಾಗುವ ಹೆದ್ದಾರಿ, ಕಾರ್ಖಾನೆ, ಅಣೆಕಟ್ಟು, ವಿದ್ಯುತ್ ಸ್ಥಾವರಗಳು, ಕಾಲುವೆಗಳು, ಚಿತ್ರ-ವಿಚಿತ್ರ ಪ್ರವಾಸಿ ಯೋಜನೆಗಳು- ಒಂದೇ, ಎರಡೇ? ಇವು ನಿಜಕ್ಕೂ ಸ್ಥಳೀಯರಿಗೆ ಬೇಕಾದದ್ದೇ? ಭವಿಷ್ಯದಲ್ಲಿ ಸ್ಥಳೀಯ ಜನಜೀವನ ಹಾಗೂ ಪರಿಸರದ ಮೇಲಣ ಅವುಗಳ ಪರಿಣಾಮವೇನು? ಈ ಕುರಿತಂತೆಲ್ಲ ಯೋಚಿಸುವುದು ಬಹು ಅಗತ್ಯ. ಆದರೆ, ಇವನ್ನೆಲ್ಲ ಚಿಂತಿಸುವುದು ಆಳುವ ವರ್ಗಕ್ಕೆ ಬಹಳ ಸಲ ಅಪಥ್ಯ! ಹೀಗಾಗಿ, ಈ ಬಗೆಯ ಸಂದರ್ಭಗಳು ಎದುರಾದಾಗಲೆಲ್ಲ ಸಾರ್ವಜನಿಕರನ್ನು ಜಾಗೃತಗೊಳಿಸುವ ಹಾಗೂ ಅವರ ಅಭಿಪ್ರಾಯ ಕ್ರೋಢೀಕರಿಸುವ ಕಾರ್ಯದಲ್ಲೂ ನಮ್ಮ ಪ್ರಯತ್ನ ಸಾಗಿದೆ. ಪತ್ರಿಕಾ ಲೇಖನಗಳು, ಸಮಾಲೋಚನಾ ಸಭೆಗಳು, ಜನಪ್ರತಿನಿಧಿಗಳಿಗೆ ಮನವರಿಕೆ ಮಾಡಿಸುವುದು- ಈ ಬಗೆಯ ವಿವಿಧ ಆಯಾಮಗಳ ಪ್ರಯತ್ನಗಳ ಮೂಲಕ, ಈ ನೀತಿ ನಿರೂಪಣಾ ಕಾರ್ಯ ಸಾಗಿದೆ.

ಮೂರನೆಯದು, ಜನರನ್ನು ತಲುಪಲು ಅಗತ್ಯವಿರುವ ತರಬೇತಿ ಕಾರ್ಯಕ್ರಮಗಳು. ನಮ್ಮ ಬದುಕನ್ನು 'ಸುಸ್ಥಿರ ಅಭಿವೃದ್ಧಿ' ದಿಕ್ಕಿನೆಡೆಗೆ ಸಾಗಿಸಬೇಕೆಂದರೆ, ಸಮಾಜದ ಎಲ್ಲ ಅಂಗಗಳಲ್ಲೂ ಮನಃಪರಿವರ್ತನೆಯಾಗಬೇಕು. ಆನಂತರ ಸುಸ್ಥಿರ ಜೀವನಶೈಲಿಯ ಸಾಧ್ಯತೆಗಳ ಸಮಕಾಲೀನ ಅರಿವಿನ ಪ್ರಸರಣವಾಗಬೇಕು. ಅದಕ್ಕೆ ಅಗತ್ಯವಿರುವ ವಿವಿಧ ಕುಶಲ ತಂತ್ರಗಳ ತರಬೇತಿಯಾಗಬೇಕು. ಸಮಾಜದ ಎಲ್ಲ ಸ್ತರಗಳ ವಿವಿಧ ಘಟಕಗಳೊಂದಿಗೆ ಬೆರೆತು, ಈ ಬಗೆಯ ತರಬೇತಿಗಳನ್ನು ಇದೀಗ ಹಮ್ಮಿಕೊಳ್ಳಲಾಗುತ್ತಿದೆ. ಸೀಮಿತ ವೆಚ್ಚದಲ್ಲಿ ಸರಳವಾಗಿ ಆಯೋಜಿಸುವ ಒಂದು ಅಥವಾ ಎರಡು ದಿನಗಳ ಈ ತರಬೇತಿ ಕಾರ್ಯಕ್ರಮಗಳನ್ನು, ಸ್ಥಳೀಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ಸಹಕಾರಿ ಸಂಸ್ಥೆಗಳು ಪ್ರಾಯೋಜಿಸುತ್ತಿವೆ. ವಿದ್ಯಾರ್ಥಿಗಳು, ರೈತರು, ಮಹಿಳೆಯರು, ಕೂಲಿಕಾರ್ಮಿಕರು, ನವ-ಉದ್ಯೋಗಿಗಳು, ಉದ್ಯಮಿಗಳು, ಪಂಚಾಯತ್‌ರಾಜ್ ಜನಪ್ರತಿನಿಧಿಗಳು – ಇವರೆಲ್ಲರನ್ನು ಒಂದಲ್ಲ ಒಂದು ಬಗೆಯಲ್ಲಿ ತಲುಪುವ ಪ್ರಯತ್ನ ಸಾಗಿದೆ. ಇವು ಕೇವಲ ಮಾಹಿತಿ ನೀಡುವ ಏಕಮುಖ ಭಾಷಣ ಕಾರ್ಯಕ್ರಮಗಳಲ್ಲ. ಸ್ಥಳೀಯರಲ್ಲೇ ಇರುವ ಅಮೂಲ್ಯ ಮಾಹಿತಿ-ಅನುಭವಗಳ ವಿನಿಮಯ ಕಾರ್ಯ ಸಹ.

ಸಮಾಜದಲ್ಲಿ ಈ ಕುರಿತು ಸಾಧನೆ ಮಾಡಿರುವ ಸಾಧಕರ ಯಶೋಗಾಥೆಗಳನ್ನು ಉಳಿದೆಡೆಗೆ ತಲುಪಿಸುವ ಕಾರ್ಯ ಕೂಡ.

ಕಳೆದ ಮೂರು ವರ್ಷಗಳಿಂದ ನಾವು ಹಮ್ಮಿಕೊಳ್ಳುತ್ತಿರುವ ಈ ಬಗೆಯ ತರಬೇತಿ/ಜಾಗೃತಿ ಕಾರ್ಯಗಳ ಹಿಂದಿನ ಮೂಲಭೂತ ಉದ್ದೇಶ ಸ್ಪಷ್ಟವಿದೆ. ನಾವೀಗ ಏರಿ ಹೊರಟಿರುವ 'ಅಭಿವೃದ್ಧಿ ರಥ' ಬಹಳ ದೂರ ಸಾಗಲಾರದು. ಇದು ಒಟ್ಟಾರೆ ಜೀವಪರಿಸರವನ್ನೇ ತೀವ್ರವಾಗಿ ಘಾಸಿಗೊಳಿಸಿ, ಸದ್ಯದ ಭವಿಷ್ಯದಲ್ಲೇ ನಮ್ಮನ್ನು ಇನ್ನಷ್ಟು ಸಂಕಷ್ಟಕ್ಕೀಡುಮಾಡುವಂಥಾದ್ದು. ಆರ್ಥಿಕವಾಗಿಯೂ ಅದು ಸಾಧುವಲ್ಲ. ಏಕೆಂದರೆ, ಈ ಆಧುನಿಕ ಜೀವನ ವಿಧಾನ ಹುಟ್ಟಿಹಾಕುತ್ತಿರುವ ಭೋಗಸಂಸ್ಕೃತಿಯನ್ನೇ ಎಲ್ಲರೂ ಅಪ್ಪಿಕೊಂಡರೆ, ನಮ್ಮನ್ನು ಪೊರೆಯುತ್ತಿರುವ ಪ್ರಕೃತಿಯ ಮೂಲಭೂತ ಸಂರಚನೆಯೇ ಕುಸಿದು ಪ್ರಾಕೃತಿಕ ಅನಾಹುತಗಳು ಊಹೆಗೂ ಮೀರಿ ಹೆಚ್ಚಬಹುದು. 'ಹವಾಮಾನ ಬದಲಾವಣೆ'ಯ ಈವರೆಗಿನ ಪರಿಣಾಮಗಳನ್ನು ಎದುರಿಸಲೇ ನಾವು ಸೋಲುತ್ತಿರುವಾಗ, ಕೊಳ್ಳುಬಾಕ ಸಂಸ್ಕೃತಿಯು ಇನ್ನೂ ಹೆಚ್ಚಿದರೆ ಏನಾದೀತು? ಅಂದರೆ, ಸಮಾಜದ ಬಹುಪಾಲು ಜನ ಈ ಭೋಗಜೀವನವನ್ನು ಸಾಗಿಸಲು ವಾಸ್ತವದಲ್ಲಿ ಸಾಧ್ಯವೇ ಇಲ್ಲ! ಹೀಗಾಗಿ, ಈ ಜೀವನವಿಧಾನಕ್ಕೆ ಕನಿಷ್ಠ ನೈತಿಕತೆಯೂ ಇಲ್ಲ.

ಹಾಗಾದರೆ, ಈಗೇನು ಮಾಡಬೇಕು? ಪರಿಸರಕ್ಕೆ ಪೂರಕವಾದ ಹಾಗೂ ಬಹುಜನರ ಶ್ರೇಯೋಭಿವೃದ್ಧಿ ಸಾಧಿಸುವ ಬದಲೀ ಜೀವನ ವಿಧಾನಗಳನ್ನು ನಾವು ಒಳಗೊಳ್ಳಲೇಬೇಕಿದೆ. ನಾವು ಬಳಸುವ ನೈಸರ್ಗಿಕ ಸಂಪನ್ಮೂಲಗಳೆಲ್ಲವೂ ಆ ಪರಿಸರದಲ್ಲಿ ಪ್ರಾಕೃತಿಕವಾಗಿ ದೊರಕುವ ಮಿತಿಯಲ್ಲಿಯೇ ಇರಬೇಕಾದ ವಿವೇಕ ಮೈಗೂಡಬೇಕಿದೆ. ಬಳಸುವ ಸರಕಿರಲಿ ಅಥವಾ ಚೆಲ್ಲುವ ತ್ಯಾಜ್ಯವಿರಲಿ, ಕಡಿಮೆಯಾಗುತ್ತಾ ಸಾಗಬೇಕು. ಬಿಸಾಡುವ ಕಸವನ್ನೂ ಒಂದಲ್ಲ ಒಂದು ಬಗೆಯಲ್ಲಿ ಮರುಬಳಕೆ ಮಾಡುವ ಅಥವಾ ಮಣ್ಣಿಗೆ ಸೇರಿಸುವ ಕ್ರಮಗಳು ನಮ್ಮ ದೈನಂದಿನ ಚರ್ಯೆಯಾಗಬೇಕಿದೆ. ಇಂಥ ಒಳನೋಟಗಳುಳ್ಳ ಸರಳ ಹಾಗೂ ಸಹಜ ಜೀವನವಿಧಾನಗಳನ್ನು ಹುಡುಕುತ್ತ, ಅವನ್ನು ಸುತ್ತಲ ಸಮುದಾಯದ ಬಳಕೆಯಲ್ಲಿ ಪ್ರೋತ್ಸಾಹಿಸುವುದೇ ನಾವು ಕೈಗೊಂಡಿರುವ ಎಲ್ಲ ಜಾಗೃತಿ ಕಾರ್ಯಗಳ ಹಿಂದಿನ ಹೂರಣ.

ಶಾಲೆ-ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಗ್ರಾಮೀಣ ಕುಶಲಕರ್ಮಿಗಳು, ರೈತರು, ಗೃಹಿಣಿಯರು, ಸರ್ಕಾರಿ ಹಾಗೂ ಖಾಸಗಿ ಉದ್ಯೋಗಿಗಳು, ಸಣ್ಣ ಉದ್ಯಮಿಗಳು, ಸಹಕಾರಿ ಹಾಗೂ ಸ್ವಯಂಸೇವಾ ಸಂಸ್ಥೆಗಳು, ಸ್ಥಳೀಯ ಜನಪ್ರತಿನಿಧಿಗಳು, ಸ್ವಯಂಸೇವಾ ಸಂಸ್ಥೆಗಳು- ಹೀಗೆ ಎಲ್ಲರನ್ನೂ ತಲುಪುವ ಪ್ರಯತ್ನ ಸಾಗಿದೆ. ಶಿಕ್ಷಣ ಹಾಗೂ ಸಹಕಾರಿ ಸಂಸ್ಥೆಗಳ ಮಾಸಿಕ ಸಭೆಗಳು, ಪಂಚಾಯತ್ ಮೀಟಿಂಗ್‌ಗಳು, ದೇವಸ್ಥಾನಗಳ ಸಾರ್ವಜನಿಕ ಪೂಜಾ ಕಾರ್ಯಕ್ರಮಗಳು, ಊರಿನ ಸಂತೆ, ಮದುವೆ-ಮುಂಜಿಯಂಥ ಖಾಸಗಿ ಕಾರ್ಯಕ್ರಮ ಇಂಥ ಕಡೆಗಳಲ್ಲೂ ನಮ್ಮ ನಿಲುವು ಪ್ರಸಾರಮಾಡಲು ಅವಕಾಶ ಬೇಡುತ್ತೇವೆ. ನಮ್ಮ ಈ ಆಶಯಗಳನ್ನೆಲ್ಲವನ್ನೂ ನಮ್ಮದೇ ಮಿತಿಯೊಳಗೆ, ಸುತ್ತಲ ಎರಡು-ಮೂರು ತಾಲ್ಲೂಕುಗಳಲ್ಲಿ ಒಂದು ಲೋಕಶಿಕ್ಷಣ ಅಭಿಯಾನವಾಗಿ ರೂಪಿಸುವ ಪ್ರಯತ್ನ ಸಾಗಿದೆ.

ಈ ಜನಶಿಕ್ಷಣ ಹಾಗೂ ತರಬೇತಿ ಕಾರ್ಯಗಳಲ್ಲಿ ಈ ಕೆಳಗಿನ ಅಂಶಗಳಿಗೆ ಆದ್ಯತೆ ನೀಡಲಾಗುತ್ತಿದೆ.

ವೈಯಕ್ತಿಕ ಹಾಗೂ ಕುಟುಂಬದ ಮಟ್ಟದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಜೀವನವಿಧಾನಗಳು:

- ನೀರಿನ ಮಿತಬಳಕೆ. ಈ ಕುರಿತು ಈಗಾಗಲೇ ಪರಿಣಾಮಕಾರಿಯಾಗಿ ಬಳಸುತ್ತಿರುವ ಸರಳ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ.
- ಗೃಹತ್ಯಾಜ್ಯದ ನೀರನ್ನು ಹೂದೋಟ-ಕೈತೋಟಗಳಲ್ಲಿ ಬಳಸುವುದು
- ಮನೆಯಲ್ಲಿ ಚಿಕ್ಕದಾದರೂ ಕೈತೋಟ ಬೆಳೆಸಿ, ಮನೆಬಳಕೆಯ ಕೆಲವಾದರೂ ಹಣ್ಣು-ತರಕಾರಿ ಬೆಳೆಸುವುದು.
- ಮನೆಮಟ್ಟದಲ್ಲಿ ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆ ಕಡಿಮೆ ಮಾಡುವುದು ಹಾಗೂ ೪೦ ಮೈಕ್ರಾನ್‌ಗಿಂತ ತೆಳುವಾದ ಪ್ಲಾಸ್ಟಿಕ್ ಉತ್ಪನ್ನಗಳನ್ನು (ಪಾಲಿಥೀನ್ ಲಕೋಟೆಗಳು) ಸಾಧ್ಯವಾದಷ್ಟು ಕೈಬಿಡುವುದು.
- ಸಾವಯವ ತ್ಯಾಜ್ಯಗಳನ್ನು ಬಳಸಿ, ಮನೆಯ ಅಂಗಳದಲ್ಲಿ ಅಥವಾ ತೋಟದಲ್ಲಿ ಕಾಂಪೋಸ್ಟ್-ಗೊಬ್ಬರ ತಯಾರಿಸುವುದು.
- ಬೆಕ್ಕು, ನಾಯಿ, ದನ-ಯಾವುದೇ ಸಾಕುಪ್ರಾಣಿಗಳಿರಲಿ, ಕೆಲವಾದರೂ ಸ್ಥಳೀಯ ಪ್ರಭೇದಗಳಿರುವಂತೆ ನೋಡಿಕೊಳ್ಳುವುದು.
- ಅನುಕೂಲಸ್ಥ ರೈತರು ಗೋಬರ್-ಗ್ಯಾಸ್ ಸ್ಥಾವರ ಸ್ಥಾಪಿಸಿ, ಅಡುಗೆಗೆ ಜೈವಿಕ ಇಂಧನ ಬಳಸುವುದು.
- ಕಡಿಮೆ ಕಟ್ಟಿಗೆ ಬಳಸುವ ಅಸ್ತ್ರ ಒಲೆ, ಸೋಲಾರ್ ನೀರು ಕಾಯಿಸುವ ಯಂತ್ರ, ಸೋಲಾರ್ ಕೃಷಿ ಉತ್ಪನ್ನ ಡ್ರೈಯರ್, ಇತ್ಯಾದಿ ಸುಸ್ಥಿರ ಇಂಧನಮೂಲಗಳ ಬಳಕೆಯನ್ನು ಗೃಹ ಮಟ್ಟದಲ್ಲಿ ಪ್ರೋತ್ಸಾಹಿಸುವುದು.
- ಟಿವಿ, ವಿದ್ಯುತ್ ಬಲ್ಬ್, ರೆಫ್ರಿಜರೇಟರ್, ನೀರಿನ ಪಂಪ್‌ಸೆಟ್, ಅಲಂಕಾರಿಕ ವಿದ್ಯುತ್-ಇತ್ಯಾದಿಗಳ ಅನವಶ್ಯಕ ಬಳಕೆ ಕಡಿಮೆ ಮಾಡಿ, ವಿದ್ಯುತ್ ಬಳಕೆಯಲ್ಲಿ ಮಿತವ್ಯಯ ಸಾಧಿಸುವುದು.
- ಅಮೃತಬಳ್ಳಿ, ಸಾಂಬ್ರಾಣಿ, ಎಲವರಿಗೆ, ಬ್ರಾಹ್ಮಿ, ಕಹಿಬೇವು, ನೆಲನೆಲ್ಲಿ, ಪಾರಿಜಾತ, ಲೋಳೆಸರ, ಗರಿಕೆ, ತುಳಸಿ ಇತ್ಯಾದಿ ಕೆಲವಾದರೂ ಗಿಡಮೂಲಿಕೆಗಳನ್ನು ಮನೆಯ ಪ್ರಾಂಗಣದಲ್ಲಿ ಬೆಳೆಸಿ, ದೈನಂದಿನ ಆರೋಗ್ಯ ನಿರ್ವಹಣೆಯ ಮನೆಮದ್ದಿನಲ್ಲಿ ಬಳಸುವುದು.
- ದೈನಂದಿನ ಸಮೀಪದ ಓಡಾಟಗಳನ್ನು ಸಾಧ್ಯವಾದಷ್ಟು ವಾಹನವಿಲ್ಲದೆ ನಡೆಸುವುದು, ವೈಯಕ್ತಿಕ ವಾಹನಗಳ ಬಳಕೆಗೆ ಸ್ವಯಂಮಿತಿ ಹೇರಿಕೊಳ್ಳುವುದು.
- ಹನಿ ನೀರಾವರಿ, ಸ್ಥಳೀಯವಾಗಿ ಉತ್ಪಾದಿಸುವ ಸಾವಯವ ಗೊಬ್ಬರ, ಬೆಳೆಗಳ ರೋಗನಿಯಂತ್ರಣಕ್ಕಾಗಿ ಜೈವಿಕ ನಿಯಂತ್ರಣ ವಿಧಾನಗಳು- ಇತ್ಯಾದಿ, ಸುಸ್ಥಿರ ಕೃಷಿತಂತ್ರಗಳ ಬಳಕೆಯನ್ನು ರೈತಾಪಿ ವರ್ಗದಲ್ಲಿ ಪ್ರೋತ್ಸಾಹಿಸುವುದು.
- ಕೃತಕ ರಾಸಾಯನಿಕಗಳ ಕ್ರಿಮಿನಾಶಕಗಳು ಹಾಗೂ ಕಳೆನಾಶಕಗಳ ಬಳಕೆಯನ್ನು ಕಡಿಮೆಮಾಡುವುದು ಹಾಗೂ ಬಳಸುವಾಗಲೂ ಎಲ್ಲ ಬಗೆಯ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಸಂಪೂರ್ಣವಾಗಿ ಪಾಲಿಸುವುದು.

ಸಮುದಾಯ ಮಟ್ಟದಲ್ಲಿ ಒಗ್ಗಿಸಿಕೊಳ್ಳಬೇಕಾದ ಆಚರಣೆಗಳು ಹಾಗೂ ಜೀವನ ವಿಧಾನಗಳು:

- ಊರು-ಕೇರಿಗಳ ಸ್ವಚ್ಛತೆಯಲ್ಲಿ ಸ್ಥಳೀಯರು, ವಿಶೇಷವಾಗಿ ಯುವಕರು ತೊಡಗಿಕೊಳ್ಳಲು ಪ್ರೋತ್ಸಾಹಿಸುವುದು.
- ಊರಿನ ತ್ಯಾಜ್ಯಗಳನ್ನು ಸಾಮೂಹಿಕ ಕಾಂಪೋಸ್ಟ್ ತಯಾರಿಯಲ್ಲಿ ಬಳಸುವುದು.
- ಹೊಳೆ-ಕೆರೆಗಳ ನೀರು ಮಲಿನವಾಗದಂತೆ, ಸ್ಥಳೀಯರು ನಿರಂತರ ನಿಗಾ ವಹಿಸುವುದು.
- ಜಲಾನಯನ ಅಭಿವೃದ್ಧಿ ತತ್ವದ ಆಧಾರದಲ್ಲಿ ಊರಿನ ಗೋಮಾಳ, ಕಾಡು ಹಾಗೂ ಕೃಷಿಭೂಮಿ ಮಣ್ಣನ್ನು ನಿರ್ವಹಿಸುವುದು.
- ಕೃಷಿಯಲ್ಲಿ ಕೆರೆ, ತೆರೆದ ಬಾವಿ, ಹರಿವ ನೀರಿನ ಬಳಕೆಗೆ ಆದ್ಯತೆ ನೀಡುವುದು.
- ಗ್ರಾಮಸ್ಥರ ಸಹಭಾಗಿತ್ವವುಳ್ಳ ಸಮಿತಿಗಳ ಮೂಲಕ ಊರಿನ ಕೆರೆಗಳನ್ನು ನಿರ್ವಹಿಸುವ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದು. ಹೂಳು ತುಂಬದಂತೆ, ಕಳೆ ಬೆಳೆಯದಂತೆ, ಮಲಿನವಾಗದಂತೆ ಕೆರೆಗಳ ನಿರಂತರ ನಿರ್ವಹಣೆ ಕೈಗೊಳ್ಳುವುದು.
- ಗ್ರಾಮ ಅರಣ್ಯ ಸಮಿತಿ, ಸ್ವಯಂಸೇವಾ ಸಂಸ್ಥೆಗಳು, ರೈತ ಉತ್ಪಾದಕ ಕಂಪನಿಗಳು, ಸಹಕಾರಿ ಸಂಘಗಳು ಸ್ವಸೇವಾ ಗುಂಪುಗಳು- ಈ ಎಲ್ಲ ಬಗೆಯ ಸ್ಥಳೀಯ ಘಟಕಗಳು ಪಂಚಾಯತ್ ವ್ಯವಸ್ಥೆಯ ಸಹಭಾಗಿತ್ವದೊಂದಿಗೆ ಊರಿನ ಸಾಮೂಹಿಕ ಆಸ್ತಿಗಳಾದ ಕೆರೆ, ಹಳ್ಳ, ಕಾಡು, ಗೋಮಾಳಗಳನ್ನು ಸುವ್ಯವಸ್ಥಿತವಾಗಿ ನಿರ್ವಹಿಸಲು ಪ್ರೇರಣೆ ನೀಡುವುದು.
- ಜೇನು ಸಾಕಣೆ, ತ್ಯಾಜ್ಯದಿಂದ ಗೊಬ್ಬರ ತಯಾರಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ, ಮೀನುಸಾಕಣೆ, ಔಷಧಮೂಲಿಕೆ ಕೃಷಿ, ಸಾಂಬಾರು ಬೆಳೆ ಸಂಸ್ಕರಣೆ, ಕೃಷಿ-ಕುಶಲಕರ್ಮಿಗಳು ಇತ್ಯಾದಿ ಕ್ಷೇತ್ರಗಳಲ್ಲಿ, ಉದ್ಯೋಗ-ಉದ್ಯಮ ನಿರ್ಮಿಸುವ ಕಾರ್ಯಗಳಿಗೆ ಪ್ರೋತ್ಸಾಹ ನೀಡುವುದು. ಈ ಕುರಿತು ಆಸಕ್ತರಿಗೆ ಸೂಕ್ತ ಸಂಸ್ಥೆಗಳ ಮೂಲಕ ತರಬೇತಿ-ಮಾಹಿತಿ ದೊರಕಿಸಿ, ಗ್ರಾಮೀಣ ಆರ್ಥಿಕತೆಗೆ ಪ್ರೋತ್ಸಾಹ ನೀಡುವುದು.
- ಮದುವೆ/ಮುಂಜಿ ಇತ್ಯಾದಿ ಕೌಟುಂಬಿಕ ಕಾರ್ಯಕ್ರಮಗಳನ್ನು ಆಡಂಬರವಿಲ್ಲದೆ ನಡೆಸುವ ಕುರಿತು ನಿಧಾನವಾಗಿ ಜನರಿಗೆ ಪ್ರೇರಣೆ ನೀಡುವುದು.
- ಪ್ರಯಾಣಕ್ಕಾಗಿ ಬಸ್ಸಿನಂಥ ಸಾಮೂಹಿಕ ಸಂಚಾರಿ ಸಾಧನಗಳನ್ನೇ ಹೆಚ್ಚೆಚ್ಚು ಬಳಸುವ ಮನಸ್ಥಿತಿ ನಿರ್ಮಾಣಕ್ಕೆ ಪ್ರಯತ್ನ.

ಹೀಗೆ ಸಾಗಿದೆ ನಮ್ಮ ಪ್ರಯತ್ನಗಳು. ಇವೆಲ್ಲ ತೀರ ಅಪರೂಪದ ಚಿಂತನೆಗಳಾಗಲೀ ಅಥವಾ ಒಮ್ಮೆಲೆ ಕ್ರಾಂತಿ ತರುವ ಜೀವನವಿಧಾನಗಳಾಗಲೀ ಅಲ್ಲ, ನಿಜ. ಆದರೆ, ಈಗಿರುವ ಸ್ಥಿತಿಯಲ್ಲಿ ಪಯಣಿಸಬಹುದಾದ ವಿವೇಕಯುತ ಮಾರ್ಗಗಳು ತಾನೆ? ಒಮ್ಮೆ ಜನಮಾನಸವು ಈ ಬಗೆಯ ಸರಳ ಹಾಗೂ ಸುಸ್ಥಿರ ಜೀವನಕ್ರಮಗಳಿಗೆ ತೆರೆದುಕೊಂಡಿತಾದರೆ, ಸಮಾಜಕ್ಕೆ ಆಗ ಹೊಸ ದೃಷ್ಟಿ ಮೂಡಬಹುದು. 'ಆಧುನಿಕ ಅಭಿವೃದ್ಧಿ'ಯ ದೋಣಿಯಲ್ಲಿ ದಿಕ್ಕು-ದೆಸೆಯಿಲ್ಲದೆ ಹುಚ್ಚು ವೇಗದಲ್ಲಿ ಸಾಗುತ್ತಿರುವ ನಮಗೆ, ಆಗ ಸೂಕ್ತವಾದ ದಡ-ದಿಕ್ಕು ದೊರಕಿ, ಭವಿಷ್ಯದ ಪಯಣ ನೆಲೆ ಕಂಡುಕೊಂಡೀತು. ಚೀನಾದ ದಾರ್ಶನಿಕನೊಬ್ಬನ ಬಹುಪರಿಚಿತ ಮಾತಿನಂತೆ, ಸಾವಿರ ಮೈಲುಗಳ ದೀರ್ಘ ಪ್ರಯಾಣವೂ ಒಂದು ಹೆಜ್ಜೆಯಿಂದಲೇ ಆರಂಭವಾಗಬೇಕಲ್ಲವೆ?



**(ಸಂರಕ್ಷಣಾ ಜೀವಶಾಸ್ತ್ರದ ಅಧ್ಯಾಪಕರಾಗಿದ್ದ ಲೇಖಕರು ಈಗ ಶಿರ್ಸಿ ಬಳಿಯ ಹಳ್ಳಿಯೊಂದರಲ್ಲಿ ಬೇಸಾಯ ಮಾಡುತ್ತಿದ್ದು ಪರಿಸರ ಜಾಗೃತಿ ಆಂದೋಲನದಲ್ಲಿ ಸಕ್ರಿಯರಾಗಿರುವ ಅಂಕಣಕಾರರೂ ಆಗಿದ್ದಾರೆ)**

ಪ್ರಚಲಿತ-೧

# ರಮೇಶ್‌ಕುಮಾರ್ ಮಾತು ಅವರ ಮಾತು ಮಾತ್ರವೇ?: ಒಂದು ವಿಶ್ಲೇಷಣೆ

–ಡಿ.ಎಸ್. ನಾಗಭೂಷಣ



ಡಿಸೆಂಬರ್ ೧೬ರಂದು ವಿಧಾನಸಭೆಯಲ್ಲಿ ರಮೇಶ್‌ಕುಮಾರ್ ಹೆಣ್ಣಿನ ಮೇಲಿನ ಅತ್ಯಾಚಾರಗಳಿಗೆ ಸಂಬಂಧಿಸಿದಂತೆ ಆಡಿದ ಮಾತಿನ ಬಗ್ಗೆ ರಾಷ್ಟ್ರಮಟ್ಟದಲ್ಲಿ ಟೀಕೆ–ಖಂಡನೆಗಳು ವ್ಯಕ್ತವಾಗಿವೆ. 'ಪ್ರಜಾವಾಣಿ' ಕೂಡ ತನ್ನ ಸಂಪಾದಕೀಯದಲ್ಲಿ ಈ ವಿಷಯದ ಬಗ್ಗೆ ವಿಸ್ತೃತವಾಗಿ ಬರೆದು ರಮೇಶ್‌ಕುಮಾರ್ ಅವರ ಮಾತನ್ನು ಖಂಡಿಸಿದೆ. ಇದು ಈ ವಿಷಯ ಕುರಿತ ಸಾರ್ವಜನಿಕರ ಭಾವನೆ–ಅಭಿಪ್ರಾಯವನ್ನು ಪ್ರತಿನಿಧಿಸುತ್ತದೆ ಎಂದು ಭಾವಿಸುವುದಾದರೆ, ಈ ಬಗ್ಗೆ ಕೆಲವು ಮಾತುಗಳನ್ನು ಹೇಳಲೇಬೇಕಾಗುತ್ತದೆ.

ಈ ಸಂಬಂಧವಾಗಿ ಮೊದಲಿಗೇ ಹೇಳಬೇಕಾದ ಮಾತೆಂದರೆ, ರಮೇಶ್‌ಕುಮಾರ್ ಆಡಿದ ಮಾತನ್ನು ಯಾವ ವಿವೇಕಿಯೂ ಯಾವ ಕಾರಣಕ್ಕೂ ಸಮರ್ಥಿಸಲಾರ. ಅದೊಂದು ಪೂರಾ ಅಸಭ್ಯವಾದ ಮಾತು. ಆದರೆ ಈ ಮಾತು ರಮೇಶ್‌ಕುಮಾರ್ ಅವರ ಒಬ್ಬರ ಮಾತೋ ಅಥವಾ ಹೆಣ್ಣೂ–ಗಂಡೂ ಸೇರಿದಂತೆ ನಮ್ಮ ಸಮಾಜ ಇಂದು ಅತ್ಯಾಚಾರದ ಬಗ್ಗೆ ತಳೆಯಲು ಒತ್ತಾಯಿಸಲ್ಪಟ್ಟಿರುವ ಒಂದು ಸಡಿಲ–ಅಸ್ಪಷ್ಟ ನಿಲುವಿನ ಪ್ರತೀಕವೋ ಎಂಬುದನ್ನು ನಾವು ಕೆಲ ನಿಷ್ಠುರ ವಾಸ್ತವ ಸಂಗತಿಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ತೀರ್ಮಾನಕ್ಕೆ ಬರಬೇಕಾಗಿದೆ. ಮೊಟ್ಟ ಮೊದಲಿಗೆ ನಾವು ಗಮನಿಸಬೇಕಾದ ಸಂಗತಿ ಎಂದರೆ ರಮೇಶ್‌ಕುಮಾರ್ ಆಡಿದ ಮಾತು ಅವರದ್ದಲ್ಲ ಎಂಬುದು. ಅದೊಂದು ಇಂಗ್ಲಿಷ್ ಭಾಷೆಯಲ್ಲಿನ; ಹಾಗಾಗಿ ಆ ಭಾಷೆಯ ಸಮಾಜದ ಒಂದು ಚಿಂತನಾಕ್ರಮವನ್ನು ಪ್ರತಿನಿಧಿಸುವ ಒಂದು ನುಡಿಯ ಕನ್ನಡ ಆವೃತ್ತಿ. ಅದನ್ನು ಅವರು ತಾವಾಗಿ ಹೇಳಿದ್ದಲ್ಲ. 'ಪ್ರಜಾವಾಣಿ'ಯಲ್ಲಿನ ೧೮.೧೨.೨೦೨೧ರ ವರದಿಯೇ ಸೂಚಿಸುವಂತೆ, ಇದು ಸಭಾ ಕಲಾಪದ ಒಂದು ಸಂದರ್ಭವನ್ನು ವ್ಯಾಖ್ಯಾನಿಸಲು ಸಭಾಧ್ಯಕ್ಷ ವಿಶ್ವೇಶ್ವರ ಕಾಗೇರಿಯವರಿಗೆ ಮಾತುಗಳು ಸಿಗದೆ ಚೆನ್ನಾಗಿ ಓದಿಕೊಂಡ ವಾಗ್ಮಿ ಎಂದು ತಾವು ಭಾವಿಸಿದ ರಮೇಶ್‌ಕುಮಾರ್ ಅವರನ್ನು 'ಇದು ಅದೇನೋ ಹೇಳ್ತಾರಲ್ಲ ರಮೇಶ್‌ಕುಮಾರ್, ಹಾಗೆ!' ಎಂದು ಅವರನ್ನು ಪ್ರಚೋದಿಸಿದಾಗ ಅವರು ಆಡಿದ ಮಾತು. ಹಾಗೆ ನೋಡಿದರೆ ಇದು ಒಂದು ರೀತಿಯಲ್ಲಿ ರಮೇಶ್‌ಕುಮಾರ್ ಅವರ ಪಾಂಡಿತ್ಯ ಪ್ರದರ್ಶನವಾಗಿತ್ತೇ ಹೊರತು ಅವರ ಮನದಾಳದ ಮಾತಾಗಿರಲಿಲ್ಲವೆಂದು ಕಾಣುತ್ತದೆ. ಏಕೆಂದರೆ ಅವರು ಸದನದ ಹಿರಿಯ ಸದಸ್ಯರಲ್ಲೊಬ್ಬರಾಗಿರುವುದಲ್ಲದೆ ಸಭಾಧ್ಯಕ್ಷರಾಗಿ ವಿಧಾನಸಭೆಯನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಹೋದ ಅನುಭವವಿರುವವರು. ಹೆಚ್ಚು ಓದಿಕೊಂಡವರ ಒಂದು ದೌರ್ಬಲ್ಯವಾದ ಸ್ವಲ್ಪ ನಾಲಗೆ ಉದ್ದ ಚಾಚಿ ಈಗ ಕಷ್ಟಕ್ಕೆ ಸಿಕ್ಕಿಕೊಂಡವರು. ಅದು ಗೊತ್ತಾಗಿಯೇ, ಸಾಮಾನ್ಯವಾಗಿ ತಾವು ಆಡಿದ ಮಾತನ್ನು ಹಿಂತೆಗೆದುಕೊಳ್ಳದ ಹಠಮಾರತನದ ಅವರು ಈ ಸಂದರ್ಭದಲ್ಲಿ ಮರುಮಾತಿಲ್ಲದೆ ಬೇಷರತ್ತಾಗಿ ತಮ್ಮಿಂದಾದ ತಪ್ಪಿಗೆ ಕ್ಷಮೆ ಕೋರಿದ್ದಾರೆ. ಇದು ಗೊತ್ತಿದ್ದೇ ಬಹುಶಃ ಕಾಗೇರಿಯವರು ಕ್ಷಮಾಪಣೆಯನ್ನು ಕೂಡಲೇ ಯಾವುದೇ ಮಾತಿಲ್ಲದೆ ಮತ್ತು ಇತರರ ಮಾತುಗಳಿಗೆ ಅವಕಾಶ ಕೊಡದೆ ಒಪ್ಪಿ ಆ ವಿಷಯಕ್ಕೆ ಅಲ್ಲಿಗೇ ಪೂರ್ಣವಿರಾಮ ಹಾಕಿದ್ದಾರೆ. ವಿಧಾನಸಭೆಯೂ ಅದನ್ನು ಸದ್ದಿಲ್ಲದೆ ಒಪ್ಪಿಕೊಂಡಿದೆ.

ಇದಕ್ಕಿಂತ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ರಮೇಶ್‌ಕುಮಾರ್ ಮಾತನ್ನು ಕೇಳಿಸಿಕೊಂಡ ಸುಸಂಸ್ಕೃತರೆಂದು ಹೆಸರಾದ ಸಭಾಧ್ಯಕ್ಷರು ಜೋರಾಗಿ ನಕ್ಕಿದ್ದಾರೆ ಎಂಬುದು. ಅಷ್ಟೇ ಅಲ್ಲ, ಇಡೀ ವಿಧಾನಸಭೆ ಅವರ ಈ ಮಾತನ್ನು ಆನಂದಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಸಂದರ್ಭದಲ್ಲಿ ಕೇಳಬೇಕಾದ ಪ್ರಶ್ನೆ ಎಂದರೆ, ಈ ಸಂದರ್ಭದಲ್ಲಿ ಸಚಿವರೂ ಸೇರಿದಂತೆ ಮಹಿಳಾ ಸದಸ್ಯೆಯರಾರೂ ಸಭೆಯಲ್ಲಿ ಇರಲಿಲ್ಲವೇ? ಇದ್ದರೆ ಅವರ ಪ್ರತಿಕ್ರಿಯೆ ಏನಾಗಿತ್ತು ಎಂಬುದು. ಅವರೇಕೆ ಕೂಡಲೇ ಪ್ರತಿಭಟಿಸಲಿಲ್ಲ ಎಂಬ ಪ್ರಶ್ನೆಯೂ ಇಲ್ಲಿ ಏಳುತ್ತದೆ.

ಇದೇ ಸಂದರ್ಭದಲ್ಲಿ ಅನಿವಾರ್ಯವಾಗಿ ಪ್ರಸ್ತಾಪ ಮಾಡಬೇಕಾದ ಇನ್ನೊಂದು ಸಂಗತಿ ಎಂದರೆ, ಮಹಿಳಾ ಸಬಲೀಕರಣ ಮತ್ತು ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆಗಳು ಮತ್ತು ಚಳುವಳಿ–ಚರ್ಚೆಗಳು ಹೆಚ್ಚುತ್ತಾ ಹೋಗುತ್ತಿದ್ದಂತೆ ಮಹಿಳಾ ಸಬಲೀಕರಣದ ಪ್ರಾಣಶಕ್ತಿಯಾಗಬಹುದಾದ ನಮ್ಮ ಶಾಸನ ಸಭೆಗಳಲ್ಲಿ ಮಹಿಳೆಯರ ಸಂಖ್ಯೆ ಮತ್ತು ಸರ್ಕಾರದಲ್ಲಿ ಮಹಿಳಾ ಸಚಿವರ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತಿರುವ ವಿಪರ್ಯಾಸ. ಪ್ರಸ್ತುತ ಮತ್ತು ಈ ಹಿಂದಿನ ಸರ್ಕಾರಗಳೆರಡರಲ್ಲೂ ಮಹಿಳಾ ಸಚಿವರ ಸಂಖ್ಯೆ ಒಂದನ್ನು ಮೀರಿಲ್ಲ. ಇದು ಊಟಕ್ಕೆ ಉಪ್ಪಿನ ಕಾಯಿ ಇದ್ದಂತೆ ಎಂದರೆ ಅದೂ ಮಹಿಳಾ ವಿರೋಧಿ ಹೇಳಿಕೆಯಂತೆ ಕೇಳಿಸಿದರೆ ಆಶ್ಚರ್ಯವಿಲ್ಲ, ಪರಿಸ್ಥಿತಿ ಅಷ್ಟು ನಾಜೂಕಾಗಿದೆ. ಆದರೆ ಈ ಬಗ್ಗೆ ಯಾರೂ ತಲೆ ಕೆಡಿಸಿಕೊಂಡಿಲ್ಲ. ಈ ಸಂಗತಿಯನ್ನು ಇಲ್ಲಿ ಪ್ರಸ್ತಾಪ ಮಾಡಲು ಕಾರಣವೆಂದರೆ, ಸದನದಲ್ಲಿ ಮಹಿಳೆಯರ ಸಂಖ್ಯೆ, ನಿರ್ದಿಷ್ಟವಾಗಿ ಮಹಿಳಾ ಸಚಿವರ ಸಂಖ್ಯೆ ಗಣನೀಯವಾಗಿದ್ದರೆ ಸ್ತ್ರೀಕುಲವನ್ನು ಕುರಿತ ಯಾವುದೇ ರೀತಿಯ ಅವಹೇಳನಕಾರಿ ಮಾತು, ಗಾದೆ ಅಥವಾ ನಾಣ್ನುಡಿಯನ್ನು ಆಡಲು ಪುರುಷ ಸದಸ್ಯರಿಗೆ ಧೈರ್ಯ ಇರುತ್ತಿರಲಿಲ್ಲ ಅಥವಾ ಅವರ ಬಾಯಿ ಕಟ್ಟುತ್ತಿತ್ತು ಮತ್ತು ಕಾಲಕ್ರಮೇಣ ಅದೊಂದು ಸಂಸ್ಕೃತಿಯಾಗಿ ಬೆಳೆಯುವ ಅವಕಾಶವಿರುತ್ತಿತ್ತು.

ಆದರೆ ಈ ಪ್ರಕರಣವೊಂದೇ ಅಲ್ಲ, ಇತ್ತೀಚಿನ ದಿನಗಳಲ್ಲಿ ಹೆಣ್ಣಿನ ಮೇಲಿನ ಅತ್ಯಾಚಾರ ಪದೇ ಪದೇ ನಮ್ಮ ಸಾರ್ವಜನಿಕ ಜೀವನದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ರೂಪಗಳಲ್ಲಿ ಚರ್ಚೆಗೆ ಬರುತ್ತಿರಲು ಕಾರಣವೇನು ಎಂಬುದನ್ನು ನಾವಿಂದು ಗಂಭೀರವಾಗಿ ಆಲೋಚಿಸಬೇಕಾಗಿದೆ. ಈ ಸಂಬಂಧ ನನಗೆ ತಕ್ಷಣ ನೆನಪಿಗೆ ಬರುವ ಒಂದು ಮಾತೆಂದರೆ ಪರಿಸರ ತಜ್ಞೆ ಮತ್ತು ಕಾರ್ಯಕರ್ತೆ ವಂದನಾಶಿವ ಅವರು ನಿರ್ಭಯಾ ಪ್ರಕರಣದ ಸಂದರ್ಭದಲ್ಲಿ ಆಡಿದ ಈ ಮಾತು: ಭೂಮಿಯ ಮೇಲಿನ ನಮ್ಮ ಅತ್ಯಾಚಾರ ಹೆಚ್ಚಿದಂತೆ ಹೆಣ್ಣಿನ ಮೇಲೂ ಅತ್ಯಾಚಾರವೂ ಹೆಚ್ಚುತ್ತಿದೆ. ಅವೆರಡೂ ಒಂದಕ್ಕೊಂದು ಸಂಬಂಧಿಸಿದ ವಿಚಾರಗಳು. ಒಂದೇ ಮಾನಸಿಕತೆಯ ಎರಡು ಅಭಿವ್ಯಕ್ತಿ ರೂಪಗಳು. ಇಂದು ಹಲವು ಕಾರಣಗಳಿಗಾಗಿ ನಾವು ಭೂಮಿಯನ್ನು ಬಗೆಯುತ್ತಿದ್ದೇವೆ. ನೀರಿಗಾಗಿ, ಅನಿಲಗಳಿಗಾಗಿ, ಉರುವಲುಗಳಿಗಾಗಿ, ಕಲ್ಲಿಗಾಗಿ, ಖನಿಜಗಳಿಗಾಗಿ. ಹಾಗೆ ನೋಡಿದರೆ ನಾವು ನಿತ್ಯಜೀವನದಲ್ಲಿ ಬಳಸುವ ಎಲ್ಲ ವಸ್ತುಗಳೂ ಭೂಮಿಯಿಂದ ಬಂದ ವಸ್ತುಗಳಿಂದ ತಯಾರಾದವುಗಳೇ. ನಾವೆಲ್ಲ ತಾಯಿಯ ಒಡಲಿಂದಲೇ ಬಂದಂತೆ, ನಾವು ಬದುಕಿನಲ್ಲಿ ಹೆಚ್ಚೆಚ್ಚು ವಸ್ತು–ಸಾಧನಗಳನ್ನು ಬಳಸಲಾರಂಭಿಸಿದಷ್ಟೂ ಭೂಮಿಯನ್ನು ಹೆಚ್ಚೆಚ್ಚು ಪ್ರಮಾಣದಲ್ಲಿ ಮತ್ತು ರೀತಿಯಲ್ಲಿ ಬಗೆಯಬೇಕಾಗುತ್ತಿದೆ. ಇದೇ ಅತಿ–ಆಚಾರ ಅಥವಾ ಅತ್ಯಾಚಾರವಲ್ಲವೆ? ಆದರೆ ಇದು ಏಕೆ ನಡೆಯುತ್ತಿದೆ? ಮನುಷ್ಯ ಜೀವನವನ್ನೆ ಹೆಚ್ಚೆಚ್ಚು ಸುಖ–ಸಂತೋಷದ್ದಾಗಿ ಮಾಡಲಲ್ಲವೆ? ಆದರೆ ಸುಖ–ಸಂತೋಷಗಳಿಗೆ ಮಿತಿ ಎಂಬುದೊಂದಿದೆಯೇ? ಮಿತಿ ಇರುವ ಭೂಮಿಯ ಮೇಲೆ ಮಿತಿ ಇಲ್ಲದ ಆಶೆಗಳ ಪರಿಣಾಮವಾದ ಅತ್ಯಾಚಾರ ನಡೆಯುತ್ತಿದೆ. ಇದು ಒಂದು ಚೌಕಟ್ಟಿಲ್ಲದ, ಮಿತಿಯಿಲ್ಲದ ಭೋಗ ಪ್ರವೃತ್ತಿಯ ಪರಿಣಾಮವಲ್ಲವೆ? ಹೆಣ್ಣಿನ ಮೇಲಿನ ಅತ್ಯಾಚಾರವೆಂಬುದೂ ಇಂತಹುದೇ ಪ್ರವೃತ್ತಿಯ ಪರಿಣಾಮವಲ್ಲವೆ?

ಭೂಮಿಯ ಮೇಲಿನ ಅತ್ಯಾಚಾರದ ಪರಿಣಾಮಗಳನ್ನು ಇತ್ತೀಚೆಗೆ ಹವಾಮಾನ ವೈಪರೀತ್ಯಗಳ ರೂಪದಲ್ಲಿ, ಹಲವು ಜೀವ ಪ್ರಭೇದಗಳ ನಾಶದ ರೂಪದಲ್ಲಿ, ಹಲವು ನಿಗೂಢ ಮೂಲಗಳ ಪ್ರಾಣಾಂತಿಕ ರೋಗಗಳ ರೂಪದಲ್ಲಿ ಮತ್ತು ಇವು ಭೂಮಿಯನ್ನು ಕ್ರಮೇಣ ಮನುಷ್ಯನೂ ಸೇರಿದಂತೆ ಜೀವಸಂಕುಲದ ವಾಸಕ್ಕೆ ಯೋಗ್ಯವಲ್ಲದ ತಾಣವನ್ನಾಗಿ ಮಾಡುತ್ತಿರುವ ಹಲವು ಸಾಕ್ಷ್ಯಗಳ ರೂಪದಲ್ಲಿ ಕಾಣತೊಡಗಿರುವುದನ್ನು ಬಲ್ಲವರು ವಿವರಿಸುತ್ತಿರುವರಾದರೂ, ಮೊನ್ನೆಯ ಗ್ಲ್ಯಾಸ್‌ಗೋ ಪರಿಸರ ಸಮ್ಮೇಳನದಲ್ಲಿ ಕಂಡಂತೆ ಯಾರೂ ಅದನ್ನು ತುರ್ತು ಮತ್ತು ತೀವ್ರ ಗಮನಕ್ಕೆ ಅರ್ಹವಾದ ವಿಷಯವೆಂದು ಪರಿಗಣಿಸಿದಂತಿಲ್ಲ. ಭೂಮಿಯ ಮೇಲಿನ ಅತ್ಯಾಚಾರ ಮಾನವತೆಯಷ್ಟು ವಿಶಾಲವಾದ ಆಳತೆಯ ಅಪರಾಧ ಅಥವಾ ಪಾಪ ಎಂದಿರಲಿ, ಅದು ತಾನು ಕೂತಿರುವ ಕೊಂಬೆಯನ್ನೇ ಕಡಿದುಕೊಳ್ಳುತ್ತಿರುವ ಮೂರ್ಖತನವೆಂಬುದೂ ಅವನ ಅರಿವಿಗೆ ಬಂದಂತಿಲ್ಲ. ಮಾಹಿತಿ ಇದೆಯಾದರೂ ಜ್ಞಾನವಿಲ್ಲ ಎಂಬ ಇಂದಿನ ಜಗತ್ತಿನ ಪರಿಸ್ಥಿತಿ ಇದು. ಹೆಣ್ಣು ಮತ್ತು ಗಂಡು ಇಬ್ಬರೂ ಈ ಪರಿಸ್ಥಿತಿಗೆ ಬಲಿಯಾಗಿರುವುದರಿಂದ ಈ ಸಮಸ್ಯೆ ಇನ್ನಷ್ಟು ಸಂಕೀರ್ಣವೂ, ಗೋಜಲೂ ಆಗಿದೆ. ಇದಕ್ಕೆ ಮುಖ್ಯ ಕಾರಣ, ಭೂಮಿ ಒಂದು ಜಡವಸ್ತು ಎಂಬ ನಮ್ಮ ಭೌತವಿಜ್ಞಾನ ಪ್ರಧಾನವಾದ ಲೌಕಿಕ ಜ್ಞಾನದ ಪ್ರಭಾವ. ಇದು ನಮ್ಮ ಮೇಲೆ ಇನ್ನೂ ಅಚ್ಚೊತ್ತಿದಂತಿದೆ. ಭೂಮಿ ಉಸಿರಾಡುವ ಜೀವವೆಂದು ನಮ್ಮ ಪ್ರಾಚೀನ ಕವಿಗಳು, ದಾರ್ಶನಿಕರು ಮಾತ್ರವಲ್ಲದೆ ಇತ್ತೀಚಿನ ಬಹುಶಿಸ್ತೀಯ ಜ್ಞಾನದ ಅಧ್ಯಯನಕಾರರು ಹೇಳುತ್ತಿದ್ದರೂ ಮಿತಿ ಇಲ್ಲದ ಸುಖದ ರುಚಿಗಳಿಗೆ ಬಿದ್ದಿರುವ ಮನುಷ್ಯನಿಗೆ ಅದರ ಪರಿವೆ ಇಲ್ಲದಂತಾಗಿದೆ. ಭೂಮಿಗೂ ಒಂದು ಮನಸ್ಸಿದೆ ಎಂದು ಅವನು ಒಪ್ಪಲು ತಯಾರಿಲ್ಲ.

ಈ ಮನಃಸ್ಥಿತಿಯೇ ರಮೇಶ್‌ಕುಮಾರ್ ಅನುವಾದಿಸಿ ಹೇಳಿದ ಇಂಗ್ಲಿಷ್ ಮಾತಿನ ಹಿಂದೆಯೂ ಇರುವುದು. ಹೆಣ್ಣಿನ ಮೇಲಿನ ಅತ್ಯಾಚಾರವೆನ್ನುವುದು ಒಂದು ದೈಹಿಕ ಕ್ರಿಯೆ ಮಾತ್ರ ಎಂದು ಭಾವಿಸಿರುವುದು. ಅದರ ಹಿಂದೆ ಒಂದು ಮನಸ್ಸೂ ಇದೆ.

(೧೩ನೇ ಪುಟಕ್ಕೆ

# ಶಿಕ್ಷಣದ ಏಕರೂಪೀಕರಣದ ಸವಾಲುಗಳು

-ಪ್ರಭಾತ್ ಪಟ್ನಾಯಕ್

**ಹೊಸ ಶಿಕ್ಷಣ ನೀತಿಯಡಿ ಶಿಕ್ಷಣ ಮಟ್ಟದ ಸುಧಾರಣೆಯ ಹೆಸರಿನಲ್ಲಿ ಶಿಕ್ಷಣವನ್ನು ಜಾಗತಿಕ ಗುಣಮಟ್ಟಕ್ಕೆ ಒಯ್ಯುವುದೆಂದರೆ ಶಿಕ್ಷಣದ 'ಜಾಗತೀಕರಣ'ವೇ. ಅಂದರೆ ನಮ್ಮ ಮಕ್ಕಳನ್ನು ಸ್ಥಳೀಯತೆಯ ವಾಸ್ತವದ ಬೇರುಗಳಿಂದ ಬೇರ್ಪಡಿಸಿ ಅವರನ್ನು 'ಮುಂದುವರೆದ' ಪಶ್ಚಿಮದ 'ಜ್ಞಾನ' ಮತ್ತು 'ವ್ಯಾಪಾರ' ಸಂಸ್ಥೆಗಳ ಸೇವೆಗೆ ತಯಾರು ಮಾಡುವುದೇ ಎಂದಾಗಿದೆ ಎನ್ನುತ್ತಾರೆ ಲೇಖಕರು.-ಸಂ**



ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶಿಕ್ಷಣವು ಕೇವಲ ಜ್ಞಾನ ಮತ್ತು ಕೌಶಲವನ್ನು ಒದಗಿಸುವ ಉದ್ದೇಶಕ್ಕೆ ಮಾತ್ರವೇ ಸೀಮಿತವಾಗದೆ ಅದು 'ರಾಷ್ಟ್ರ ನಿರ್ಮಾಣ'ದ (ಸ್ವಲ್ಪ ಅಸೂಕ್ಷ್ಮವಾದ ಪದ ಉಪಯೋಗಿಸುವುದಾದರೆ) ಪ್ರಕ್ರಿಯೆಗೂ ಪೂರಕವಾಗಿರಬೇಕು ಎಂದು ನಿರೀಕ್ಷಿಸಲಾಗಿತ್ತು. 'ಭಾರತ ರಾಷ್ಟ್ರ' ಎಂಬ ಪರಿಕಲ್ಪನೆಯು ಒಂದು ಅಸ್ಪಷ್ಟ ರೂಪದಲ್ಲಿ ಬಹಳ ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದರೂ (ಹದಿಮೂರನೇ ಶತಮಾನದ ಅಮೀರ್ ಖುಸ್ರೂ ಅವರ ಬರಹಗಳಲ್ಲೂ ಕಾಣುವಂತೆ) ಅದು ಹೆಚ್ಚಾಗಿ ಚಾಲ್ತಿಗೆ ಬಂದದ್ದು ಭಾರತದ ಬ್ರಿಟಿಷ್ ವಸಾಹತುಶಾಹಿ ವಿರೋಧಿ ಹೋರಾಟದ ಕಾಲದಲ್ಲೆ. ಅಲ್ಲಿಂದೀಚೆಗೆ, 'ರಾಷ್ಟ್ರ ನಿರ್ಮಾಣ'ದ ಕಾರ್ಯಕ್ಕೆ ಎಲ್ಲಕ್ಕಿಂತಲೂ ಹೆಚ್ಚು ಅಗತ್ಯವಿರುವುದು ಈ ಹೋರಾಟದ ಬಗೆಗಿನ ಅರಿವು. ಈ ಅರಿವು ಮೂಡಲು, ವಸಾಹತುಶಾಹಿ ಆಡಳಿತದ ಕಾಲದಲ್ಲಿ ಭಾರತದ ಸ್ಥಿತಿ ಏನಾಗಿತ್ತು, ಆಗ ಜನರನ್ನು ಹೇಗೆ ಶೋಷಣೆ ಮಾಡಲಾಗುತ್ತಿತ್ತು ಎಂಬ ವಿಚಾರಗಳ ಪರಿಚಯವಿರುವುದು ಅಗತ್ಯ. ಆಂಟೋನಿಯೋ ಗ್ರಾಮ್ಷಿಯವರು ಹೇಳುವಂತೆ ಸ್ವತಂತ್ರ ಭಾರತದಲ್ಲಿ 'ಸಾವಯವ ಬುದ್ಧಿಜೀವಿ'ಯಾಗಬೇಕೆಂದರೆ, ಈ ಅರಿವು, ಕೇವಲ ಮಾನವಿಕಗಳ ಮತ್ತು ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಅದು ಪ್ರಾಕೃತಿಕ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲ ವಿದ್ಯಾರ್ಥಿಗಳಿಗೂ ಅಗತ್ಯವಾಗಿ ಇರಬೇಕಾದ್ದು.

ಇಂತಹ ಸಾವಯವ ಬುದ್ಧಿಜೀವಿಗಳನ್ನು ತಯಾರು ಮಾಡುವ ಕಾರ್ಯಕ್ಕೆ ಭಾರತದಲ್ಲಿ ಉನ್ನತ ಶಿಕ್ಷಣದ ಪಠ್ಯಕ್ರಮ ಮತ್ತು ಪಠ್ಯ ವಿಷಯಗಳ ವಿಚಾರದಲ್ಲಿ ಮಾತ್ರವಷ್ಟೇ ಅಲ್ಲ, ಪ್ರಾಥಮಿಕ ಶಿಕ್ಷಣದ ಮಟ್ಟದಲ್ಲೂ ನಮ್ಮ ಪಠ್ಯ ವಿಷಯಗಳು ಮುಂದುವರಿದ ದೇಶಗಳಿಗಿಂತ ಭಿನ್ನವಾಗಿರಬೇಕಾಗುತ್ತದೆ. ಉದಾಹರಣೆಗೆ, ವಸಾಹತುಶಾಹಿಯು ವಸಾಹತಿಗೊಳಪಟ್ಟ ಜನರಿಗೆ ಉಂಟುಮಾಡಿದ ಹಾನಿಯ ವಿಚಾರವು ಮುಂದುವರಿದ ದೇಶಗಳಲ್ಲಿ ಉಲ್ಲೇಖಿಸಲ್ಪಡುವುದು ವಿರಳ. ಪ್ರಖ್ಯಾತ ಬ್ರಿಟಿಷ್ ವಿಜ್ಞಾನಿ ಜೆ.ಡಿ.ಬರ್ನಾಲ್‌ರ ದೃಷ್ಟಿಯಲ್ಲಿ ನೈಸರ್ಗಿಕ ವಿಜ್ಞಾನದ ವಿಷಯಗಳಲ್ಲೂ ಕೂಡ ಭಾರತದಂತಹ ದೇಶಗಳ ಪಠ್ಯಕ್ರಮ ಮತ್ತು ಪಠ್ಯ ವಿಷಯಗಳು ಅನನ್ಯವಾಗಿರಬೇಕಾಗುತ್ತದೆ ಮತ್ತು ಅವು ನಗರೀಕೃತ ಅಧ್ಯಯನಗಳ ಅನುಕರಣೆಯಂತಿರದೆ ವಿಶಿಷ್ಟವಾಗಿರಬೇಕಾಗುತ್ತದೆ. ಉದಾಹರಣೆಗೆ, ಭಾರತದ ರೋಗಗಳ ಚಿತ್ರಣವನ್ನು ಗಮನದಲ್ಲಿಟ್ಟುಕೊಂಡರೆ, ಭಾರತದ ವೈದ್ಯರ ವೈದ್ಯಕೀಯ ಶಿಕ್ಷಣವು ಇತರ ದೇಶಗಳಿಗಿಂತ ಭಿನ್ನವಾದ ಅಂಶಗಳಿಗೆ ಒತ್ತುಕೊಡಬೇಕಾಗುತ್ತದೆ. (ಭಾರತದ ವೈದ್ಯರು ವಸಾಹತುವಾದ ಮತ್ತು ವಸಾಹತುವಿರೋಧಿ ಹೋರಾಟದ ವಿಚಾರಗಳ ಜೊತೆಗೆ ಇವನ್ನೂ ಸಹ ತಿಳಿದಿರಬೇಕಾಗುತ್ತದೆ.)

ಇದರರ್ಥ, ಭಾರತದಂತಹ ದೇಶಗಳಲ್ಲಿ ಶಿಕ್ಷಣದ ನಿಜವಾದ ಉದ್ದೇಶ ಈಡೇರಬೇಕೆಂದರೆ ಅದು ಮಹಾನಗರಗಳಿಂದಲೇ ಕೂಡಿರುವ ದೇಶಗಳ ಶಿಕ್ಷಣಕ್ಕಿಂತ ಭಿನ್ನವಾದ ಶೈಕ್ಷಣಿಕ ವಸ್ತುವನ್ನು ಹೊಂದಿರಬೇಕಾಗುತ್ತದೆ. ಅಂದರೆ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರಗಳ ಮೂಲಭೂತ ಪ್ರಮೇಯಗಳನ್ನು ಭಾರತದಲ್ಲಿ ಬೋಧಿಸಬಾರದೆಂದಲ್ಲ. ಮುಂದುವರಿದ ದೇಶಗಳಲ್ಲಿ ಬೋಧಿಸಲ್ಪಡುವ ಪಠ್ಯಕ್ರಮದ ಯಥಾರೂಪವಾಗಿರದ ಒಂದು ಪಠ್ಯಕ್ರಮದ ಚೌಕಟ್ಟಿನಲ್ಲಿ ಅವನ್ನು ಉಚಿತ ರೂಪದಲ್ಲಿ ಅಡಕಗೊಳಿಸಿರಬೇಕು ಎಂಬುದಷ್ಟೇ. ಸುದೀರ್ಘಕಾಲದಿಂದ, ಈ ದೃಷ್ಟಿಯು ಭಾರತದ ಶೈಕ್ಷಣಿಕ ವಲಯಗಳಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವಂತಹದ್ದು.

ಆದಾಗ್ಯೂ, ನವ ಉದಾರವಾದಿ ಜಾಗತೀಕರಣದೊಂದಿಗೆ ಇದಕ್ಕೆ ವಿರುದ್ಧವಾದುದು ಸಂಭವಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಪ್ರಪಂಚವನ್ನು ಆವರಿಸಿಕೊಂಡಿರುವ ಬಹುರಾಷ್ಟ್ರೀಯ ಕಾರ್ಪೊರೇಷನ್‌ಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸುಲಭವಾಗಿ ರವಾನಿಸಬಹುದಾದ ಸಿಬ್ಬಂದಿಯನ್ನು ಬಯಸುತ್ತವೆ. ಸಿಬ್ಬಂದಿಯ ಚಲನಶೀಲತೆಯ ಸಮಸ್ಯೆ ಮಾತ್ರವಲ್ಲದೆ, ವಿವಿಧ ದೇಶಗಳ ನಡುವೆ ವರ್ಗಾವಣೆಯಾಗುವ ಬಂಡವಾಳವು, ತಾನು ನೇಮಕ ಮಾಡಿಕೊಳ್ಳುವ ಸಿಬ್ಬಂದಿಯ ಮನೋಭಾವ ಮತ್ತು ಬೌದ್ಧಿಕ ವಿನ್ಯಾಸಗಳೂ ಸೇರಿದಂತೆ, ಎಲ್ಲ ಆತಿಥೇಯ ದೇಶಗಳಲ್ಲಿ ಪರಿಸರವು ಏಕರೀತಿಯಲ್ಲಿರಬೇಕೆಂದು ಬಯಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಜಾಗತೀಕರಣಗೊಂಡ ಬಂಡವಾಳವು ಸಾಮಾನ್ಯವಾಗಿ ತಾನು ಯಾವ ಶಿಕ್ಷಿತ ಮಧ್ಯಮವರ್ಗದಿಂದ ತನ್ನ ಸಿಬ್ಬಂದಿಯ ನೇಮಕಾತಿ ಮಾಡಿಕೊಳ್ಳುವುದೋ ಅಂತಹ ಮಧ್ಯಮವರ್ಗವು ಸಾಧ್ಯವಿರುವೆಡೆಯಲ್ಲೆಲ್ಲಾ ಏಕರೀತಿಯಲ್ಲಿರಬೇಕೆಂದು ಬಯಸುತ್ತದೆ. ಹಾಗೆಯೇ ಈ ಮಧ್ಯಮವರ್ಗದ ದೃಷ್ಟಿಕೋನವೂ ಸಹ ಆಯಾ ದೇಶಗಳ ಮಹಾನಗರಗಳಲ್ಲಿ ಕಂಡುಬರುವ ದೃಷ್ಟಿಕೋನಗಳಿಗೆ ಸಮೀಪವಾಗಿರಬೇಕೆಂದೂ ಬಯಸುತ್ತದೆ.

ಹಾಗಾಗಿ ಜಗತ್ತಿನಾದ್ಯಂತ ಏಕರೂಪದ ಸಾಮರ್ಥ್ಯವುಳ್ಳ ಅಭ್ಯರ್ಥಿಗಳನ್ನು ಉತ್ಪಾದಿಸುವ ಏಕರೂಪೀ ಶಿಕ್ಷಣ ವ್ಯವಸ್ಥೆಯನ್ನು ಹೊಂದುವುದರಲ್ಲಿ ಮತ್ತು ತನ್ನದೇ ಆದ ಒಂದು ಸಾಮಾಜಿಕ ನೆಲೆಯನ್ನು ನಿರ್ಮಿಸಿಕೊಳ್ಳುವಲ್ಲಿ ಅತೀವ ಆಸಕ್ತಿಯನ್ನು ಈ ಬಹುರಾಷ್ಟ್ರೀಯ ಕಂಪೆನಿಗಳು ಹೊಂದಿವೆ. ಇದನ್ನೇ ಭಾರತದಂತಹ ದೇಶಗಳಲ್ಲಿ ಕಾಣಲು ನವಉದಾರವಾದವು ಬಯಸುತ್ತದೆ. ಮೋದಿಯವರ ಸರ್ಕಾರದ ಹೊಸ ಶಿಕ್ಷಣ ನೀತಿಯು ಮಾಡಲು ಪ್ರಯತ್ನಿಸುತ್ತಿರುವುದೂ ಇದನ್ನೇ.

ಈ ರೀತಿಯ ಶಿಕ್ಷಣದ ಏಕರೂಪೀಕರಣವು, ಪ್ರಾಚೀನ ಭಾರತದ ತಥಾಕಥಿತ 'ಶ್ರೇಷ್ಠತೆ'ಯ ಬಗೆಗೆ, ಭಾರತದ ವಿಜ್ಞಾನ ಮತ್ತು ಗಣಿತಶಾಸ್ತ್ರದ ಅದ್ಭುತ ಸಾಧನೆಗಳ ಬಗ್ಗೆ ಅಥವಾ ಇನ್ನಾವುದೋ ಒಂದು ಕ್ಷೇತ್ರದ ಪ್ರಾಚೀನತೆಯ ಬಗ್ಗೆ(ಇಸ್ಲಾಮಿಕ್ ಕೊಡುಗೆಗಳನ್ನು ಹೊರತುಪಡಿಸಿ) ಅಥವಾ ಮಧ್ಯಯುಗೀನ ಭಾರತದಲ್ಲಿ ಹಿಂದೂಗಳನ್ನು ದಮನ ಮಾಡಿದ ವಿಚಾರಗಳ ಬಗ್ಗೆ ಹಿಂದುತ್ವವಾದವು ನೀಡುವ ಪ್ರಾಮುಖ್ಯತೆಗೆ ಬಹಳ ಚೆನ್ನಾಗಿ ಹೊಂದಿಕೆಯಾಗುತ್ತದೆ. ಏಕೆಂದರೆ ಇವುಗಳಲ್ಲಿ ಯಾವುವೂ ವಸಾಹತು ಆಳ್ವಿಕೆಯ ಕಾಲದಲ್ಲಿ ಭಾರತದ ಹಿಂದೂಗಳು ಮತ್ತು ಮುಸ್ಲಿಮರು ಒಂದೇ ರೀತಿಯಲ್ಲಿ ಶೋಷಣೆಗೆ ಒಳಗಾಗಿದ್ದನ್ನು ಪ್ರಸ್ತಾಪಿಸುವುದಿಲ್ಲ. ಈ ಶೋಷಣೆಯು ದೇಶದ ಹಿಂದಿನ ಎಲ್ಲ ಐತಿಹಾಸಿಕ ಅನುಭವಗಳಿಗಿಂತ ಭಿನ್ನವಾದುದಾಗಿತ್ತು. ಏಕೆಂದರೆ ಇದು ಭಾರತದ ಸಂಪತ್ತು ಹೊರಕ್ಕೆ ಹರಿದುಹೋಗುವಂತೆ ಮಾಡುವುದರ ಜೊತೆಗೆ ನಮ್ಮ ಕುಶಲಕರ್ಮಿಗಳ ಜೀವನಾಧಾರವಾದ ಸ್ಥಳೀಯ ಕಸುಬುಗಳನ್ನು ನಾಶಪಡಿಸಿತು. ಇವೆರಡೂ ಸೇರಿ ಆಧುನಿಕ ಕಾಲದ ಸಾಮೂಹಿಕ ದಾರಿದ್ರ್ಯವನ್ನು ಸೃಷ್ಟಿಸಿದವು.

ಹೀಗೆ, ನವಉದಾರೀಕರಣಕ್ಕೊಳಗಾದ ಜಗತ್ತಿನ ವಿವಿಧೆಡೆಗಳಲ್ಲಿ ಮಹಾನಗರಗಳ ವಿಶ್ವವಿದ್ಯಾಲಯಗಳು ನೆಟ್ಟು ಬೆಳೆಸಿರುವ ಶಿಕ್ಷಣಕ್ಕೆ ಸರಿಹೊಂದುವಂತೆ ಭಾರತದಲ್ಲಿ ಪಠ್ಯಕ್ರಮ ಮತ್ತು ಪಠ್ಯವಸ್ತುಗಳ ಬದಲಾವಣೆಗಳು ಮತ್ತು ಭಾರತಕ್ಕೆ ವಿಶಿಷ್ಟವಾದ ಹಿಂದುತ್ವ ಸಿದ್ಧಾಂತದ ಬಿರುಸು, ಎರಡೂ ಮೋದಿ ಸರ್ಕಾರದ ಕಾರ್ಯಸೂಚಿಗೆ ಬಹಳ ಚೆನ್ನಾಗಿ ಹೊಂದುತ್ತವೆ. ಕಾರ್ಪೊರೇಟ್-ಹಿಂದುತ್ವ ಮೈತ್ರಿಯ ಶೈಕ್ಷಣಿಕ ಲೋಕದ ಪರಿಣಾಮರೂಪವೇ ಪ್ರಸ್ತುತ ಭಾರತೀಯ ರಾಜಕಾರಣದ ಮೇಲೆ ಪ್ರಾಬಲ್ಯವನ್ನು ಹೊಂದಿರುವುದು. ಜಾಗತೀಕರಣಗೊಂಡ ಬಂಡವಾಳದ ಜೊತೆ ಒಂದಾಗಿರುವ ಕಾರ್ಪೊರೇಟ್ ಶಕ್ತಿಯು, ವಸಾಹತುಶಾಹಿ ಮತ್ತು ವಸಾಹತುಶಾಹಿ ಶೋಷಣೆಯ ಪರಿಣಾಮಗಳ ಬಗೆಗಿನ ಎಲ್ಲ ಉಲ್ಲೇಖಗಳನ್ನು ಅಳಿಸಿಹಾಕುವ ಮಾದರಿಯ ಶಿಕ್ಷಣದ ಏಕರೂಪೀಕರಣದಿಂದ ಸಂತುಷ್ಟವಾಗುತ್ತದೆ. ಇದು ಹೆಚ್ಚೂ ಕಡಿಮೆ ಬಂಡವಾಳಶಾಹಿಯನ್ನು ಒಂದು ಸ್ವಯಂಪೂರ್ಣ ವ್ಯವಸ್ಥೆ ಎಂಬಂತೆ ನೋಡುತ್ತದೆ. ಅದೇ ವೇಳೆಗೆ, ಪ್ರಾಚೀನ ಭಾರತದ ಕಲ್ಪಿತ ಶ್ರೇಷ್ಠತೆಯನ್ನು ಸ್ವೀಕರಿಸುವ ಮೂಲಕ ಆಗುವ ಬಿಡಿಗಾಸಿನ ಅನುಕೂಲತೆಗಳಿಂದ ಹಿಂದುತ್ವದ ಶಕ್ತಿಗಳು ಸಂತೃಪ್ತವಾಗಿರುತ್ತದೆ.

ಪಠ್ಯಕ್ರಮ ಮತ್ತು ಪಠ್ಯವಸ್ತುಗಳ ಏಕರೂಪೀಕರಣವನ್ನು, ಭಾರತೀಯ ವಿಶ್ವವಿದ್ಯಾನಿಲಯಗಳನ್ನು 'ಜಾಗತಿಕ ಮಟ್ಟ'ಕ್ಕೆ ಏರಿಸುತ್ತದೆ ಎನ್ನುವ ವಾದದ ಮೂಲಕ ಸಮರ್ಥಿಸಿಕೊಳ್ಳಲಾಗುತ್ತದೆ. ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾನಿಲಯಗಳು ತಮ್ಮ ಶಾಖೆಗಳನ್ನು

**(೧೮ನೇ ಪುಟಕ್ಕೆ**



ಪ್ರಚಲಿತ–೩

# ಕಾಂಗ್ರೆಸ್ ಪಕ್ಷದ ಪುನರುಜ್ಜೀವನ : ಏಕೆ? ಹೇಗೆ?

ರಾಷ್ಟ್ರ ರಾಜಕಾರಣದಲ್ಲಿ ಆಡಳಿತ ಪಕ್ಷವಾದ ಬಿಜೆಪಿಯಷ್ಟೇ ಏನು, ಅದಕ್ಕಿಂತ ಹೆಚ್ಚು ಚರ್ಚೆಯಾಗುತ್ತಿರುವುದು ಕಾಂಗ್ರೆಸ್ ಪಕ್ಷದ ಬಗ್ಗೆ. ಮೋದಿ ನೇತೃತ್ವದ ಬಿಜೆಪಿ ಮತ್ತು ಅದರ ಸರ್ಕಾರ ದೆಹಲಿಯಲ್ಲಿ ಭದ್ರವಾಗಿ ಬೇರೂರಿ ರಾಷ್ಟ್ರ ರಾಜಕಾರಣದ ದಿಕ್ಕನ್ನೇ ಮೂಲಭೂತವಾಗಿ ಬದಲಾಯಿಸಲು ಹೊರಟಿರುವ ರಾಷ್ಟ್ರದ ಇತಿಹಾಸದ ಈ ನಿರ್ಣಾಯಕ ಹೊತ್ತಿನಲ್ಲಿ ರಾಷ್ಟ್ರದ ಇತ್ತೀಚಿನ ಇತಿಹಾಸವನ್ನು ನಿರ್ಮಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಈ ಪಕ್ಷದ ಕಡೆ ಎಲ್ಲರ ಗಮನ ಹರಿಯುವುದು ಸಹಜ. ಆದರೆ ಈ ಪಕ್ಷ ಎಲ್ಲಿದೆ? ಏನು ಮಾಡುತ್ತಿದೆ? ಎಂದು ಹುಡುಕಾವಷ್ಟು ಈ ಪಕ್ಷ ರಾಷ್ಟ್ರ ರಾಜಕೀಯ ಚಿತ್ರದಲ್ಲಿ ಮಸುಕಾಗಿ ಹೋಗಿದೆ. ನಿಜ, ಈ ಪಕ್ಷ ಒಂದೆರಡು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಹಾಗೇ ಇನ್ನೊಂದೆರಡು ರಾಜ್ಯಗಳ ಸರ್ಕಾರದಲ್ಲಿ ಪಾಲುದಾರನಾಗಿದೆ. ಇನ್ನೂ ಒಂದೆರಡು ರಾಜ್ಯಗಳಲ್ಲಿ ಪ್ರಮುಖ ವಿರೋಧ ಪಕ್ಷವಾಗಿದೆ. ಮತ್ತೂ ಮುಖ್ಯವಾಗಿ ಇಂದಿನ ಪ್ರಮುಖ ರಾಷ್ಟ್ರೀಯ ಪಕ್ಷವಾದ ಬಿಜೆಪಿಯನ್ನು ಬಿಟ್ಟರೆ ಈ ಪಕ್ಷಕ್ಕೇ ಚುನಾವಣೆಗಳಲ್ಲಿ ಅತಿ ಹೆಚ್ಚು ಮತ ಬೀಳುತ್ತಿರುವುದು. ಇದು ಬಿಜೆಪಿ ಪಡೆಯುವ ಶೇ.೪೦ರಷ್ಟು ಮತಗಳ ಅರ್ಧದಷ್ಟು ಆದರೂ. ಆದರೆ ಪ್ರಶ್ನೆ ಎಂದರೆ ಕಾಂಗ್ರೆಸ್ ಬಿಜೆಪಿಯ ಆಡಳಿತ ನೀತಿಗಳಿಗೆ ಸವಾಲು ಹಾಕುವ, ಆ ನೀತಿಗಳು ರಾಷ್ಟ್ರದ ಹಿತಕ್ಕೆ ಮಾರಕ ಎಂದು ಜನರಿಗೆ ಮನದಟ್ಟು ಮಾಡುತ್ತಾ ಜೀವಂತಿಕೆಯನ್ನು ಪ್ರದರ್ಶಿಸುತ್ತಿದೆಯೇ ಎಂಬುದು. ಈ ವಿಷಯದಲ್ಲಿ ಅದು, ಈ ಪಕ್ಷದ ಹಲವು ಪ್ರಮುಖರನ್ನೂ ಸೇರಿ, ಎಲ್ಲರಲ್ಲೂ ನಿರಾಶೆ ಹುಟ್ಟಿಸುತ್ತಿದೆ ಎಂಬುದೀಗ ಸರ್ವ ಸಮ್ಮತ ಅಭಿಪ್ರಾಯವಾಗಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಅದರ ಚುನಾವಣಾ ಯಶಸ್ಸು ಶೇ. ೨೦ಕ್ಕಿಂತ ಕಡಿಮೆ ಎಂಬುದು ಚುನಾವಣಾ ಲೆಕ್ಕ ತಜ್ಞರ ಅಭಿಪ್ರಾಯ. ಸ್ವತಂತ್ರ ಭಾರತವನ್ನು ಏಕಾಕಿಯಾಗಿ ಸುಮಾರು ನಾಲ್ಕು ದಶಕಗಳ ಕಾಲ ಆಳಿದ ಈ ಪಕ್ಷ ಕಳೆದ ಮೂರು ದಶಕಗಳಲ್ಲಿ ಲೋಕಸಭೆಯಲ್ಲಿ ಬಹುಮತದ ಮುಖವನ್ನೇ ಕಂಡಿಲ್ಲ. ಅಷ್ಟೇ ಅಲ್ಲ, ಕಳೆದೆರಡು ಚುನಾವಣೆಗಳಲ್ಲಿ ವಿರೋಧ ಪಕ್ಷದ ಮಾನ್ಯತೆ ಪಡೆಯುವ ಕನಿಷ್ಠ ಸ್ಥಾನಗಳನ್ನೂ ಗೆಲ್ಲಲಾಗಿಲ್ಲ ಎಂದರೆ ಏನರ್ಥ?

ನವಭಾರತವನ್ನು ನಿರ್ಮಿಸಿದ ಹೆಗ್ಗಳಿಕೆ ಕಾಂಗ್ರೆಸ್‌ನದು. ರಾಷ್ಟ್ರದಲ್ಲಿ ಪ್ರಜಾಸತ್ತೆಯ ಅಡಿಪಾಯ ರೂಪದ ಸಾಂಸ್ಥಿಕ ರಚನೆಗಳನ್ನೂ ಅಭಿವೃದ್ಧಿಯ ಮೂಲಸೌಲಭ್ಯಗಳನ್ನೂ ರೂಪಿಸಿದ ಪಕ್ಷವಿದು. ಗಾಂಧಿ, ಗೋಖಲೆ, ತಿಲಕ್, ನೆಹರೂ, ಪಟೇಲ್, ರಾಜಾಜಿ, ಆಜಾದ್, ಸುಭಾಷ್‌ರಂತಹ ರಾಷ್ಟ್ರ ನಿರ್ಮಾಪಕರು, ಮುತ್ಸದ್ದಿಗಳು ಮತ್ತು ಕನಸುಗಾರರು ಕಟ್ಟಿದ ಪಕ್ಷವಿದು. ಆದರೆ ಇದು ಇಂದು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುವ ಸ್ಥಿತಿ ತಲುಪಿದೆ. ಇದರ ರಾಷ್ಟ್ರತ್ವದ ವಿರುದ್ಧ ಪರ್ಯಾಯ ತತ್ವವೊಂದನ್ನು ಪ್ರತಿಪಾದಿಸುತ್ತಾ ಬಂದ ಶಕ್ತಿಕೂಟವಿಂದು ಬಿಜೆಪಿ ರೂಪದಲ್ಲಿ 'ಕಾಂಗ್ರೆಸ್ ಮುಕ್ತ ಭಾರತ'ದ ಪಣ ತೊಟ್ಟಿದೆ ಮತ್ತು ಅದಕ್ಕೆ ರಾಷ್ಟ್ರದ ಜನತೆ ಸ್ಪಂದಿಸತೊಡಗಿದೆ ಎಂದರೆ, ಈ ಪಕ್ಷ ತನ್ನ ಹೆಮ್ಮೆಯ ವಾರಸುದಾರಿಕೆಯನ್ನು, ಅಂದರೆ ತನ್ನ ಮೌಲ್ಯ ಪರಂಪರೆಯನ್ನು ಕಳೆದುಕೊಂಡಿದೆ ಎಂದೇ ಅರ್ಥವಲ್ಲವೆ?

ಇದೀಗ ಮುಖ್ಯ ಪ್ರಶ್ನೆ. ಇದು ಹೇಗಾಯಿತು? ಇದಕ್ಕೆ ಎರಡು ಮುಖ್ಯ ಕಾರಣಗಳನ್ನು ಕೊಡಬಹುದು. ಒಂದು, ಅದು ಭ್ರಷ್ಟವಾಗತೊಡಗಿ ಅವಕಾಶವಾದಿಗಳು ಹೆಚ್ಚಾದರು. ಎರಡು, ಇದಕ್ಕೆ ಪೂರಕವಾದದ್ದು: ಪಕ್ಷ ಕುಟುಂಬವಾದಕ್ಕೆ ಬಲಿಯಾಯಿತು. ಪಕ್ಷ ಕುಸಿಯಲಷ್ಟೇ ಅಲ್ಲ, ಅದು ಬೆಳೆಯಲು ಅಡ್ಡಿಯಾಗಿರುವ ಕಾರಣಗಳೂ ಇವೇ ಆಗಿವೆ. ಮುಖ್ಯ ಚುನಾವಣೆಗಳ ಮುನ್ನ ಮತ್ತು ಆನಂತರವೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರುಗಳೇ, ಆಯ್ಕೆಯಾದ ಬಹುಪಾಲು ಶಾಸಕರೇ ತಾವು ಯಾರನ್ನು ವಿರೋಧಿಸುತ್ತಾ ಈವರೆಗೆ ರಾಜಕಾರಣ ಮಾಡುತ್ತಾ ಬಂದಿದ್ದರೋ ಆ ರಾಜಕಾರಣದ ಪಕ್ಷಕ್ಕೆ ಧಾವಿಸುವರು(ಕಳೆದ ಚುನಾವಣೆಗಳ ಸಂದರ್ಭದಲ್ಲಿ ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ಗೋವಾ, ಮಹಾರಾಷ್ಟ್ರಗಳಲ್ಲಿ ಮತ್ತು ಇತ್ತೀಚೆಗೆ ಅರುಣಾಚಲ, ಮಣಿಪುರ ಮತ್ತು ಮೇಘಾಲಯಗಳಲ್ಲಿ ಆದಂತೆ) ಎಂದರೆ ಅದೊಂದು ಪಕ್ಷವೆನ್ನಲು ಆಧಾರವೇ ಇಲ್ಲ ಎಂದಲ್ಲವೆ? ಅಥವಾ ಮೊನ್ನೆ, ಇಂದು ಪಂಜಾಬ್ (ಎರಡು ಅವಧಿಗಳ) ಮುಖ್ಯಮಂತ್ರಿಯಾಗಿದ್ದ ವ್ಯಕ್ತಿ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡ ಮರುದಿನವೇ ಪಕ್ಷದ ವಿರುದ್ಧ ತಿರುಗಿಬಿದ್ದು ಪ್ರತಿ ಪಕ್ಷದ ಪಾಳೆಯ ಸೇರುವನೆಂದರೆ ಪಕ್ಷ ಪೂರ್ಣ ಲಡ್ಡುಹಿಡಿದು ಹೋಗಿದೆ ಎಂದೇ ಅರ್ಥವಲ್ಲವೆ? ಹಾಗಾಗಿ ಈ ಪಕ್ಷ ಕಳೆದೆರಡು ವರ್ಷಗಳಿಂದಲೂ ತನಗಾಗಿ ಪೂರ್ಣ ಪ್ರಮಾಣದ ಅಧ್ಯಕ್ಷರೊಬ್ಬರನ್ನು ಆಯ್ಕೆ ಮಾಡಿಕೊಳ್ಳಲಾಗದಿರುವುದು ಸಹಜವೇ ಆಗಿದೆ.

ಆಯಿತು, ಕಾಲಪ್ರವಾಹದಲ್ಲಿ ಎಲ್ಲವೂ ಸವಕಲಾಗುವುದು ಸಹಜ ಎನ್ನೋಣ. ಆದರೆ ಅದು ಕನಿಷ್ಠ ಅದಕ್ಕೆ ಗೊತ್ತಾಗಬೇಕಲ್ಲವೆ? ಗೊತ್ತಾಗಿದ್ದರೆ ಒಂದು ಆತ್ಮಾವಲೋಕನದ ಪ್ರಯತ್ನವಾದರೂ ಕಾಣಬೇಕಲ್ಲವೆ? ಇವಾವುವೂ ಇಲ್ಲವೆಂಬುದು ಇಂದು ದೇಶದಲ್ಲಿ ಪ್ರಜಾಸತ್ತೆಯ ಅಳಿವು–ಉಳಿವಿನ ಬಗ್ಗೆ ಆತಂಕಗೊಂಡಿರುವ ಜನರ ಚಿಂತೆಯಾಗಿದೆ. ಈ ಚಿಂತೆಯ ಭಾಗವಾಗಿಯೇ ಪತ್ರಿಕೆ ಈ ಬಗ್ಗೆ ಕಾಳಜಿ ಇರುವ ನಮ್ಮ ಕೆಲ ಆಯ್ದ ಓದುಗರ ಅಭಿಪ್ರಾಯಗಳನ್ನು ಈ ಮೂರು ಪ್ರಶ್ನೆಗಳನ್ನು ಕೇಳುವ ಮೂಲಕ ಸಂಗ್ರಹಿಸಿ ಇಲ್ಲಿ ನೀಡಿದೆ–**ಸಂ.**

**೧. ಭಾರತದ ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷ ಅಸ್ತಂಗತವಾಗುವ ಹಂತ ತಲುಪಿದೆ ಎಂದು ನಿಮಗನ್ನಿಸುತ್ತಿದೆಯೇ? ಹಾಗೆನ್ನಿಸುತ್ತಿದ್ದಲ್ಲಿ ಕಾರಣಗಳೇನು?**

**೨. ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯ ದೃಷ್ಟಿಯಿಂದ ಕಾಂಗ್ರೆಸ್ ಪಕ್ಷದ ಉಳಿವು ಎಷ್ಟು ಮುಖ್ಯವೆಂದು ನಿಮಗನ್ನಿಸುತ್ತದೆ?**

**೩. ಕಾಂಗ್ರೆಸ್ ಪಕ್ಷದ ಇಂದಿನ 'ಚಿಂತಾಜನಕ' ಪರಿಸ್ಥಿತಿಗೆ ನಿಮ್ಮ ಪ್ರಕಾರ ಮುಖ್ಯ ಕಾರಣಗಳೇನು? ಇದ್ದೂ ಪುನಶ್ಚೇತನಗೊಳ್ಳುವ ಸಾಧ್ಯತೆಗಳಿವೆಯೇ? ಅದಕ್ಕಾಗಿ ಅದರಲ್ಲಿ ಆಗಬೇಕಾದ ಬದಲಾವಣೆಗಳೇನು?**

## ರಾಹುಲರ ಅಸಂಗತ ಅಪೇಕ್ಷೆಯೇ ಪಕ್ಷದ ಸಮಸ್ಯೆಗೆ ಕಾರಣ

೧. ಕಾಂಗ್ರೆಸ್ ಅಸ್ತಂಗತವಾಗುವ ಹಂತ ತಲುಪಿದೆ ಎಂದು ನನಗೆ ಅನಿಸಿಲ್ಲ. ಹಿರಿಯ ಪತ್ರಕರ್ತ ಶೇಖರ್ ಗುಪ್ತ ತಮ್ಮ ಇತ್ತೀಚಿನ ಲೇಖನದಲ್ಲಿ ನೆನಪಿಸಿರುವಂತೆ ಕಳೆದ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಅದು ಶೇಕಡ ಇಪ್ಪತ್ತರಷ್ಟು ಮತಗಳನ್ನು ಗಳಿಸಿದೆ.

೨. ಪ್ರಜಾಸತ್ತಾತ್ಮಕ ವ್ಯವಸ್ಥೆಯ ಒಂದು ಮುಖ್ಯ ಲಕ್ಷಣವೆಂದರೆ ಅದು ಜನರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಆಯ್ಕೆಯ ಸ್ವಾತಂತ್ರ್ಯವನ್ನು ನೀಡುತ್ತದೆ ಎಂಬುದು. ಅಲ್ಲಿ ರಾಜಕೀಯ ಕ್ಷೇತ್ರದಲ್ಲಿ ಆಡಳಿತ ನಡೆಸಲು ಆಯ್ಕೆಯಾದ ಪಕ್ಷಕ್ಕೆ ಎದುರಾಗಿ ಪ್ರತಿಪಕ್ಷಗಳಿದ್ದು, ಇವು ಜನರಿಗೆ ನಿರಂತರವಾಗಿ ಒಂದು ಪರ್ಯಾಯವನ್ನು ಒದಗಿಸುತ್ತವೆ. ಈಗ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿ.ಜೆ.ಪಿ.ಗೆ ಪರ್ಯಾಯವನ್ನು ಒದಗಿಸಲು, ದೇಶದಾದ್ಯಂತ ತನ್ನ ಇರುವಿಕೆಯನ್ನು ಸಾಬೀತುಪಡಿಸಿರುವ ಕಾಂಗ್ರೆಸ್, ಏಕಾಂಗಿಯಾಗಿ ಅಲ್ಲದಿದ್ದರೂ ಇತರ ಮಿತ್ರ ಪಕ್ಷಗಳೊಂದಿಗೆ ಸೇರಿ, ಒಂದು ಅವಕಾಶವನ್ನು ನೀಡಬಲ್ಲದಾಗಿದೆ. ಹಿಂದೆ, ತುರ್ತುಪರಿಸ್ಥಿತಿಯ ನಂತರದ ಚುನಾವಣೆಯಲ್ಲಿ ಕಾಂಗ್ರೆ ಪಕ್ಷವನ್ನು ಸೋಲಿಸಿದ ಜನತಾ ಪಕ್ಷಕ್ಕೆ, ಅದರ ಭಾಗವೇ ಆಗಿದ್ದ ಸಂಸ್ಥಾ ಕಾಂಗ್ರೆಸ್‌ನ ನಾಯಕರು ಮತ್ತು ಕಾರ್ಯಕರ್ತರು, ಅಖಿಲ ಭಾರತ ಮಟ್ಟದ ನೆಲೆಯನ್ನು ಒದಗಿಸಿದ್ದನ್ನು ನೆನೆಯಬಹುದು.

೩. ಸೋನಿಯಾ ಗಾಂಧಿಯವರು ಕಾಂಗ್ರೆಸ್‌ಗೆ, ತಮ್ಮ ಪುತ್ರ ರಾಹುಲ್ ಅವರನ್ನು ತಮ್ಮ ವಾರಸುದಾರನನ್ನಾಗಿ ಮಾಡಿದರು. ಆದರೆ ರಾಹುಲ್ ಅವರು, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಮೊದಲ ಅವಧಿಯಲ್ಲಿ ಮಂತ್ರಿಯಾಗಿ ದುಡಿದು ಆಡಳಿತದ ಅನುಭವ ಪಡೆದು ನಂತರದ ಎರಡನೆ ಅವಧಿಯಲ್ಲಿ ಪ್ರಧಾನಿಯಾಗಿ ಪಕ್ಷದ ಮೇಲೆ ಹಿಡಿತ ಸಾಧಿಸಬಹುದಾಗಿದ್ದ ಅವಕಾಶಗಳನ್ನು ನಿರಾಕರಿಸಿ ಒಲ್ಲದ ಮನಸ್ಸಿನ ರಾಜಕಾರಣಿಯಾಗಿಯೇ ಉಳಿದರು. ಪಕ್ಷ ಅಧಿಕಾರ ಕಳೆದುಕೊಂಡಿರುವ ಈಚಿನ ವರ್ಷಗಳಲ್ಲಿ ಅವರು 'ಎನ್.ಜಿ.ಒ. ಟೈಪ್' ಎಂದು ಗುರುತಿಸಲಾಗುವ ಯುವಕರನ್ನು ತಮ್ಮ ಸಲಹೆಗಾರರನ್ನಾಗಿ ಮಾಡಿಕೊಂಡಿದ್ದಾರೆ. ಅವರಿಗೆ ಸಾಂಪ್ರದಾಯಿಕ ಕಾಂಗ್ರೆಸ್ ರಾಜಕಾರಣಿಗಳು ಬೇಡವಾಗಿದ್ದಾರೆ. ಅಂದರೆ, ಅವರಿಗೆ ಕಾಂಗ್ರೆಸ್ಸಿಗರಿಲ್ಲದ ಕಾಂಗ್ರೆಸ್ ಬೇಕು. ಅವರ ಈ ಅಸಂಗತ ಅಪೇಕ್ಷೆಯೆ ಪಕ್ಷದ ಸಮಸ್ಯೆಗಳಿಗೆ ಕಾರಣವಾಗಿದೆ.



ಈ ಪಕ್ಷದ ಮಾಜಿ ಸದಸ್ಯರಾದ ಶರದ್ ಪವಾರ್, ಮಮತಾ ಬ್ಯಾನರ್ಜಿಯಂತವರು ಒಂದು ಸದೃಢ ಮೈತ್ರಿಕೂಟವನ್ನು ಸೃಷ್ಟಿಸಿದರೆ ಅದರಲ್ಲಿ ರಾಹುಲ್ ಅವರಿಗೆ ಬೇಡವಾಗಿರುವ ಕಾಂಗ್ರೆಸಿಗರು ಸೇರಿ ಒಂದು ಹೊಸ ಕಾಂಗ್ರೆಸ್ ಸೃಷ್ಟಿಯಾಗಿ, ಅದು ಈಗಿನ ಆಡಳಿತಾರೂಢ ಪಕ್ಷಕ್ಕೆ ಪರ್ಯಾಯವೆಂದು ಮತದಾರರಿಗೆ ಅನಿಸಬಹುದು.

**–ಗಿರೀಶ್ ವಿ.ವಾಘ್**, ನಿವೃತ್ತ ಪತ್ರಕರ್ತರು, ಚಿಂತಕರು, ಬೆಂಗಳೂರು.

## ತನ್ನ ಹಳೆಯ ಪ್ರಧಾನ ಶಕ್ತಿ ಕೇಂದ್ರದ ಹಂಬಲ ತೊರೆಯಬೇಕು

೧. ಕಾಂಗ್ರೆಸ್ ಈಚೆಗೆ ಚುನಾವಣೆಗಳಲ್ಲಿ ಹೆಚ್ಚಿನ ಯಶಸ್ಸು ಪಡೆದಿಲ್ಲ ಎಂದ ಮಾತ್ರಕ್ಕೆ ಅದು ಅಸ್ತಂಗತವಾಗುವ ಹಂತ ತಲುಪಿದೆ ಎಂದು ನಾನು ಭಾವಿಸುವುದಿಲ್ಲ. ಏನಲ್ಲದಿದ್ದರೂ ಭಾರತದ ಜಾತ್ಯಾತೀತ ನಿಲುವಿನ ಹಲವು ಪಕ್ಷಗಳ ಒಕ್ಕೂಟ ರಚಿಸಲು ಅದಕ್ಕೆ ಸಾಧ್ಯವಿದೆ. ಎಲ್ಲಾ ರಾಜ್ಯಗಳಲ್ಲೂ ಅದೇ ದೊಡ್ಡ ಪಕ್ಷವಾಗಿ ಹೊರಹೊಮ್ಮದಿರಬಹುದು. ಆದರೆ ಬೇರೆ ಬೇರೆ ಪಕ್ಷಗಳ ನಡುವೆ ಒಂದು ಸಂಯೋಜಕ ಪಾತ್ರ ವಹಿಸಬಲ್ಲ ಶಕ್ತಿ ಅದಕ್ಕೆ ಈಗಲೂ ಇದೆ. ತನ್ನ ಹಳೆಯ ಪ್ರಧಾನ ಶಕ್ತಿ ಕೇಂದ್ರದ ಹಂಬಲ ತೊರೆದು ಆಯಾ ರಾಜ್ಯಗಳ ಪರಿಸ್ಥಿತಿ ಅರಿತು ಅದು ಕೊಳುಕೊಡೆ ಮಾಡಲು ಸಿದ್ಧವಾಗಬೇಕೆನಿಸುತ್ತದೆ.

೨. ಪ್ರಜಾಪ್ರಭುತ್ವದ ಉಳಿವಿಗೆ ಸಂವಿಧಾನದ ಆಶಯಗಳ ಬಗ್ಗೆ ಬದ್ಧತೆ ಇರುವ ಪಕ್ಷಗಳು ಬಲಿಷ್ಠವಾಗಬೇಕು. ಕಾಂಗ್ರೆಸ್ ಈಗ ಸಂವಿಧಾನ ಪರವಾದ ಬಿಂದುವನ್ನು

ಪ್ರತಿನಿಧಿಸುತ್ತಿದೆ. ಇದೇ ಬದ್ಧತೆ ಬೇರೆ ಪ್ರಾದೇಶಿಕ ಪಕ್ಷಗಳಿಗೆ ಅಷ್ಟಾಗಿ ಇದ್ದಂತಿಲ್ಲ. ಬಿಜೆಪಿ ಬಹಿರಂಗವಾಗಿ ಹೇಳದಿದ್ದರೂ ಅದರ ಪರಿವಾರ ಸಂಘಟನೆಗಳು ಸಂವಿಧಾನದ ಆಶಯಗಳಿಗೆ ಸವಾಲು ಹಾಕುತ್ತಲೇ ಇವೆ. ಬಾಬ್ರಿ ಮಸ್ಜಿದ್– ರಾಮಜನ್ಮ ಭೂಮಿ ಪ್ರಕರಣದಲ್ಲಿ ಸ್ವತಃ ಬಿಜೆಪಿ ಸುಪ್ರೀಂ ಕೋರ್ಟ್‌ನ ಸೂಚನೆಗಳನ್ನು ಮೀರಿದೆ. ಹೀಗಿರುವಾಗ ಪ್ರಜಾಪ್ರಭುತ್ವದ ರಕ್ಷಣೆ ಹಾಗೂ ಸಂವಿಧಾನದ ಆಶಯಗಳ ಉಳಿವಿಗೆ ಎಡಪಕ್ಷಗಳೂ ಸೇರಿದಂತೆ ಹಲವು ರಾಜಕೀಯ ಪಕ್ಷಗಳ ಕ್ರಿಯಾಶೀಲ ಅಸ್ತಿತ್ವ ಅಗತ್ಯ. ಇದೇ ಕಾರಣಕ್ಕೆ ಕಾಂಗ್ರೆಸ್ ಕೂಡ ಅಗತ್ಯ ಎಂದು ಭಾವಿಸುತ್ತೇನೆ.

೩. ಅದು ಪುನಶ್ಚೇತನಗೊಳ್ಳಬೇಕು. ಅದರ ಅವನತಿಗೆ ಹಲವು ಕಾರಣಗಳಿವೆ. ಕಳೆದ ಒಂದು ದಶಕದಿಂದ ಮಾಧ್ಯಮಗಳು ತೀರಾ ಏಕಪಕ್ಷೀಯವಾಗಿರುವುದು, ಅವುಗಳ ಮೇಲೆ ಬಿಜೆಪಿ ಪರವಾದ ಬಂಡವಾಳಿಗರ ಏಕಸ್ವಾಮ್ಯ ಏರ್ಪಟ್ಟಿರುವುದು ಒಂದು ಕಾರಣ. ನಾಯಕತ್ವದಲ್ಲಿರುವ ಗುಂಪುಗಾರಿಕೆ, ಪರಸ್ಪರರನ್ನು ಸೋಲಿಸಬಯಸುವ ಕುತ್ಸಿತ ತಂತ್ರಗಳು ಕೂಡ ಕಾಂಗ್ರೆಸ್ ಪಕ್ಷವನ್ನು ದುರ್ಬಲಗೊಳಿಸಿವೆ. ಇದಕ್ಕೆ ಪರಿಹಾರವೇನೆಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಆಯಾ ರಾಜ್ಯಗಳಲ್ಲಿ ಸ್ವಾರ್ಥಕ್ಕಿಂತ ಪಕ್ಷ ನಿಷ್ಠೆ ಹೆಚ್ಚಿರುವ ನಾಯಕರನ್ನು ಬೆಳೆಸಿದರೆ ಶಕ್ತಿ ಮೈಗೂಡಬಹುದು.



**–ಬಂಜಗೆರೆ ಜಯಪ್ರಕಾಶ್**, ಲೇಖಕರು, ಚಿಂತಕರು, ಹಾರೋಹಳ್ಳಿ

## ನೆಹರೂ ಯುಗಧರ್ಮದಿಂದ ವಿಮುಖರಾಗುತ್ತಾ ನಡೆದ ಪರಿಣಾಮ

೧. ಕಾಂಗ್ರೆಸ್ ಪಕ್ಷ ರಾಜಕೀಯವಾಗಿ ಅಪ್ರಸ್ತುತಗೊಳ್ಳುತ್ತಾ ಸಾಗಿದೆಯೇ ಹೊರತು ತೀರಾ ಅಸ್ತಂಗತವಾಗಿಬಿಡುವಂತಹ ಮಾರಣಾಂತಿಕ ಹಂತವನ್ನೇನೂ ತಲುಪಿಲ್ಲ. ಸನಿಹದ ಭವಿಷ್ಯದಲ್ಲಿ ಹಾಗಾಗಿಬಿಡಬಹುದಾದ ಸಾಧ್ಯತೆಯೂ ಇಲ್ಲ. ಆದರೆ ಇವತ್ತಿನ ಆ ಪಕ್ಷದ ದುಃಸ್ಥಿತಿಗೆ ಪ್ರಮುಖ ಕಾರಣ ೧೯೯೮ರಿಂದ ಅಬಾಧಿತವಾಗಿ ಮುಂದುವರೆದಿರುವ ಸೋನಿಯಾ ಗಾಂಧಿ ಮತ್ತು ಆಕೆಯ ಇಬ್ಬರು ಮಕ್ಕಳ ಕೌಟುಂಬಿಕ ಮಾಲೀಕತ್ವ, ಕಾಂಗ್ರೆಸ್ ಹೈಕಮಾಂಡಿನ ಅತ್ಯುನ್ನತ ಮೂರು ಪದವಿಗಳಿಗೆ ಸ್ಪರ್ಧೆಯಾಗಲೀ, ಸಾಮರ್ಥ್ಯ ಪರೀಕ್ಷೆಯಾಗಲೀ ಅಥವಾ ಆಂತರಿಕ ಚುನಾವಣೆಯಾಗಲೀ ಇಲ್ಲದಿರುವುದೇ ಅದು ತನ್ನ ಚಲನಶೀಲತೆ ಮತ್ತು ಜೀವಂತಿಕೆ ಕಳೆದುಕೊಂಡು ರೋಗಗ್ರಸ್ತ ಉದ್ಯಮದಂತಾಗಿದೆ.

೨. ರಾಷ್ಟ್ರವ್ಯಾಪಿ ಸಂಘಟನೆಯಿರುವ, ೧೩೬ ವರ್ಷಗಳಷ್ಟು ಪುರಾತನ ಇತಿಹಾಸವುಳ್ಳ ಕಾಂಗ್ರೆಸ್ ಪಕ್ಷ ಭಾರತದ ಸಂಸದೀಯ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಸಮತೋಲನ ಕಾಪಾಡಿಕೊಳ್ಳುವ ದೃಷ್ಟಿಯಿಂದಲಾದರೂ ಒಂದು ಸದೃಢ ಸಂಘಟನೆಯಾಗಿ ಮುಂದುವರೆಯುವುದು ಅಗತ್ಯ. ಇಲ್ಲದಿದ್ದರೆ ಕಳೆದ ಏಳೂವರೆ ವರ್ಷಗಳಲ್ಲಾದಂತೆ ರಾಕ್ಷಸ ಬಹುಮತವುಳ್ಳ ಹಾಗೂ ಪ್ರಚಂಡ ಜನಾಕರ್ಷಕ ವ್ಯಕ್ತಿತ್ವವುಳ್ಳ ಅಧಿಕಾರಾರೂಢ ಪಕ್ಷವೊಂದು ಸಮಬಲದ ಪ್ರತಿಸ್ಪರ್ಧಿಗಳಿಲ್ಲದೆ ಸರ್ವಾಧಿಕಾರದತ್ತ ಸಾಗಿಬಿಡಬಹುದಾದ ಅಪಾಯವಿದೆ.

೩. ಸ್ವಾತಂತ್ರ್ಯಾನಂತರದ ಮೊದಲ ೧೭ ವರ್ಷ ಭಾರತದ ರಾಜಕಾರಣವನ್ನು ಪ್ರಭಾವಿಸುತ್ತಾ ಬಂದ ನೆಹರೂ ಯುಗಧರ್ಮದಿಂದ ವಿಮುಖರಾಗುತ್ತಾ ನಡೆದ ಇಂದಿರಾಗಾಂಧಿ ಕಾಲದ ಕಾಂಗ್ರೆಸ್ ಸಂಸ್ಕೃತಿಯಿಂದಾಗಿಯೇ ಆ ಪಕ್ಷ ಇವತ್ತು ರಾಜಕೀಯವಾಗಿ ಕಳವಳಕಾರಕ ಸ್ಥಿತಿಯಲ್ಲಿ ತೊಳಲಾಡುವಂತಾಗಿದೆ. ಇತರೆ ಪಕ್ಷಗಳಿಗೆ ಹೋಲಿಸಿದಲ್ಲಿ ಕಾಂಗ್ರೆಸ್ ಪಕ್ಷದಲ್ಲಿರುವಷ್ಟು ಮಂದಿ ಅತ್ಯುನ್ನತ ವಿದ್ಯೆ, ವ್ಯಾಸಂಗದ ಹಿನ್ನೆಲೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸೂಕ್ಷ್ಮತೆಗಳ ಪರಿಜ್ಞಾನ, ದೇಶ–ವಿದೇಶಗಳ ವಿದ್ಯಮಾನಗಳ ಅರಿವು ಹಾಗೂ ಪರಿಪಕ್ವವಾದ ಆಡಳಿತಾತ್ಮಕ ಹಾಗೂ ರಾಜಕೀಯ ಅನುಭವವಿರುವ ಗುಣಮಟ್ಟದ ನಾಯಕರುಗಳು ಬೇರೆಲ್ಲೂ ಇಲ್ಲವೇ ಇಲ್ಲ. ಆದರೇನಂತೆ, ಇವರುಗಳೆಲ್ಲಾ ಸ್ವಂತ ವಿಚಾರ ಮತ್ತು ಸ್ವತಂತ್ರ ವ್ಯಕ್ತಿತ್ವದ ಲೀಡರುಗಳಾಗಿ ಅರಳುವ ಬದಲು ಹೈಕಮಾಂಡಿನ ದಾಸಾನುದಾಸರಂತೆ ವರ್ತಿಸುತ್ತಾ ಬಂದ ಜಾಯಮಾನದಿಂದಾಗಿ ಜಡಭರತನಂತಾಗಿದ್ದಾರೆ. ಅವರ ಪಕ್ಷಕ್ಕೂ ಅದೇ ರೀತಿಯ ವೈಚಾರಿಕ ಹಾಗೂ ಸೈದ್ಧಾಂತಿಕ ಜಡತ್ವ ಬಾಧಿಸತೊಡಗಿದೆ. ಇದು ಬದಲಾಗಬೇಕಾದರೆ ಸೋನಿಯಾ ಗಾಂಧಿಯ ಕುಟುಂಬ ಸ್ವಯಂಪ್ರೇರಿತವಾಗಿ ಪಕ್ಷದ ನಿಯಂತ್ರಣವನ್ನು ಬಿಟ್ಟುಕೊಟ್ಟು ಆಂತರಿಕ ಪ್ರಜಾಪ್ರಭುತ್ವಕ್ಕೆ ಅನುವು ಮಾಡಿಕೊಡಬೇಕಷ್ಟೆ.



**–ರವೀಂದ್ರ ರೇಷ್ಮೆ, ಶೈಕ್ಷಣಿಕ ಚಿಂತಕ, ರಾಜಕೀಯ ವಿಶ್ಲೇಷಕ, ಬೆಂಗಳೂರು**

## ಕೇವಲ 'ಅಮ್ಮ ಮಕ್ಕಳ ಪಕ್ಷ'ವಾಗಿ ಉಳಿಯದೆ ಇನ್ನಷ್ಟು ವಿಸ್ತರಿಸಬೇಕು

೧.ಕಾಂಗ್ರೆಸ್ ಅಸ್ತಂಗತವಾಗುವ ಹಂತ ತಲುಪಿದೆಯೇ ಎಂಬ ಅನುಮಾನ ಮತ್ತು ಕಾಂಗ್ರೆಸ್ ನೇತೃತ್ವದ "ಯುಪಿಎ ಎಲ್ಲಿದೆ? ಅದು ಎಂದೋ ಸತ್ತು ಇತಿಹಾಸಕ್ಕೆ ಸೇರಿದೆ" ಎಂಬ ಮಮತಾ ಬ್ಯಾನರ್ಜಿಯ ವ್ಯಂಗ್ಯ – ಇವೆರಡೂ ನಮ್ಮ ದೇಶದ ರಾಜಕಾರಣಕ್ಕೆ ಕಾಂಗ್ರೆಸ್ ಪಕ್ಷದ ಅನಿವಾರ್ಯತೆಯನ್ನು ಎತ್ತಿ ಹೇಳುತ್ತವೆ. ದೆಹಲಿ ದಾದಾಗಳನ್ನು ಮಣಿಸಿದರೂ ಮಮತಾ ದೀದಿಯ ಟಿಎಂಸಿ ಆಗಲಿ, ಮತ್ತಿತರ ಪಕ್ಷಗಳಾಗಲಿ ರಾಷ್ಟ್ರವ್ಯಾಪಿ ಅಸ್ಮಿತೆ ಮತ್ತು ಅಸ್ತಿತ್ವ ಗಳಿಸಬಹುದು ಎಂದು ನಿರೀಕ್ಷಿಸುವುದೇ ಕಷ್ಟ. ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ತೃತೀಯ ರಂಗದ ಬಗ್ಗೆ ಆಸೆಗಳಂತೂ ಇವೆ, ಆದರೆ ಅದಿನ್ನೂ ರಾಜಕಾರಣದ ಪ್ರಯೋಗ ರಂಗವಾಗಿಯೇ ಉಳಿದಿದೆ. ಕಾಂಗ್ರೆಸ್ ಪಕ್ಷವಂತೂ ಬಹುಪಾಲು ರಾಜ್ಯಗಳಲ್ಲಿ ಲೆಕ್ಕಕ್ಕೇ ಇಲ್ಲ, ಹಾಗಿದ್ದರೂ ಬಿಜೆಪಿಯ ರಾಜಕೀಯ ಲೆಕ್ಕಾಚಾರದಲ್ಲಿ ಅದೇಕೆ ಅಷ್ಟೊಂದು ದೊಡ್ಡ ಪಾಲು ಪಡೆದಿದೆ?

೨. ಹಲವು ಧರ್ಮಗಳು, ಜಾತಿಗಳು, ಸಂಸ್ಕೃತಿಗಳು ಸೇರಿದ ಬಹುರೂಪಿ ವ್ಯವಸ್ಥೆ ಇದ್ದರೂ ಭಾರತ ಜಾತ್ಯತೀತ ಒಕ್ಕೂಟವಾಗಿ ಸಂವಿಧಾನದಲ್ಲಿ ಘೋಷಿಸಿಕೊಂಡಿದೆ. ಹಾಗಿದ್ದೂ ಎಪ್ಪತ್ತು ವರ್ಷಗಳಲ್ಲಿ ಕಾಂಗ್ರೆಸ್ ಆ ವಿಚಾರಗಳಲ್ಲಿ ಪ್ರತಿಯೊಂದನ್ನೂ ತನ್ನ ರಾಜಕಾರಣಕ್ಕೆ ಯಥೇಚ್ಛವಾಗಿ ಬಳಸಿಕೊಂಡಿದೆ; ಬಿಜೆಪಿಯೂ ಏಳು ವರ್ಷಗಳಲ್ಲಿ ಅದನ್ನೇ ಮಾಡುತ್ತಿಲ್ಲವೇ ಎಂಬ ಪ್ರಶ್ನೆಯನ್ನೂ ಕೇಳಬಹುದು.

ಮುಖ್ಯ ವಿಚಾರವೆಂದರೆ, ಅಧಿಕಾರ ಹಿಡಿಯುವುದರ ಜೊತೆಗೆ ಇಡೀ ದೇಶದ ಸಾಂಸ್ಕೃತಿಕ ಚಹರೆ ಬದಲಾಯಿಸಿ ಅದನ್ನು ಏಕರೂಪದ ಧಾರ್ಮಿಕ ಅಚ್ಚಿನಲ್ಲಿ ಎರಕ ಹಾಕಬೇಕೆಂಬ ಸಿದ್ಧಾಂತದ ಬೆಳವಣಿಗೆ. ಬಿಜೆಪಿಯ ಇಂಥ ಚಿಂತನೆಯನ್ನು ಪ್ರಶ್ನೆ ಮಾಡಬೇಕು, ಪ್ರಶ್ನೆ ಮಾಡಲು ಒಂದಿಷ್ಟಾದರೂ ಪ್ರಭಾವ ಇರುವ ವಿರೋಧ ಪಕ್ಷ ಇರಬೇಕು.

೩. ತನ್ನ ನಾಯಕತ್ವವನ್ನು ಎದುರಿಸಬಲ್ಲ ಪ್ರಬಲ ನಾಯಕತ್ವ ಕಾಂಗ್ರೆಸ್‌ನಲ್ಲಿ ಕಾಣದಿರುವುದೇ ಬಿಜೆಪಿಯ ಪ್ರಧಾನ ಬಲ; ಕಾಂಗ್ರೆಸ್ ನಿಶ್ಶಕ್ತಿಯೇ ಬಿಜೆಪಿಯ ದೊಡ್ಡ ಶಕ್ತಿ – ಎಂದರೆ ತಪ್ಪೇನಲ್ಲ. ಕೇವಲ 'ಅಮ್ಮ ಮಕ್ಕಳ ಪಕ್ಷ' ವಾಗಿ ಉಳಿಯದೆ ಇನ್ನಷ್ಟು ವಿಸ್ತರಿಸುವ ಕೆಲಸಕ್ಕೆ ಕಾಂಗ್ರೆಸ್ ದೃಢ ನಿರ್ಧಾರ ಮಾಡಬೇಕಷ್ಟೆ. ಸಾಂದರ್ಭಿಕ ಆಯ್ಕೆಯಾದರೂ, ಲಾಲ್‌ಬಹದ್ದೂರ್ ಶಾಸ್ತ್ರಿ, ಪಿ.ವಿ. ನರಸಿಂಹರಾವ್, ಐ.ಕೆ. ಗುಜ್ರಾಲ್, ಮನಮೋಹನ ಸಿಂಗ್ ಅವರೆಲ್ಲ ಪ್ರಧಾನಿಗಳಾಗಿದ್ದ ಪರಂಪರೆ ಕಾಂಗ್ರೆಸ್‌ಗೆ ಇದೆ. ಆದರೆ, 'ಹಿಂದುತ್ವ ಬೇಡ, ಹಿಂದೂಗಳಾಗಿ ಇರೋಣ' ಎನ್ನುವ ಹೊಸ ಸೂತ್ರ ಕಾಂಗ್ರೆಸ್‌ಗೆ 'ಪುನಶ್ಚೇತನ' ಮಂತ್ರ ಆಗುವ ಲಕ್ಷಣಗಳಿವೆ! ಇದು ಕಾಂಗ್ರೆಸ್ ಪಕ್ಷದ ಹೊಸ ಚಿಂತಾಜನಕ ಪರಿಸ್ಥಿತಿ!!



–ಆರ್.ಪೂರ್ಣಿಮಾ, ನಿವೃತ್ತ ಪತ್ರಕರ್ತರು ಮತ್ತು ಲೇಖಕಿ, ಬೆಂಗಳೂರು

## ಹೈಕಮ್ಯಾಂಡ್ ನಾಶವಾಗಬೇಕು. ಪ್ರಜಾಸತ್ತಾತ್ಮಕ ಪ್ರಕ್ರಿಯೆ ಬರಬೇಕು.

೧. ಥಟ್ ಉತ್ತರ ಹೌದು. ಕಳೆದ ೪೫ ವರ್ಷಗಳ ಅದರ ದುರಾಡಳಿತ, ದುರಹಂಕಾರಗಳೇ ಕಾರಣ. ನಿರ್ದಿಷ್ಟವಾಗಿ ಹೇಳಬೇಕಾದ್ದು; ೧೯೭೦ರ ದಶಕದ ಇಂದಿರಾ ಬಿರುಗಾಳಿಯಲ್ಲಿ ಅಧಿಕಾರ ಹಿಡಿದ – ಸಿದ್ಧಾಂತ, ಸಾಮಾಜಿಕ ನಿಲುವಿಲ್ಲದ, ರೈತ, ಕಾರ್ಮಿಕ ನಾಯಕರಲ್ಲದ, ಯಾವ ಹೋರಾಟಗಳಲ್ಲೂ ಭಾಗವಹಿಸದ, ಗೂಂಡಾಗಳಲ್ಲೇ ಇಂದಿನ ಪಕ್ಷದ ನಾಯಕತ್ವ ಇರುವುದರಿಂದ. ಸಿದ್ಧಾಂತ, ಸಮಾಜವಾದ, ಜಾತ್ಯತೀತತೆ, ವೈಚಾರಿಕತೆ, ವೈಜ್ಞಾನಿಕ ಮನೋಭಾವಗಳು ಅಷ್ಟಿಷ್ಟೂ ಇಲ್ಲವಾಗಿದ್ದು ಹಾಗೂ ನೋಟುಗಳ ಮೂಟೆಗಳೇ ಮುಖ್ಯವಾಗಿದ್ದು. ಅಧ್ಯಕ್ಷರ ಹೆಸರಿನಲ್ಲಿ ಸೆಕ್ರೆಟರಿಗಳೆಂಬ ದೆಹಲಿ ದಲಾಲರು, ಪಿಎಗಳು ಎಲ್ಲವನ್ನೂ ನಿರ್ಧರಿಸುತ್ತಿದ್ದದ್ದು.

೨. ೨೦೧೪ ಮತ್ತು ೨೦೧೯ರ ಚುನಾವಣೆಗಳಲ್ಲಿ ಶೇ. ೧೯.೪ರ ಮತಗಳಿಕೆ ಮತ್ತು ದೇಶ ಮಟ್ಟದಲ್ಲಿ ಜನವಿರೋಧಿ ಬಿಜೆಪಿಗೆ ಮತ್ತೊಂದು ಇಲ್ಲದ ಪರ್ಯಾಯವನ್ನು ಪ್ರಸ್ತುತವಾಗಿಸಿದಂತೆ ಕಾಣುವುದಾದರೂ, ಕರ್ನಾಟಕವೂ ಸೇರಿ ಪ್ರಾದೇಶಿಕ ಪಕ್ಷಗಳಿಲ್ಲದ ಮತ್ತೊಂದೆರೆಡು ರಾಜ್ಯಗಳಿಗೆ ಮಾತ್ರ ಅದು ಬೇಕಾಗಬಹುದು.

೩. ಪುನಶ್ಚೇತನ ಅಸಾಧ್ಯವೇನಲ್ಲ. ಇಂದಿರಾ ಕುಟುಂಬವೇ ಅಧ್ಯಕ್ಷ ಪದವಿ ಇಟ್ಟುಕೊಳ್ಳಲಿ. ಆದರೆ ಹೈಕಮ್ಯಾಂಡ್ ನಾಶವಾಗಬೇಕು. ಪ್ರಜಾಸತ್ತಾತ್ಮಕ ಪ್ರಕ್ರಿಯೆ ಬರಬೇಕು. ಅದರ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಸಿದ್ಧಾಂತಗಳು ಸ್ಪಷ್ಟವಾಗಿರಬೇಕು. ಪಕ್ಷದ ಪ್ರತಿಯೊಬ್ಬನಿಗೂ ಅವುಗಳ ತಿಳಿವಳಿಕೆ ಇರಬೇಕು. ಅಧಿಕಾರ ವಿಕೇಂದ್ರೀಕರಣವಾಗಬೇಕು. ರಾಜ್ಯ ಘಟಕಗಳು ಬಲವಾಗಿ ಕೇಂದ್ರ ಸಮಿತಿಯನ್ನು ರೂಪಿಸುವಂತಾಗಬೇಕು. ಎಲ್ಲಾ ರಾಜ್ಯಗಳಲ್ಲೂ ಒಂದಿಷ್ಟು ಸಿದ್ಧಾಂತ, ಪ್ರಾಮಾಣಿಕತೆ, ಜಾತ್ಯತೀತ, ಹೋರಾಟ ಮನೋಭಾವದ ಸಿದ್ದರಾಮಯ್ಯರಂತಹವರನ್ನು ಪಕ್ಷದಲ್ಲಿ ಸ್ಥಾಪಿಸಬೇಕು.

ಗೆದ್ದಾಗ ಬೀಗುವ, ಸೋತಾಗ ರಾಜೀನಾಮೆ ಕೊಡುವ ನಾಯಕರಿರುವವರೆಗೆ ನಮ್ಮೆಲ್ಲರ ನಿರೀಕ್ಷೆ ಅಸಾಧ್ಯ. ಕೊನೆಯದಾಗಿ: ಬದಲಾವಣೆ ರಾತ್ರೋರಾತ್ರಿಯಾಗುವುದಲ್ಲ ಎಂಬುದನ್ನು ಕಾಂಗ್ರೆಸ್ ತಿಳಿಯಬೇಕು.



**–ಎನ್.ಕೆ. ಮೋಹನರಾಮ್**, ಮಾಧ್ಯಮ ತಜ್ಞ, ರಂಗಕರ್ಮಿ, ಬೆಂಗಳೂರು

## ಸೈದ್ಧಾಂತಿಕ ಬದ್ಧತೆಯುಳ್ಳ ಕಾರ್ಯಕರ್ತರ ಪಡೆ ಕಟ್ಟಬೇಕು

೧) ಭಾರತದ ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷ ಅಸ್ತಂಗತವಾಗುವ ಹಂತ ತಲುಪಿದೆ ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ. ಹಾಗೆನ್ನಿಸಲು ಕಾರಣ ಮುಖ್ಯವಾಗಿ

(೧೫ನೇ ಪುಟಕ್ಕೆ

**ಒಂದು ಸು-ಲಲಿತ ನೆನಪು**

# ಆದರೇನು, ನಾವು ಸಂಪಾದಕರಾದದ್ದು ಸುಳ್ಳೆ?

**-ಮಲ್ಲಿಕಾರ್ಜುನ ಹುಲಗಬಾಳಿ**

> **ನಮಗೆಲ್ಲ ಹೌಸಿಯೇ ಹೌಸಿ. ಮೇ ತಿಂಗಳ ಕೊನೆಯ ವಾರದ ಒಂದು ಭಾನುವಾರ ಸಂಜೆ, ಪತ್ರಿಕೆ ಬಿಡುಗಡೆಯ ಸಿದ್ಧತೆ ನಡೆಸಿದೆವು. ಪತ್ರಿಕೆ ಬಿಡುಗಡೆ ಮಾಡುವಂತೆ ಹುಡುಗರಾದ ನಾವು ಮಾಡಿಕೊಂಡ ಮನವಿಗೆ 'ಗ್ರಾಮಾಯಣ' ಖ್ಯಾತಿಯ ಕಾದಂಬರಿಕಾರ ರಾವಬಹಾದ್ದೂರ ಒಪ್ಪಿದರು. ಅವರಿದ್ದದ್ದು ನಮ್ಮೂರಿಂದ ನಾಲ್ಕು ಹರದಾರಿ ದೂರದ ಜಮಖಂಡಿಯಲ್ಲಿ. ಬಸ್ಸಿನಲ್ಲಿಯೇ ಬಂದು ಬಸ್ಸಿನಲ್ಲಿಯೇ ಹೋಗುವದಾಗಿಯೂ, 'ಬಸ್ ಚಾರ್ಜ, ಗೌರವಧನ ಯಾವುದೂ ಬೇಡ. ಹುಡುಗರಾದ ನಿಮ್ಮ ಸಾಹಿತ್ಯ ಪ್ರೇಮ ಭಾಳಾ ಖುಷಿ ತಂದದ' ಎಂದು ಬೆನ್ನು ಚಪ್ಪರಿಸಿದರು. ಅವರ ಮಾತುಗಳಿಂದ ಯುದ್ಧದಲ್ಲಿ ಗೆಲುವು ಸಾಧಿಸಿದಂತೆ ಉಬ್ಬಿದೆವು.**



ಚಿತ್ರ: ಗುಲ್ಜಾರ್

**ಅ**ವು ೧೯೬೯-೭೦ರ ದಿನಗಳು. ನನಗಾಗ ಹದಿನೆಂಟರ ವಯಸು, ಹುಚ್ಚುಖೋಡಿ ಮನಸು. ಪದವಿ ಮೊದಲನೆಯ ವರ್ಷದಲ್ಲಿ ಧುಮಕಿ ಹೊಡೆದಿದ್ದೆ. ಸಾಹಿತ್ಯದ ಗುಂಗು ಮೈ-ಮನ ತುಂಬಿಕೊಂಡು, ರಕ್ತ-ಮಾಂಸಗಳಲ್ಲಿ ಉಕ್ಕೇರಿ ಪ್ರವಹಿಸುತ್ತಿತ್ತು. ಮುಂದಾಗಬಹುದಾದ ಅನಾಹುತಗಳ ಎಚ್ಚರವಿಲ್ಲದೆ, ತುಂಬಿಹರಿವ ನದಿಗೆ ಧುತ್ತನೆ ಧುಮುಕುವ ಹುಂಬಹುರುಪು. ವಿದ್ಯಾಭ್ಯಾಸ ಕಡೆಗಣಿಸಿ, ಇನ್ನಿತರ ಚಟುವಟಿಕೆಗಳಲ್ಲಿ ನಾನು ಯಾವಾಗಲೂ ತೊಡಗಿರುತ್ತಿದ್ದೆ. ಸ್ವಭಾವದಲ್ಲಿ ಡಿಟ್ಟೋ ನನ್ನ ಹಾಗೆಯೆ ಇದ್ದ ಆರುಜನ ಗೆಳೆಯರು, ಎಲ್ಲರೂ ನಮ್ಮೂರ ಹೈದರು. ಅದೂ ನಮ್ಮ ಓಣಿಯವರು. ತಲಾ ಹತ್ತತ್ತು ರೂಪಾಯಿ ಹಾಕಿ 'ಕರ್ನಾಟಕ ಸಂಘ' ಅಂತ ಒಂದು ಸಂಘ ಹುಟ್ಟುಹಾಕಿದೆವು. ಅದೇನೊ ಅಂತಾರಲ್ಲ, ಶಿವಾ ಅಂತ ಸುಮ್ಮನಿರಲಾರದೆ, ಎಲ್ಲೆಲ್ಲೊ ಇರುವೆ ಬಿಟ್ಟುಕೊಂಡೆವು, ಏನಾದರೂ ಮಾಡುತ್ತಿರುವ ತಮ್ಮನ ತೆರದಿ.

ಲೆಟರ್‌ಹೆಡ್ ಮುದ್ರಿಸುವಷ್ಟು ಶ್ರೀಮಂತಿಕೆ ನಮಗಾರಿಗೂ ಇರಲಿಲ್ಲ. 'ಕರ್ನಾಟಕ ಸಂಘ', ಮತ್ತು 'ಅಧ್ಯಕ್ಷರು/ಕಾರ್ಯದರ್ಶಿ' ಎಂದು ಎರಡು ರಬ್ಬರ್ ಸ್ಟ್ಯಾಂಪ್ ಮಾಡಿಸಿದ್ದೇ ದೊಡ್ಡ ಸಾಧನೆಯಾಗಿತ್ತು. ವಯಸ್ಸಿನಲ್ಲಿ ನಮ್ಮೆಲ್ಲ ಉಳಿದವರಿಗಿಂತ ಎರಡ್ಮೂರು ವರ್ಷ ದೊಡ್ಡವನಾಗಿದ್ದ ಸಹಪಾಠಿ ಜಯವಂತ ಬಾಳಿಗಿಡದ, ಇದ್ದುದರಲ್ಲಿಯೆ ಒಂದಿಷ್ಟು ಸ್ಥಿತಿವಂತ. ಒಂದಿಷ್ಟು ಮಸ್ಕಾ ಹೊಡೆದರೆ ಸಾಕು, ಕೈಬಿಚ್ಚಿ ದುಡ್ಡು ಕೊಡುತ್ತಿದ್ದ. ಆತನಿಗೆ ಸಾಕಷ್ಟು ಪಂಪ್ ಮಾಡಿದ್ದು ಫಲ ನೀಡಿತು. ಅವನಿತ್ತ ಉದಾರ ದೇಣಿಗೆ, ಅಂದ್ರೆ ಆ ಕಾಲದಲ್ಲಿ ಇಪ್ಪತ್ತು ರುಪಾಯಿ ನಮಗೆ ದೊಡ್ಡ ನಿಧಿ ಅಂತೆನಿಸಿದ್ದು ಸಹಜವೇ ಆಗಿತ್ತು. 'ನನ್ನ ಕನಸಿನ ಭಾರತ' ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ ಏರ್ಪಡಿಸಿದೆವು. ಸ್ಥಾನಿಕ ಪತ್ರಿಕೆ 'ಸಂತವಾಣಿ' ಹಾಗೂ ನಮ್ಮೂರಿಗೆ ಬರುತ್ತಿದ್ದ ಅಂದಿನ ಏಕಮಾತ್ರ ದಿನಪತ್ರಿಕೆ 'ಸಂಯುಕ್ತ ಕರ್ನಾಟಕ' ದಲ್ಲಿ ಸ್ಪರ್ಧೆಯ ವಿವರ ಪ್ರಕಟವಾಯಿತು.

ನಮ್ಮ 'ಕರ್ನಾಟಕ ಸಂಘ' ಏರ್ಪಡಿಸಿದ್ದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಧಾರವಾಡ, ಬೆಳಗಾವಿ, ವಿಜಾಪುರ ಭಾಗದ ಹಲವಾರು ಜನ ಭಾಗವಹಿಸಿದ್ದರು. ಆಗಿನ್ನು ಹೈಸ್ಕೂಲ್ ಓದುತ್ತಿದ್ದ ನಮ್ಮೂರಿನ ಶಂಕರ ಬಿದರಿ (ನಿವೃತ್ತ ಪೊಲೀಸ್ ಮಹಾನಿರ್ದೇಶಕರು) ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ. ಸಣ್ಣಪ್ರಮಾಣದ ನಗದು ಹಣದೊಂದಿಗೆ, 'ಶಂಕರ ಬಿದರಿ, ಬನಹಟ್ಟಿ' ಎಂದು ಒಂದು ರಬ್ಬರ್ ಸ್ಟ್ಯಾಂಪ್ ಬಹುಮಾನ ರೂಪದಲ್ಲಿ ಕೊಟ್ಟೆವು. ಅದಾದ ನಂತರ ಶಂಕರ ಏಳನೆಯವನಾಗಿ ನಮ್ಮ ಸಂಘ ಸೇರಿಕೊಂಡ.

'ನಾವೇ ಒಂದು ಪತ್ರಿಕೆ ಯಾಕ್ ಸುರು ಮಾಡಬಾರದ್ರ್ಯೋ?' ಈ ಹುಳು ನಮ್ಮ ತಲೆಯೊಳಗೆ ಮೊಟ್ಟಮೊದಲು ತುರುಕಿದವನು ಇದೇ ಶಂಕರ್.

'ಹೌದೌದು, ಶಂಕರ ಹೇಳೋದು ಬರೋಬ್ಬರದ' ನಮ್ಮ ಸದಸ್ಯರಲ್ಲಿ ಮತ್ತೆ ಮೂವರು ಸೋಸ್ಸೊ ಎಂದು ಧ್ವನಿಗೂಡಿಸಿದರು. ಬಹುಮತದ ನಿರ್ಣಯದ ವಿರುದ್ಧ ಈಜಲುಂಟೆ? ನಿಂತ ಪಟ್ಟಿನ ಮೇಲೆ ಪತ್ರಿಕೆಯ ಹೆಸರನ್ನು ಶಂಕರನೇ ಘೋಷಿಸಿದ.

'ಪ್ರತಿಭಾ' ಎಂಬ ಹೆಸರಿನ ತ್ರೈಮಾಸಿಕ ಪತ್ರಿಕೆ ನಮ್ಮೆಲ್ಲರ ಮನೋಗರ್ಭದಲ್ಲಿ ಭ್ರೂಣರೂಪದಿ ಹುಟ್ಟಿಕೊಂಡಿತು. ನಾನು ಮತ್ತು ಶಂಕರ್ ಪತ್ರಿಕೆಯ ಸಂಪಾದಕರಾಗಿ, ಒಂದಿಬ್ಬರು ಸದಸ್ಯರ ಗೊಣಗಾಟದ ನಡುವೆಯೆ ಆಯ್ಕೆಯಾದೆವು.

ಯುದ್ಧಘೋಷಣೆಯಾಯಿತು. ಈಗ ಸಂಘದ ಸದಸ್ಯರಾದ ನಾವು ಶಸ್ತ್ರಾಭ್ಯಾಸಕ್ಕೆ ಸನ್ನದ್ದರಾದೆವು. ಮೊದಲ ಬೇಟಿ (ಭೆಟ್ಟಿ) 'ದುನಿಂಬೆ'. ಕಥೆಗಾರ, ಕಾದಂಬರಿಕಾರ ಎಂದು ನಾಡಿನ ತುಂಬ ಹೆಸರು ಮಾಡಿದ್ದ ದು.ನಿಂ.ಬೆಳಗಲಿ ಅವರ ಪ್ರಸ್ವರೂಪವೆ 'ದುನಿಂಬೆ'. ಹೈಸ್ಕೂಲಲ್ಲಿ ನಮಗೆ ಕನ್ನಡ ಮಾಸ್ತರರಾಗಿದ್ದರು. ಹೀಗಾಗಿ ಅವರೊಂದಿಗೆ ನಮ್ಮ ಸಲುಗೆ. 'ದುನಿಂಬೆ' ಅವರ ಮುಂದೆ ಪತ್ರಿಕೆಯ ವಿಚಾರ ಹೇಳಿದಾಗ, ಅವರು ನಕ್ಕು ಸುಮ್ಮನಾದರು. ಎರಡನೆಯ ಸಲ ಭೆಟ್ಟಿಯಾಗಿ, ನಮ್ಮ ನಿರ್ಧಾರ ಪುನರುಚ್ಚರಿಸಿದೆವು.

'ಪತ್ರಿಕೆ ನಡಸೂದಂದ್ರ ಅದ್ನೇನು ಹುಡುಗರ ಆಟಾ ಅಂತ ಮಾಡೀರೇನು?' ಥಟ್ಟನೆ ತಣ್ಣೀರು ಎರಚಿದರು. ಅವರು ಹಾಗೆ ಹೇಳಿದರೆಂದು ನಾವೇನೂ ತಣ್ಣಗಾಗುವ ಕುಳಗಳಲ್ಲ. ಮತ್ತೆ ಮತ್ತೆ ಭೆಟ್ಟಿಯಾಗಿ, ಅವರಿಗೆ ದುಂಬಾಲು ಬೀಳತೊಡಗಿದೆವು. 'ನಿಮ್ದೂದ ಬಾಳ ನಿಗ್ರಾತರ್ಯಪಾ' ಎಂದು ಹುಸಿ ಮುನಿಸಿಕೊಂಡು, ಒಂದು ಕ್ಷಣ ಸುಮ್ಮನೆ ಕುಳಿತರು. ನಾವೂ ಹಾಗೆಯೆ ಸುಮ್ಮನೆ ಅವರ ಮುಂದೆ ಕೈಕಟ್ಟಿ, ಎಸ್ಸೈ ಮುಂದೆ ಪೊಲೀಸ್ ಸ್ಟೇಷನ್‌ನಲ್ಲಿ ನಿಲ್ಲುವ ಆರೋಪಿಗಳಂತೆ ನಿಂತೆವು. ಸ್ವಲ್ಪ ಸಮಯದ 'ಧ್ಯಾನ'ದ ಬಳಿಕ ಅವರು, "ಶ್ಯಾಣ್ಯಾರದೀರಿ, ಹೋಗಿ ಮೊದ್ಲು ರೊಕ್ಕದ ವ್ಯವಸ್ಥಾ ಮಾಡ್ಕೊಂಡ ಬರ್ರಿ. ಆಮ್ಯಾಲ ನೋಡೂಣಂತ". ಸದ್ಯ, ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರು.

ಯುದ್ಧದ ಎರಡನೆಯ ಹಂತ ಸುರುವಾಯಿತು. ಅಲ್ಲಿ ಇಲ್ಲಿ ತಿರುಗಾಡಿ, ಪತ್ರಿಕೆಯ ಜಾಹೀರಾತು ಸಂಗ್ರಹಕ್ಕೆ ಮುಂದಾದೆವು. 'ನಿಮ್ಮ ಮುಖ ನೋಡಿ ಯಾರು ದುಡ್ಡು ಕೊಟ್ಟಾರ್ರ್ಯೋ?' ವಾರಿಗೆಯ ಕೆಲ ಗೆಳೆಯರ ಕೊಂಕುನುಡಿ. ಅವರಂದಂತೆಯೆ ಆಯ್ತು. ಬೆನ್ನು ತಟ್ಟಿದವರಿಗಿಂತ, ಬೈದು ಹೊರಗಟ್ಟಿದವರೇ ಅನೇಕರು.

'ಚೈನಿ ಮಾಡಾಕ ನಿಮಗ್ ರೊಕ್ಕ ಬೇಕಾಗ್ಯಾವ. ಅದಕ್ಕ ಈ ಅಕ್ಲಾ (ಹಂಚಿಕಿ) ತಕ್ಕೊಂಡ್ ಬಂದೀರಿ.. ಹೋಗ್ರ್ಯೋ ನಿಮ್ ಹೋಗ್ರಿ, ಭಾಡ್ಯಾಗೋಳ್ನ ತಂದು' ಶ್ರೀಮಂತ ಮಹಿಳೆಯೊಬ್ಬಳು ಹೂವೇರಿಸಿ, ಸಂಸ್ಕೃತ ಪದಗಳೊಂದಿಗೆ ಚೆನ್ನಾಗಿಯೇ ಪೂಜೆ ಮಾಡಿದರು.

'ಭಲೋ ಕೆಲಸಕ್ಕ ಹೊಂಟ್ರ ಇವೆಲ್ಲಾ ಇದ್ದದ್ದನೋ, ಮಲ್ಲಣ್ಣಾ, ಮುಖ್ಯ ಏನಂದ್ರ, ನಾವ್ ಧೈರ್ಯಾ ಕಳ್ಕೋಬಾರ್ದು ನೋಡು' ಎಂದೆಲ್ಲ ಶಂಕರ್ ಉಬ್ಬಿಸುತ್ತ ಬಂದ. ಮುಧೋಳ, ಜಮಖಂಡಿ, ಬಿಜಾಪುರ, ತಿಕೋಟಾ, ರಬಕವಿ-ಬನಹಟ್ಟಿ ಅಂತ ಕೈಯಿಂದ ಖರ್ಚುಮಾಡಿ ಎಲ್ಲ ಕಡೆ ಸುತ್ತಾಡಿದೆವು. ಆಗೆಲ್ಲ ನಾನು ಮತ್ತು ಶಂಕರ್ ಅನೇಕ ರಾತ್ರಿಗಳನ್ನು ಬಸ್ ನಿಲ್ದಾಣಗಳಲ್ಲಿ ಕಳೆದದ್ದೂ ಇದೆ.

ಅಂತೂ, ಅವರಿವರಿಂದ ಕಾಡಿಬೇಡಿ, ನೂರ ಇಪ್ಪತ್ತೈದು ರೂಪಾಯಿ ಜಾಹೀರಾತು ಹಣ ಸಂಗ್ರಹಿಸಿದೆವು. 'ಮೊದ್ಲ ನಿಮ್ ಪೇಪರಾದ್ರೂ ಬರ್ಲಿ, ಆಮ್ಯಾಲ ಕೊಡ್ತೀವಿ ಅಂತ 'ಉಗಾದಿ ಉದ್ರಿ' ಹೇಳಿದವರೆ ಬಹಳ. ಸದ್ಯಕ್ಕೆ ಇಷ್ಟು ಸಾಕಾದೀತು ಅನಿಸಿತು. ಅಷ್ಟೂ ದುಡ್ಡು ತೊಗೊಂಡು 'ದುನಿಂಬೆ' ಅವರ ಮುಂದೆ ಇಟ್ಟೆವು. 'ಇವು ಬಿಡಲಾರದ ಶನಿಗಳು' ಅಂತಂದ್ಕೊಂಡಿರಬೇಕು ಅವರು. 'ಹೂಂ, ಆತರ್ಯಪಾ, ನಾಳಿಗಿ ತಯ್ಯಾರಾಗಿ ಬರ್ರಿ. ವಿಜಾಪುರಕ್ಕ ಹೋಗೂಣಂತ' ಅಂದರು.

ಏಪ್ರಿಲ್ ೧೪, ೧೯೭೦. ಆ ದಿನ ನೆನಪಿರಲು ಕಾರಣವಾದ ಮತ್ತೊಂದು ಪ್ರಸಂಗ, ಅಂದು ನನ್ನ ಹತ್ತೊಂಭತ್ತನೆಯ ಹುಟ್ಟುದಿನ. ಸಂಪಾದಕರೆಂದು ಬೀಗುತ್ತಿದ್ದ ನಾನು ಮತ್ತು ಶಂಕರ್ ಬೆಳ್ಳಂಬೆಳಗ್ಗೆ ಬೆಳಗಲಿ ಅವರೊಂದಿಗೆ ವಿಜಾಪುರದ ಬಸ್ ಹಿಡಿದೆವು. ಮಕ್ಕಳ ಸಾಹಿತಿಯೂ ಆಗಿದ್ದ ಶಿಕ್ಷಕ ಶಿಶು ಸಂಗಮೇಶ, ಮುದ್ರಣಾಲಯದ ಒಡೆಯರೂ ಆಗಿದ್ದರು. 'ಇವ್ರು ಪತ್ರಿಕಾ ಸಂಪಾದಕರ್ರೀ', 'ಶಿಶು' ಅವರಿಗೆ ನಮ್ಮನ್ನು ವ್ಯಂಗ್ಯವಾಗಿಯೆ ಪರಿಚಯಿಸಿದರು 'ದುನಿಂಬೆ'. ಸಪೂರ ದೇಹದ, ಒತ್ತೊತ್ತಾಗಿ ಏರಿಸಿ ಬಾಚಿಕೊಂಡಿದ್ದ ಗುಂಗುರು ಕೂದಲಿನ 'ಶಿಶು' ತುಟಿಯಂಚಿನಲ್ಲೆ ನಕ್ಕರು. ನಮ್ಮನ್ನು ಆಪಾದಮಸ್ತಕವಾಗಿ ಮೇಲಿನಿಂದ ಕೆಳಗಿನವರೆಗೆ ನೋಡಿದರು.

'ಆಯ್ತು, ಈಗೆಷ್ಟು ಅಡ್ವಾನ್ಸ್ ಕೊಡ್ತೀರೀ?' ಪಕ್ಕಾ ವ್ಯವಹಾರಸ್ಥನಂತೆ 'ಶಿಶು' ಕೇಳಿದರು.

'ಸವ್ವಾಸೆ ತಂದಾರ್ರೀ ..., ಸವ್ವಾಸೇ' ದುನಿಂಬೆ ಮಾತಿನಲ್ಲಿ ಮತ್ತೆ ವ್ಯಂಗ್ಯ. 'ಐದ್ನೂರು ಪ್ರತಿಗಳು, ಅರವತ್ತು ಪುಟ .. .. ಡೆಮಿ ಒನ್ ಫೋರ್ತ್.. .. .. ಅಂತಂದ್ರ..' ಅಂತೆಲ್ಲ ಗುಣುಗುಣಿಸಿ. 'ಎಲ್ಲಾ ಕೂಡಿ ಒಟ್ಟಿಗೆ ಆರ್ನೂರಾ ಮುವತ್ತಾಗ್ತದ'. 'ಶಿಶು' ಶಾಲಾ ಹುಡುಗನಂತೆ ಬಾಯಿಲೆಕ್ಕ ಒಪ್ಪಿಸಿದರು.

ಈ ಉದ್ಯೋಗದಲ್ಲಿ ಸಾಹಿತಿ 'ಶಿಶು', ಶಿಶುವೇನಲ್ಲ, ತುಂಬ ನುರಿತವರು ಅಂತೆನಿಸಿತು. ಬಾಕಿ ಹಣಕ್ಕೆ ದುನಿಂಬೆ ಜವಾಬ್ದಾರಿ ಹೊತ್ತರು. ಕಾಬ್ರಾ ಬಜಾರದ 'ಶಿಶು' ಅವರ ಶಕ್ತಿ ಮುದ್ರಣಾಲಯದಲ್ಲಿ ನಮ್ಮ 'ಪ್ರತಿಭಾ' ಸಾಹಿತ್ಯ ಪತ್ರಿಕೆ ಅಚ್ಚಾಗುವ ಮೊದಲಹಂತದ ಕಾರ್ಯ ಪ್ರಾರಂಭಗೊಂಡಿತು.

ವಿಜಾಪುರದ ಶಿಶು ಸಂಗಮೇಶರ ಶಕ್ತಿ ಮುದ್ರಣಾಲಯದಲ್ಲಿ ನಮ್ಮ 'ಪ್ರತಿಭಾ' ಕಣ್ಣು ಬಿಡತೊಡಗಿರುವ ನಮ್ಮ ಉಮ್ಮೇದಿಗೆ ಮುಗಿಲು ಕೂಡಾ ಕಿರಿದೆನಿಸಿತ್ತು. ಕಂಡಕಂಡವರ ಮುಂದೆ, 'ಪ್ರತಿಭೆ'ಯ ವಿಷಯ ಹೇಳಿ ಹೇಳಿ, ಅವರ ತಲೆ ಚಿಟ್ಟುಹಿಡಿಯುವಂತೆ ಮಾಡಿದೆವು. ಈ ಮಧ್ಯೆ, ಸ್ವಂತ ಕೆಲಸದ ಮೇಲೆ ವಿಜಾಪುರಕ್ಕೆ ಹೋಗಿಬಂದ 'ದುನಿಂಬೆ', 'ಹೆಚ್ಚು–ಕಮ್ಮಿ ಪ್ರಿಂಟ್ ಕೆಲಸ ಮುಗದದ. ಈ ತಿಂಗಳದಾಗ, ಬಿಡುಗಡಿ ಇಟ್ಕೋಬೌದಂತ 'ಶಿಶು' ಹೇಳ್ಯಾರೇನ್ರ್ಯಪಾ'. ಖುಷಿಯ ಬಾತ್ಮಿ ಬಿತ್ತರಿಸಿದರು.

ನಮಗೆಲ್ಲ ಹೌಸಿಯೇ ಹೌಸಿ. ಮೇ ತಿಂಗಳ ಕೊನೆಯ ವಾರದ ಒಂದು ಭಾನುವಾರ ಸಂಜೆ, ಪತ್ರಿಕೆ ಬಿಡುಗಡೆಯ ಸಿದ್ಧತೆ ನಡೆಸಿದೆವು. ಪತ್ರಿಕೆ ಬಿಡುಗಡೆ ಮಾಡುವಂತೆ ಹುಡುಗರಾದ ನಾವು ಮಾಡಿಕೊಂಡ ಮನವಿಗೆ 'ಗ್ರಾಮಾಯಣ' ಖ್ಯಾತಿಯ ಕಾದಂಬರಿಕಾರ ರಾವಬಹಾದ್ದೂರ ಒಪ್ಪಿದರು. ಅವರಿದ್ದದ್ದು ನಮ್ಮೂರಿಂದ ನಾಲ್ಕು ಹರದಾರಿ ದೂರದ ಜಮಖಂಡಿಯಲ್ಲಿ. ಬಸ್ಸಿನಲ್ಲಿಯೇ ಬಂದು ಬಸ್ಸಿನಲ್ಲಿಯೇ ಹೋಗುವದಾಗಿಯೂ, 'ಬಸ್ ಚಾರ್ಜ, ಗೌರವಧನ ಯಾವುದೂ ಬೇಡ. ಹುಡುಗರಾದ ನಿಮ್ಮ ಸಾಹಿತ್ಯ ಪ್ರೇಮ ಭಾಳಾ ಖುಷಿ ತಂದದ' ಎಂದು ಬೆನ್ನು ಚಪ್ಪರಿಸಿದರು. ಅವರ ಮಾತುಗಳಿಂದ ಯುದ್ಧದಲ್ಲಿ ಗೆಲುವು ಸಾಧಿಸಿದಂತೆ ಉಬ್ಬಿದೆವು.

ಇತ್ತ ಬಾಕಿ ಹಣ ಕೊಟ್ಟು, ಪತ್ರಿಕೆ ತೆಗೆದುಕೊಂಡು ಹೋಗುವಂತೆ, 'ದುನಿಂಬೆ' ಅವರಿಗೆ 'ಶಿಶು' ಪತ್ರ ಬರೆದರು. ಆ ಪತ್ರವನ್ನೇ ತೋರಿಸಿ, ಜಾಹೀರಾತುದಾರರಿಂದ ಬರಬೇಕಾಗಿದ್ದ ಹಣ ವಸೂಲಿ ಮಾಡಲು ಮುಂದಾದೆವು. 'ಬಂದರ್‍ಯ ಬರ್‍ಲಿ, ಆ ಮ್ಯಾಲ ಕೊಡ್ತೀವಿ. ನಾವೇನೂ ಊರಬಿಟ್ಟು ಹೋಗಾಂಗಿಲ್ಲರ್‍ಯೋ' ಅಂತ 'ಧನವಂತ' ಮಂದಿ ನಮ್ಮ ಮೂಗಿಗೆ ಬೆಣ್ಣೆ ಮೆತ್ತಿದರು. ಇನ್ನು ಕೆಲವರು, 'ಏನೋ ಪಾಪ, ಹುಡ್ರು' ಅಂತ ಕರುಣೆ ತೋರಿಸಿದರು. ಅಂಥವರಿಂದ ಬಂದ ಹಣ, ಎರಡು ನೂರಾ ಹತ್ತು. ಅದನ್ನು ತೆಗೆದುಕೊಂಡು ಹೋಗಿ, 'ಶಿಶು' ಮುಂದಿಟ್ಟೆವು.

'ಲೇಬರ್ ಪ್ರಾಬ್ಲಂ ತಮಗೊಳ್ಳರ್‍ಯಾ, ಲೇಬರ್ ಪ್ರಾಬ್ಲಂ. ಈಗ ಮದವೀ ಸೀಝುನ್ ಬ್ಯಾರೆ ನೋಡ್ರಿ. ಹಿಂಗಾಗಿ ನಿಮ್ ಕೆಲಸ ಪೂರಾ ಆಗ್ಲಿಲ್ಲಾ. ಹ್ಯಾಂಗೋ ಗುದ್ದಾಡಿ ಮುವತ್ತು ಪ್ರತಿ ರೆಡಿ ಮಾಡಿಸೇನಿ. ಇನ್ನ ಒಂದ್ ಎಂಟೆತ್ತ ದಿವ್ಸದಾಗ ಉಳದ ಎಲ್ಲಾ ಪ್ರತಿ ಕಳಸ್ತೀನಿ' ಎಂದು 'ಶಿಶು' ಸಮಾಧಾನಿಸಿದರು. ಚಹಾ ತರಿಸಿದರು. 'ಹಂಗೇ ಬಾಕಿ ರೊಕ್ಕಾ ಇನ್ನೂರಾ ತೊಂಭತ್ತೈದು ಜಲ್ದೀ ಕೊಡ್ರ್ಯಪಾ' ನೆನಪಿಸಲು ಮರೆಯಲಿಲ್ಲ. ಎಲ್ಲ ಐನೂರು ಪ್ರತಿಗಳು ಆಗಲೆ ಸಿದ್ಧವಾಗಿದ್ದವೆಂತಲೂ, ನಾವು ಪೂರ್ತಿಹಣ ಸಂದಾಯ ಮಾಡದ್ದರಿಂದ 'ಶಿಶು' ಹೀಗೆ ವ್ಯವಹಾರಿಕ ಸುಳ್ಳು ಹೇಳಿದರೆಂದು, ಆಮೇಲೆ ಗೊತ್ತಾಯಿತು.

ಆದ್ರೆ, ನಮ್ಮ ಖೊಟ್ಟಿ ನಸೀಬಿಗೆ, ಪತ್ರಿಕೆಯ ಬಿಡುಗಡೆ ಸಡಗರದಿಂದ ಮಾಡಬೇಕೆಂಬ ನಮ್ಮಾಶೆ ಈಡೇರಲೇ ಇಲ್ಲ. ನಮ್ಮ ಸಂಘದ ಕೆಲ ಸದಸ್ಯರಲ್ಲಿ ಆಗಲೆ ಅಸಮಾಧಾನದ ಹೊಗೆ ಆಡಲಾರಂಭಿಸಿತ್ತು.. 'ಎಲ್ಲಾದಕೂ ತಾವೇ ಮುಂದಾಗ್ತಾರ' ಅಂಬೊ ಆರೋಪ ಅವರಿಂದ. ಹೀಗಾಗಿ 'ಪ್ರತಿಭಾ' ಹೊರಬಂದರೂ, ಅದರ ಬಿಡುಗಡೆ ಸಮಾರಂಭ ನಡೆಯಲಿಲ್ಲ. ಅದೇ ಕಾರಣಕ್ಕೆ ಮುನಿಸಿಕೊಂಡ ರಾವಬಹಾದ್ದೂರ, ತಮ್ಮ ಅಸಮಾಧಾನವನ್ನು 'ದುನಿಂಬೆ' ಅವರ ಮುಂದೆ ತೋಡಿಕೊಂಡರು. ಅವರನ್ನು ಸಮಾಧಾನಿಸುವಲ್ಲಿ 'ದುನಿಂಬೆ' ಅವರಿಗೆ ಆರು ಹೋಗಿ ಹನ್ನೊಂದಾಗಿತ್ತು..

ಇದಿಷ್ಟೇ ಸಾಲದು ಎಂಬಂತೆ, 'ದುನಿಂಬೆ'ಗೆ 'ಶಿಶು' ಪತ್ರದ ಮೇಲೆ ಪತ್ರ ಬರೆದು, ಬಾಕಿ ಹಣಕ್ಕಾಗಿ ಪೀಡಿಸತೊಡಗಿದರು, ನಕ್ಷತ್ರಿಕನಂತೆ.

ಆ ದಿನ, ತಮ್ಮ ಮನೆಗೆ ಬರಹೇಳಿದ 'ದುನಿಂಬೆ', 'ಮಾರಾಯಗೋಳರ್‍ಯಾ, ನಿಮ್ ಕಾಲಾಗ ನನ್ಗೂ ಸಾಕಾಗಿ ಹೋತು. ಯಾಕಾರೆ ನನಗ್ ಗಂಟ ಬಿದ್ದರ್‍ಯಂತ' ಸಿಟ್ಟಿಗೆ ಬಂದರು.

ಅದೇ ಸಿಟ್ಟಿನಲ್ಲಿ, ನಮ್ಮ ಮುಂದೆಯೆ, 'ಶಿಶು' ಅವರಿಗೆ 'ಈ ವ್ಯವಹಾರಕ್ಕೂ ನನಗೂ ಸಂಬಂಧವಿಲ್ಲ. ಇನ್ನು ಮುಂದೆ ಈ ವಿಷಯವಾಗಿ ಪತ್ರ ಬರೆದು ನನಗ ತ್ರಾಸು ಕೊಡಬಾರದು.' ಅಂತ ಖಡಕ್ಕಾಗಿ ಬರೆದರು. ಪತ್ರದ ಕೊನೆಯಲ್ಲಿ ನನ್ನ ವಿಳಾಸ ತಿಳಿಸಲು ಮರೆಯಲಿಲ್ಲ 'ದುನಿಂಬೆ'.

ಅದಾದ ಎಂಟು ದಿನಕ್ಕೆ ಸರಿಯಾಗಿ ನನ್ನ ವಿಳಾಸಕ್ಕೆ 'ಶಿಶು' ಅವರ ಪೋಸ್ಟ್‌ಕಾರ್ಡ್ ಬಂತು. 'ಬರಬೇಕಾಗಿರುವ ರೂ. ೨೯೦ (ಅಕ್ಷರದಲ್ಲಿ ಇನ್ನೂರಾ ತೊಂಭತ್ತು) ಕೊಡಬೇಕು. ಇಲ್ಲವಾದಲ್ಲಿ ನಾನು ನಿಮ್ಮ ಮೇಲೆ ಕೋರ್ಟಿನಲ್ಲಿ ಕೇಸ್ ಹಾಕುತ್ತೇನೆ. ಕೋರ್ಟ್ ವೆಚ್ಚ, ವಕೀಲರ ಫೀ ಎಲ್ಲವನ್ನೂ ನೀವೇ ಭರಿಸಬೇಕಾಗುತ್ತದೆ' ಎಂಬ ಎಚ್ಚರಿಕೆ ಅವರ ಒಕ್ಕಣಿಕೆಯಲ್ಲಿತ್ತು. ತುಂಬ ಹೆದರಿಕೊಂಡೆ. ನಮ್ಮ ತಂದೆಯ ಕಣ್ಣಿಗೆ ಈ ಪತ್ರ ಬೀಳದಂತೆ ನಾನು ಎಷ್ಟೇ ಹುಷಾರಾಗಿದ್ದರೂ, ಅವರಿಗೆ ವಿಷಯ ಗೊತ್ತಾಗಿತ್ತು. ತಂದೆಯ ಸಹೋದ್ಯೋಗಿಯೂ ಆಗಿದ್ದ 'ದುನಿಂಬೆ' ಹೇಳಿರಬೇಕು ಎಂಬ ಗುಮಾನಿ ನನಗೆ.

ಆ ಸಂಜೆ ಮನೆಗೆ ಬಂದ ತಂದೆ, ಸಿಟ್ಟಿನಿಂದ ಸಿಕ್ಕಾಪಟ್ಟೆ ಬೈದರು. ಬೈಸಿಕೊಂಡೆ, ಆದರೆ ಹೊಡೆಯಲಿಲ್ಲ, ಅದೇ ಪುಣ್ಯ. ಆಗ ನಾನು ಮೇಜರ್ ಆಗಿದ್ದೆನಲ್ಲ!. ಕೊನೆಗೆ, ತಾವೇ ಮೂರ್‍ನೂರು ಐದು (ಎಂ.ಓ. ಕಮಿಷನ್ ಚಾರ್ಜ್ ಸೇರಿಸಿ), ಕೊಟ್ಟು, 'ಆ ನಿನ್ನ 'ಶಿಶು'ಗೆ ಎಂ.ಓ. ಮಾಡು' ಅಂದರು. ಆ ಕಾಲಕ್ಕೆ ತಂದೆಗೆ ಬರುತ್ತಿದ್ದ ಸಂಬಳ ಮುನ್ನೂರು ಮುನ್ನೂರೈವತ್ತರ ಎಡಬಲ.. ಅಂಥದ್ದರಲ್ಲಿಯೇ ಮುನ್ನೂರು ಕೊಟ್ಟಿದ್ದು, ನನಗೆ ಬಹಳ ಕಸಿವಿಸಿ ತಂದಿತು.

'ಶಿಶು' ಅವರಿಗೆ ಎಂ.ಓ. ಮಾಡಿದ್ದಾಗಿ ನಂತರ, ಶಂಕರ್‌ಗೆ ಹೇಳಿದೆ. 'ಎಂಥಾ ಮಳ್ಳ ಅದೀಲೆ, ಕೋರ್ಟಿಗಿ ಹೋಗಬೇಕಾದ್ರ ಕನಿಷ್ಠ ಐದ್ನೂರು ರುಪಾಯಿ ಕೇಸ್ ಇರಬೇಕಂತ ಕಾಯ್ದೆ ಐತಿ. ನೀನು ರೊಕ್ಕಾ ಕಳಸದಿದ್ದರೂ ನಡೀತಿತ್ತು.' ಅಂದ.

####

ಮುಂದೆ, ಇದಾದ ಬಹಳ ದಿನಗಳ ನಂತರ, 'ಶಿಶು' ನನಗೆ ಆತ್ಮೀಯರಾದರು. ಅವರ ಬಗ್ಗೆ ನಾನು ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳಿಗೆ ಲೇಖನ ಬರೆದೆ. ಬರಬೇಕಾಗಿದ್ದ ಬಾಕಿಗಾಗಿ ಕೋರ್ಟ್ ಕಟ್ಟೆ ಏರುವದಾಗಿ ಪತ್ರ ಬರೆದದ್ದನ್ನು, 'ಶಿಶು' ಅವರಿಗೆ ವಿನೋದದಿಂದ ಜ್ಞಾಪಿಸುತ್ತಿದ್ದರೆ...

ಅದಕ್ಕವರು, 'ನಾನು ಸುಮ್ಮನೆ ನಿಮ್ಮ ಕಾಲೊಳಗ ಅರಿವೆ ಹಾವು ಬಿಟ್ಟಿದ್ದೆ ಅಷ್ಟೇ. ನೀವು ಎಂ.ಓ. ಮಾಡದಿದ್ದರೂ ನಾನು ಕಾನೂನು ಪ್ರಕಾರ ಏನೂ ಮಾಡುವಂತಿರಲಿಲ್ಲ' ಎಂದು ನಗುತ್ತ ಹೇಳಿ ಹೊಟ್ಟೆ ಉರಿಸಿದ್ದರು.

ಯಮಸಾಹಸದೊಂದಿಗೆ 'ಪ್ರತಿಭಾ' ಮೊದಲ ಸಂಚಿಕೆ ಹೊರತಂದದ್ದಾಯಿತು. ಇಷ್ಟಾಗುವುದರೊಳಗೆ ನಮ್ಮ 'ಕುರಿಕ್ವಾಣ' ಬಿದ್ದುಹೋಗಿತ್ತು. ಪತ್ರಿಕೋನ್ಮಾದದ ನಮ್ಮ ಉಮ್ಮೇದಿಗೆ ಭಂಗ ಬಂದು, ಆರಂಭದಲ್ಲಿದ್ದ ಉತ್ಸಾಹ ಪಂಕ್ಚರ್ ಆದ ಲಾರಿಟೈರಿನಂತೆ ನೆಲಕಚ್ಚಿತ್ತು.

'ವಸಂತ', 'ವರ್ಷಾ' ಮತ್ತು 'ಶರತ್' ಹೆಸರಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಪತ್ರಿಕೆ ತರುವ ಮಹತ್ತರ ಯೋಜನೆ ಶಂಕರ್ ಮತ್ತು ನಾನು ಹಾಕಿಕೊಂಡಿದ್ದೆವು. ಆದರೆ, ಮೊದಲ ಚುಂಬನದಲ್ಲಿಯೆ ನಮ್ಮ ದಂತಭಗ್ನವಾಗಿತ್ತಲ್ಲ!

ನಮ್ಮಂಥ ಎಳಸು ಹುಡುಗ್ರು ಮಾಡಿಕೊಂಡಿದ್ದ ಮನವಿಗೆ ಸ್ಪಂದಿಸಿ ಲೇಖನ ಕಳಿಸಿದ್ದ ಸಾಹಿತ್ಯಲೋಕದ ಅಂದಿನ ಹಿರೀಕರಾದ ಬಸವರಾಜ ಕಟ್ಟೀಮನಿ, ಶಂ ಗು ಬಿರಾದಾರ, ಈಶ್ವರಚಂದ್ರ ಚಿಂತಾಮಣಿ ಎಚ್ ಆರ್ ಇಂದಿರಾರಂಥವರಿಗೂ, ಮತ್ತೆ ಜಾಹಿರಾತು ಕೊಟ್ಟು ಸಹಕರಿಸಿದ ಧನವಂತರಿಗೂ, ದೊಡ್ಡವರೆಂದುಕೊಂಡು ಬೀಗುತ್ತಿದ್ದ ಊರ 'ಗಣ್ಯಮಾನ್ಯ'ರಿಗೂ ಗೌರವಪ್ರತಿ ಕೊಟ್ಟು ಧನ್ಯರಾದೆವು.. ..

ಕೊನೆಯಲ್ಲಿ ನನ್ನ ಬಳಿ ಉಳಿದದ್ದು 'ಪ್ರತಿಭಾ'ದ ಒಂದೆರಡು ಪ್ರತಿಗಳು ಮಾತ್ರ. ಅವುಗಳನ್ನೆ ಒಲಿದು ಬಂದ ಕನ್ಯೆಯ ತೆರದಿ, ಜತನದಿಂದ ಕಾಪಿಟ್ಟುಕೊಂಡು, ನೆನಪಾದಾಗೆಲ್ಲ ಅವುಗಳ ಸಂಗದಲ್ಲಿ 'ಸುಖಿ'ಸುತ್ತಿದ್ದೆ, ಮೊನ್ನೆ ಮೊನ್ನೆಯವರೆಗೂ...

ನಮ್ಮ 'ಪ್ರತಿಭೆ'ಯ ಮೊದಲ ಸಂಚಿಕೆಯೆ ಅದರ ಕೊನೆಯ ಸಂಚಿಕೆಯಾಗಿ, ದುರಂತ ನಾಯಕಿಯಂತೆ ಅಕಾಲಿಕ ಕೊನೆ ಕಂಡಿತು. ಹಂಪೆ ಹಾಳಾಯಿತೆಂದು, ಅದರ ವೈಭವದ ದಿನಗಳ ಮರೆಯಲಾದೀತೆ!



ಆದರೇನು, ನಾವು ಸಂಪಾದಕರಾದದ್ದು ಸುಳ್ಳೆ?

**(ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯವರಾದ ಲೇಖಕರು ನಿವೃತ್ತ ಇಂಗ್ಲಿಷ್ ಉಪನ್ಯಾಸಕರು ಮತ್ತು ಹಿರಿಯ ಲಲಿತ ಪ್ರಬಂಧಕಾರರು, ಬರಹಗಾರರು)**

---

**೮ನೇ ಪುಟದಿಂದ)**

ಅತ್ಯಾಚಾರ ಮೂಲತಃ ಆಗುವುದು ಮನಸ್ಸಿನ ಮೇಲೆ ಎಂಬ ಅರಿವಿದ್ದವರಾರೂ ಅತ್ಯಾಚಾರದ ಅನಿವಾರ್ಯತೆಯನ್ನು ಒಪ್ಪಿಕೊಳ್ಳುವ ಅಥವಾ ಆನಂದಿಸುವ ಮಾತನಾಡುತ್ತಿರಲಿಲ್ಲ. ಹಾಗಾಗಿ ಇದೊಂದು ನಾವು ಸಾರಾಸಗಟಾಗಿ ಒಪ್ಪಿಕೊಂಡಿರುವ ಒಂದು ನಿರ್ದಿಷ್ಟ ಮಾದರಿಯ ಬದುಕಿನ ಕ್ರಮ ಅಥವಾ ನಾಗರೀಕತೆಯ ಒಡಲಿಂದ ಹೊಮ್ಮಿದ ಸಹಜ ಮಾತಾಗಿದೆ. ಹಾಗಾಗಿಯೇ ರಮೇಶ್‌ಕುಮಾರ್ ಈ ಮಾತಾಡಿದಾಗ ಮಹಿಳೆಯರೂ ಸೇರಿದಂತೆ ಅಲ್ಲಿದ್ದ ಯಾರಿಂದಲೂ ಅಸಮಾಧಾನದ ಅಥವಾ ಪ್ರತಿಭಟನೆಯ ಸೊಲ್ಲು ಕೇಳಿಬರಲಿಲ್ಲ. ಕೇಳಿ ಬಂದ ಟೀಕೆ–ಪ್ರತಿಭಟನೆಗಳೆಲ್ಲವೂ ನಂತರದ ಚಿಂತನೆ(after thought)ಯ ಭಾಗವಾಗಿ; ರಾಜಕೀಯ ಲಾಭೋದ್ದೇಶಕ್ಕಾಗಿ ಅಥವಾ ಅದರ ನಿರ್ಮೂಲನಕ್ಕಾಗಿ.

ಇಲ್ಲಿ ಆಧುನಿಕ ಎಂದು ಕರೆಯಲಾಗುವ ಮಿತಿ ಕಾಣದ ಸುಖ–ಸಂತೋಷಗಳಿಂದ ಮರುಳಾದ, ಜಡವಾದ ನಾಗರೀಕತೆಯನ್ನು(ಇದನ್ನು ಇತ್ತೀಚೆಗೆ 'ಜಾಗತೀಕರಣ ಎಂದೂ ಕರೆಯಲಾಗುವುದು) ಈ ನಾಗರೀಕತೆಯನ್ನು ಬುಡದಿಂದ ವಿರೋಧಿಸುತ್ತಿದ್ದ ಗಾಂಧಿ ದೇಹಾತ್ಮನಾದ ಮನುಷ್ಯನನ್ನು ಕೇವಲ ದೇಹಪ್ರಧಾನನ್ನಾಗಿ ಮಾಡಿದೆ ಎಂದಿದ್ದ ಮಾತನ್ನು ಉಲ್ಲೇಖಿಸಿದರೆ ಈ ವಿದ್ಯಮಾನವನ್ನು ಅದರೆಲ್ಲ ಆಯಾಮಗಳಲ್ಲೂ ಅರ್ಥ ಮಾಡಿಕೊಳ್ಳಲು ಸಹಾಯವಾಗಬಹುದು.

**ಯುವ ಪತ್ರಕರ್ತ ಗೆಳೆಯ ಪಿ.ಕೆ. ಮಲ್ಲನಗೌಡರ ಅವರ ಅಕಾಲಿಕ ಮರಣಕ್ಕಾಗಿ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.–ಸಂ.**

## ನವಿಲುಗರಿ

### ಪರ್ಷಿಯನ್ ಕ್ಯಾಟು ಮತ್ತು...

ಮಕ್ಕಳಿಗೆ ಆಟವಾಡಲು ತಂದ ಚಂದನೆಯ ಟೆಡ್ಡಿಬೇರಿಗೆ
ಜೀವ ಬಂದು ಅಡ್ಡಾಡತೊಡಗಿದೆಯೋ!
ಗೊತ್ತಿಲ್ಲದವರು ಬಂದು, ಮಲಗಿರುವ ಮರಿಯ ಕಂಡು
'ದಾರಿಯಲ್ಲೇಕೆ ಚೆಲ್ಲಿದ್ದೀರಿ ಈ ಮುದ್ದಾದ ಗೊಂಬೆಯನು'
ಎನ್ನುತ್ತ ಎತ್ತಿಡಲು ಹೋಗಿ 'ಮಿಂಯಾವ್..'
ದನಿಗೆ ಕಂಗಾಲಾಗಿ ಕಕ್ಕಾವಿಕ್ಕಿ!



ಆರೇ ತಿಂಗಳ ಪುಟ್ಟ ಮಗು ಮೈತುಂಬ
ಮಡಿಕೇರಿ ಮಂಜಂಥ ಕೇಶರಾಶಿಯಲಿ....
ಆರು ವರುಷವೆಂದರೂ ನಡೆದೀತು! ಜಳಕ ಮಾಡಿಸಿದಾಗ
ಮಾತ್ರ ಕೂದಲೆಲ್ಲ ಮೈಗೆ ಅಪ್ಪಚ್ಚಿಯಾಗಿ
ಇದೇ ತಾನೆ ಮೊಟ್ಟೆಯೊಡೆದು ಹೊರಬಂದ ಗುಬ್ಬಿಮರಿ!
ಕಂದು ಹವಳದ ಕಣ್ಣು-ಒಳಸಿಕ್ಕ ಕಂದು ಮೂಗು
ಚೋಟುದ್ದ ಮೂರೆಳೆ ಬಿಳಿಮೀಸೆ ಎರಡೂ ಬದಿ
ಅಳತೆ ಮಾಡಿಟ್ಟಂತೆ. ಅದೇ ಮೂಡುವ ಕೊಂಬಿನಾಕಾರದ
ಕಿವಿಗಳೊಳಗೆ ದಟ್ಟ ಬಿಳಿಬಿಳಿ ತುಪ್ಪಳ, ತುಟಿ ಬಾಯಿ ನಾಲಿಗೆ
ಗುಲುಗುಲಾಬಿ ಮುಖವೋ ಹಾಲನೊರೆ ಮಗುವಿಗಿಂತಲೂ ಚಂದ!

ಮೈ ಬಳುಕಿಸುತ್ತ ನಡೆದಾಡಿದರೆ ಆಕಳಿಸಿದರೆ ಕಣ್ಣು ಮುಚ್ಚಿ
ತೆಗೆದರೆ ದಿಟ್ಟಿಸಿ ನೋಡಿದರೆ ಸಾಕ್ಷಾತ್ ಸಿಂಹದ ಮರಿ!
ಇರುವೆಯ ಸದ್ದಿಗೂ ಬೆದರಿ ಬೆಚ್ಚಿಬೀಳುವ ಪುಕ್ಕಲಾಸಾಮಿ!
ಪ್ರಾಣಿ ಅನ್ನುವದಷ್ಟೇ...ಎಲ್ಲವೂ ತಿಳಿಯುವುದು
ಆಡಬಾರದು ಮರಳಿ ಅಯ್ಯೋ!
ಮಿಯಾಂವ್.... ಎಂಬ ಒಂದೇ ಪದವ ಹಿಗ್ಗಿಸಿ ಕುಗ್ಗಿಸಿ



ಏರಿಸಿ ಇಳಿಸಿ ಎಲ್ಲವ ಹೇಳಬೇಕು. ಮುಖದ ಏರಿಳಿತ
ನಡಿಗೆ ಕಣ್ಣ ಹೊರಳಾಟ ಕೂಡುವ ನಿಲ್ಲುವ ನಿಲುಮೆ...
ಎಲ್ಲೆಲ್ಲೂ ಮಾತೇ ಮಾತು! ಸದಾ ಅಮ್ಮನ ಸುತ್ತಲೇ ಗಸ್ತು!

ಯಾವಾಗಲಾದರೊಮ್ಮೆ ಸೆಟಗೊಂಡು
ಕುಳಿತರೆ ಕಣ್ಣಂಚಲ್ಲಿ ಒಂದು ಹನಿ
ಮನೆಮಂದಿಯೆಲ್ಲ ಕೈಕೈ ಹಿಚುಕಿಕೊಳ್ಳುವರು
ತಪ್ಪು ಮಾಡಿದವರಾರೆಂದು?
ವಿಚಾರಣೆ ನಡೆಸುವಳು ಮಗಳು ಅದರೊಡತಿ
ರಿಯೋ ಎಂದು ಹೆಸರಿಟ್ಟು ಕರೆದವಳು
ಮೂರನೆಯ ಮಗುವಾಗಿ
ಮನೆ ತುಂಬಿರುವ ರಿಯೋ
ಸದಾ ಮನೆ ತುಂಬ ಮನಸ ತುಂಬ
ರಿಯೋ ರಿಯೋ ರಿಯೋ ಗುಂಜಾರವ!

ನಾನು ಇಂಡಿಯನ್ನು ಕ್ಯಾಟು ಪರ್ಷಿಯನ್ನು
ಸಂದೇಹಿಸಬಹುದೇ ನನ್ನ ದೇಶಭಕ್ತಿಯ?
ಜಡಿಯಬಹುದೇ ದೇಶದ್ರೋಹಿಯ ಕೇಸು?

ಆದಿ ಅನಾದಿಕಾಲದಿಂದ ಹರಿದು ಬಂದ
ಜಗದಗಲ ಮಿಗೆಯಗಲ ಆಕಾಶದಗಲದ
ಪ್ರಾಣಿಕುಲ ಪಕ್ಷಿಕುಲ ಸಸ್ಯಕುಲ ಮನುಜಕುಲ
ಗಳನೆಲ್ಲ ಒಡಲ ತುಂಬಿಸಿಕೊಂಡು ಎರಕಹೊಯ್ದು
ಮೈವೆತ್ತ ವಿಶ್ವಗರ್ಭೆ ತಾಯಿ ಭಾರತಿಯೇ
ಈ ಪುಟ್ಟ ಬೆಕ್ಕಿನ ಮರಿ ನಿನ್ನ ಕನಸಿನ ಕೂಸು
ಅದರೊಟ್ಟಿಗೆ ನಾನೂ ಅಲ್ಲವೇ ಮತ್ತೆ?



**-ಎಂ.ಡಿ. ವಕ್ಕುಂದ**

೧೧ನೇ ಪುಟದಿಂದ)

ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿನ ಸೋಲು, ಸಂಘಟನಾತ್ಮಕ ದೌರ್ಬಲ್ಯ ಮತ್ತು ಸೈದ್ಧಾಂತಿಕ ಅಸ್ಪಷ್ಟತೆ. ಕಾಂಗ್ರೆಸ್ ಪಕ್ಷದಲ್ಲಿ ಕಾರ್ಯಕರ್ತರಿಗಿಂತ ಕುರ್ಚಿ ಬಿಟ್ಟುಕೊಡದ ನಾಯಕರ ಸಂಖ್ಯೆ ಹೆಚ್ಚಿಗಿದೆ. ಇದರ ಜೊತೆಗೆ ಕುಟುಂಬ ರಾಜಕಾರಣ ಸೇರಿದೆ. ಈಗ ಎಡಪಂಥೀಯ ಪಕ್ಷಗಳನ್ನು ಹೊರತುಪಡಿಸಿ ಎಲ್ಲಾ ಪಕ್ಷಗಳ ದೌರ್ಬಲ್ಯ ಇದಾಗಿರುವುದರಿಂದ ಕಾಂಗ್ರೆಸ್ಸೊಂದನ್ನೇ ದೂರುವುದರಲ್ಲಿ ಅರ್ಥವಿಲ್ಲ. ಕಾಂಗ್ರೆಸ್‌ನ ಇಂದಿನ ಸ್ಥಿತಿಗೆ ಕಾರಣ ಪಿ.ವಿ.ನರಸಿಂಹ ರಾವ್. ಅವರು ಪ್ರಧಾನಿಯಾಗಿದ್ದಾಗ ಅಯೋಧ್ಯೆಯ ಬಾಬರಿ ಮಸೀದಿ ನೆಲಸಮಗೊಳ್ಳಲು ಅವಕಾಶ ನೀಡಿದ್ದು ಮತ್ತು ನವ ಉದಾರೀಕರಣದ ಆರ್ಥಿಕ ನೀತಿಗಳು ಕೂಡ ಕಾಂಗ್ರೆಸ್‌ನ ದುರವಸ್ಥೆಗೆ ಕಾರಣ.

೨) ಕಾಂಗ್ರೆಸ್ ಪಕ್ಷ ಪುನಶ್ಚೇತನಗೊಳ್ಳಬೇಕೆಂದರೆ ಅದು ಸೈದ್ಧಾಂತಿಕ ಬದ್ಧತೆಯುಳ್ಳ ಕಾರ್ಯಕರ್ತರ ಪಡೆ ಕಟ್ಟಬೇಕು. ಅದಕ್ಕಿಂತ ಮೊದಲು ತಾತ್ವಿಕ ಗೊಂದಲದಿಂದ ಹೊರಗೆ ಬರಬೇಕು. ಉದಾಹರಣೆಗೆ ಅಯೋಧ್ಯೆಯ ಬಾಬರಿ ಮಸೀದಿ ಕೆಡವಿದ ಜಾಗದಲ್ಲಿ ಮಂದಿರ ನಿರ್ಮಾಣಕ್ಕೆ ಸಂಘ ಪರಿವಾರ ಶಿಲಾನ್ಯಾಸ ಮಾಡಿದಾಗ ಕಾಂಗ್ರೆಸ್ ಕೂಡ ಸಂಭ್ರಮಿಸಿತು. ಇಂಥ ದಿವಾಳಿಕೋರ ನೀತಿಯಿಂದ ಅದು ಅಲ್ಪಸಂಖ್ಯಾತರಿಂದ ದೂರವಾಗುತ್ತ ಬಂತು. ದಲಿತ, ಹಿಂದುಳಿದ ಜನವರ್ಗಗಳು ದೂರವಾಗಿವೆ. ಕಳೆದುಕೊಂಡದ್ದನ್ನು ಮರಳಿ ಗಳಿಸಲು ಕಾಂಗ್ರೆಸ್ ಮತ್ತೆ ಗಾಂಧಿ, ನೆಹರೂ ವಿಚಾರಗಳ ಸ್ಪರ್ಶ ಪಡೆಯಬೇಕು.



೩) ಕಾಂಗ್ರೆಸ್ ಪಕ್ಷ ಪುನಶ್ಚೇತನಗೊಳ್ಳಬೇಕೆಂದರೆ ಜಾತ್ಯತೀತ ಸೈದ್ಧಾಂತಿಕ ಬದ್ಧತೆ ಉಳಿಸಿಕೊಳ್ಳಬೇಕು. ಸಂಘಪರಿವಾರ ಬಹುಸಂಖ್ಯಾತ ಹಿಂದೂಗಳಲ್ಲಿ ಅದರಲ್ಲೂ ಹೊಸ ಪೀಳಿಗೆಯಲ್ಲಿ ಮೂಡಿಸಿದ ತಪ್ಪು ಕಲ್ಪನೆಯನ್ನು ನಿವಾರಿಸಲು ಯತ್ನಿಸಬೇಕು. ತತ್ವಬದ್ಧ ಕಾರ್ಯಕರ್ತರ ಪಡೆ ಕಟ್ಟಬೇಕು.

**-ಸನತ್‌ಕುಮಾರ ಬೆಳಗಲಿ**, ನಿವೃತ್ತ ಪತ್ರಕರ್ತ, ಚಿಂತಕ, ಕಲಬುರಗಿ

### ವಿರೋಧ ಪಕ್ಷಗಳೊಂದಿಗೆ ಭಾರತ ಯಾತ್ರೆ ಕೈಗೊಳ್ಳಲಿ

ಕಾಂಗ್ರೆಸ್ ನಾಯಕತ್ವ ಆತ್ಮಾವಲೋಕನ ಮಾಡಿಕೊಂಡು ಪುನಶ್ಚೇತನಕ್ಕೆ ಪರಿಣಾಮಕಾರಿಯಾದ ಕಾರ್ಯಕ್ರಮ ರೂಪಿಸಿಕೊಂಡು ಕ್ರಿಯಾಶೀಲಗೊಳ್ಳದಿದ್ದರೆ ಅದು ಅಸ್ತಂಗತಗೊಳ್ಳುವ ಸಾಧ್ಯತೆ ಇದೆ. ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉತ್ತಮಗೊಳಿಸಲು ಕಾಂಗ್ರೆಸ್ ಅವಶ್ಯಕತೆ ಖಂಡಿತಾ ಇದೆ. ಕಾಂಗ್ರೆಸ್‌ಗೆ ಇರುವ ದೊಡ್ಡ ಇತಿಹಾಸ ಬೇರಾವ ಪಕ್ಷಗಳಿಗು ಇಲ್ಲ. ರಾಷ್ಟ್ರದ ಎಲ್ಲ ಪ್ರದೇಶಗಳಲ್ಲೂ ಕಾಂಗ್ರೆಸ್ ನಾಯಕರಿದ್ದಾರೆ, ಕಾರ್ಯಕರ್ತರಿದ್ದಾರೆ. ಬೆಂಬಲಿಸುವ ಮತದಾರರಿದ್ದಾರೆ. ವಿಶಾಲ ದೃಷ್ಟಿಕೋನವುಳ್ಳ ನಾಯಕರು ಕಾಂಗ್ರೆಸ್‌ನಲ್ಲೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇಂದು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ವಿರುದ್ಧ ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬರುವುದು ಸಾಧ್ಯವೇ ಇಲ್ಲ. ಹಾಗಾಗಿ ಪ್ರತಿ ಪಕ್ಷಗಳನ್ನು ಒಟ್ಟಿಗೆ ತರಲು ಕಾಂಗ್ರೆಸ್ ಪಕ್ಷ ಪಾತ್ರವಹಿಸಲೇ ಬೇಕು.

ಕಾಂಗ್ರೆಸ್‌ನ ಇಂದಿನ ಚಿಂತಾಜನಕ ಸ್ಥಿತಿಗೆ ನೆಹರು ಕುಟುಂಬದ ಮೇಲಿನ ಅತಿಯಾದ ಅವಲಂಬನೆಯೇ ಮುಖ್ಯ ಕಾರಣ. ನೆಹರು ಕುಟುಂಬವು ಆ ಪಕ್ಷದ ಶಕ್ತಿಯೂ ಹೌದು, ದೌರ್ಬಲ್ಯವೂ ಹೌದು.

ಕಾಂಗ್ರೆಸ್ ನಾಯಕರು ಸರ್ಕಾರದ ಟೀಕೆಯಲ್ಲೇ ಕಾಲ ಹರಣ ಮಾಡುತ್ತಿರುವುದು ಇಂದಿನ ಈ ಸ್ಥಿತಿಗೆ ಕಾರಣ. ಕೇವಲ ಸರ್ಕಾರದ ವಿರೋಧದಿಂದ ಒಂದು ಪಕ್ಷವನ್ನು ಸಂಘಟಿಸಲು, ಬೆಳೆಸಲು ಸಾಧ್ಯವಿಲ್ಲ.

ಕಾಂಗ್ರೆಸ್ ಪಕ್ಷವನ್ನು ಪುನಶ್ಚೇತನಗೊಳಿಸಲು ಸಾಧ್ಯವಿಲ್ಲ ಎಂದಲ್ಲ. ನೆಹರು ಕುಟುಂಬದವರು ಪಕ್ಷದೊಳಗೆ ಮಾರ್ಗದರ್ಶಕರ ಪಾತ್ರಕ್ಕೆ ಸೀಮಿತಗೊಂಡು ಪಕ್ಷದ ನಾಯಕ ಸ್ಥಾನವನ್ನು ವಿಶ್ವಾಸಾರ್ಹ ಹಿರಿಯ ನಾಯಕನಿಗೆ ವಹಿಸಬೇಕು. ದೇಶ ಮುನ್ನಡೆಸಲು ಅಗತ್ಯವಾದ ಸ್ಪಷ್ಟ ವಿಚಾರಧಾರೆಯನ್ನು ರೂಪಿಸಿಕೊಳ್ಳುವುದು ಬಹಳ ಅಗತ್ಯ. ಅದಕ್ಕಾಗಿ ಪಕ್ಷದೊಳಗೆ ಚಿಂತನ-ಮಂಥನ ಆಗಬೇಕು.

ಕೆಲ ವರ್ಷಗಳ ಹಿಂದೆ ಉತ್ತರ ಪ್ರದೇಶದಲ್ಲಿ ಸೈಕಲ್ ಯಾತ್ರೆ ನಡೆಸುವ ಮೂಲಕ ಅಖಿಲೇಶ್ ಯಾದವ್ ಅವರು ಸಮಾಜವಾದಿ ಪಕ್ಷವನ್ನು ಅಧಿಕಾರಕ್ಕೆ ತರಲು ಹಾಗೂ ಆಂಧ್ರಪ್ರದೇಶದಲ್ಲಿ ಜಗನ್ ರೆಡ್ಡಿಯವರು ಪಾದಯಾತ್ರೆ ಮೂಲಕ ವೈಎಸ್‌ಆರ್ ಪಕ್ಷವನ್ನು ಅಧಿಕಾರಕ್ಕೆ ತರಲು ಯಶಸ್ವಿ ಆದರು. ೧೯೮೦ರಲ್ಲಿ ಚಂದ್ರಶೇಖರ್ ಅವರು ಭಾರತಯಾತ್ರೆ ನಡೆಸುವ ಮೂಲಕ ಜನಮನ್ನಣೆ ಪಡೆದರು. ಆ ಮಾದರಿಯಲ್ಲಿ ಕಾಂಗ್ರೆಸ್ ಪಕ್ಷ ಭಾರತಯಾತ್ರೆ ಆರಂಭಿಸಬಹುದು. ಈ ಯಾತ್ರೆಯಲ್ಲಿ ಪ್ರಮುಖ ವಿರೋಧ ಪಕ್ಷಗಳ ನಾಯಕರನ್ನೂ ಒಳಗೊಂಡರೆ ಭಾರತದ ರಾಜಕಾರಣದಲ್ಲಿ ಹೊಸ ಸಂಚಲನವನ್ನುಂಟುಮಾಡುವ ಸಾಧ್ಯತೆ ಇದೆ.



**-ಆರ್.ಪಿ. ವೆಂಕಟೇಶ ಮೂರ್ತಿ**, ಸಂಪಾದಕರು: ಜನತಾ ಮಾಧ್ಯಮ, ಹಾಸನ

# ಸಂತಾಪ, ಪುರಸ್ಕಾರ ಪುರಾಣ, ಒಂದು ಪುಸ್ತಕ: ಕೆಲ ಚಿಟಿ ಟಿಪ್ಪಣಿಗಳು

## ಅನುತ್ತರವಾದ 'ನಿರುತ್ತರ'



ರಾಜೇಶ್ವರಿ ತೇಜಸ್ವಿ ನಿಧನರಾಗಿದ್ದಾರೆ. ಇದರೊಂದಿಗೆ ಪೂರ್ಣಚಂದ್ರ ತೇಜಸ್ವಿಯವರ ಕುಟುಂಬದೊಡನೆ, ತೇಜಸ್ವಿಯವರ ನಿಧನಾನಂತರದ ಹದಿನೈದು ವರ್ಷಗಳ ಕಾಲ ಅವರ ಒಡನಾಡಿದ್ದ ಅಪಾರ ಸಂಖ್ಯೆಯ ಜನರ ಭಾವ ಸಂಪರ್ಕವೂ ಕಡಿದು ಬಿದ್ದಂತಾಗಿದೆ. ತೇಜಸ್ವಿ ಎಂದರೆ ಅವರನ್ನು ಆಪ್ತವಾಗಿ ಬಲ್ಲವರಿಗೆ ಅವರು 'ರಾಜೇಶ್!' ಎಂದು ಪ್ರೀತಿಯಿಂದ ಕರೆಯುತ್ತಿದ್ದ ರಾಜೇಶ್ವರಿಯವರೂ ಸೇರಿರುತ್ತಿದ್ದರು ಎಂಬುದು ಗೊತ್ತಾಗುವುದು. ಹಿನ್ನೆಲೆಯಲ್ಲಿದ್ದರೂ ತೇಜಸ್ವಿ ತಮ್ಮ ಅನನ್ಯ ಸಾಹಿತ್ಯರಾಶಿಯ ರೂಪದಲ್ಲಿ ನಮಗೆಲ್ಲ ಧಾಳಾಗಿ ಕಂಡಿದ್ದು ರಾಜೇಶ್ವರಿಯವರು ಬೆಳಗಿದ ಕೌಟುಂಬಿಕ ನೆಮ್ಮದಿಯ ಬೆಳಕಿನಿಂದಾಗಿ ಎಂಬುದು ಗೊತ್ತಿದೆ. ಅಷ್ಟು ಅವಿಭಾಜ್ಯ ಈ ಎರಡು ಹೆಸರುಗಳು ಮತ್ತು ವ್ಯಕ್ತಿತ್ವಗಳು. ತೇಜಸ್ವಿ ನಿಧನದ ಕೆಲವೇ ದಿನಗಳ ನಂತರ ನಾನು ನನ್ನ ಪತ್ನಿಯೊಂದಿಗೆ ಮೂಡಿಗೆರೆಯ ಅವರ 'ನಿರುತ್ತರ' ಮನೆಯಲ್ಲಿ ಭೇಟಿಯಾಗಿದ್ದಾಗ, ಹೀಗೇ ಮಾತನಾಡುತ್ತಾ, 'ಇನ್ನು ನಿಮಗೆ ಇಲ್ಲಿ ಒಬ್ಬರೇ ಇರಲು ಬೇಸರವಾಗುವುದಿಲ್ಲವೆ?' ಎಂದು ಕೇಳಿದಾಗ ರಾಜೇಶ್ವರಿಯವರು ಹೇಳಿದ್ದ 'ಈ ತೋಟದ ಮಣ್ಣಿನ ಕಣಕಣದಲ್ಲಿ, ಇಲ್ಲಿನ ಪ್ರತಿ ಗಿಡ ಮರ ಹೂವು ಪ್ರಾಣಿ ಪಕ್ಷಿಗಳಲ್ಲಿ ನಾನು ತೇಜಸ್ವಿಯನ್ನು ಕಾಣುತ್ತೇನೆ, ಕಾಣುವ ಹಾಗೆ ತೇಜಸ್ವಿ ನನಗೆ ಬದುಕು ಕಲಿಸಿ ಹೋಗಿದ್ದಾರೆ' ಎಂದು ಹೇಳಿದ್ದುದು ನೆನಪಿಗೆ ಬರುತ್ತಿದೆ. ಈ ಸಂದರ್ಭದಲ್ಲೇ ನನ್ನ ಪತ್ನಿ ಸವಿತಾ ತೇಜಸ್ವಿಯವರ ನೆನಪುಗಳನ್ನು ಬರೆಯುವಂತೆ ಅವರನ್ನು ಒತ್ತಾಯಿಸಿದ್ದು. ರಾಜೇಶ್ವರಿ ಅದನ್ನು ಬರೆದೂ ಬರೆದರು. ಈ ಪುಸ್ತಕ ತೇಜಸ್ವಿಯವರ ವೈಯಕ್ತಿಕ ಸ್ತರದ ಬದುಕನ್ನು ಕುರಿತ ಓದುಗರ ಅನೇಕ ಕುತೂಹಲಗಳನ್ನು ತಣಿಸಿದ್ದು ಅದರ ಸಾರ್ಥಕತೆ ಎಂದೇ ಹೇಳಬೇಕಿದೆ. ನಂತರ ಅವರು ಬರೆದದ್ದು 'ನಮ್ಮ ಮನೆಗೆ ಗಾಂಧಿ ಬಂದರು' ಎಂಬ ತಮ್ಮ ತಾಯಿಯ ಬದುಕನ್ನು ಕುರಿತ ಪುಸ್ತಕ.

ಮಾನಸ ಗಂಗೋತ್ರಿಯಲ್ಲಿ ತತ್ವಶಾಸ್ತ್ರದ ಸ್ನಾತಕೋತ್ತರ ವಿದ್ಯಾರ್ಥಿನಿಯಾಗಿದ್ದಾಗ ನೇಕಾರ ಕುಟುಂಬದ ರಾಜೇಶ್ವರಿ ತೇಜಸ್ವಿಯವರನ್ನು ಪ್ರೇಮಿಸಿ ಮದುವೆಯಾಗುವ ಸಂದರ್ಭ ಬಂದಾಗಲೇ ಕುವೆಂಪು ಈ ಮದುವೆಗೆಂದೇ ಪುರೋಹಿತರ ಮಧ್ಯಸ್ಥಿಕೆ ಇಲ್ಲದ 'ಮಂತ್ರ ಮಾಂಗಲ್ಯ'ವೆಂಬ ಸರಳ ಮಾದರಿಯ ವಿವಾಹ ಸಂಹಿತೆಯನ್ನು ರಚಿಸಿದ್ದು. ಅದನ್ನು ಮುಂದೆ ತೇಜಸ್ವಿ ಧರ್ಮಾತೀತವಾಗಿ ಪರಿಷ್ಕರಿಸಿದರು. ಎಪ್ಪತ್ತು-ಎಂಬತ್ತರ ದಶಕಗಳಲ್ಲಿ ಇದೊಂದು ದುಂದು ವೆಚ್ಚವಿಲ್ಲದ ಸರಳ ಮದುವೆಯ ಚಳುವಳಿಯಾಗಿ ಬೆಳೆದು, ಇದರಡಿಯಲ್ಲಿ ಕರ್ನಾಟಕದಾದ್ಯಂತ ಅದೆಷ್ಟು ಸಾವಿರ ಯುವ ಪ್ರೇಮಿಗಳು ಜಾತಿ-ಧರ್ಮ-ಅಂತಸ್ತುಗಳ ಪರಿಗಣನೆ ಇಲ್ಲದೆ ಮದುವೆಯಾದರೋ ಲೆಕ್ಕಕ್ಕಿಲ್ಲ.

ಹೀಗೆ ಕರ್ನಾಟಕದ ಸಾಹಿತ್ಯಿಕ-ಸಾಂಸ್ಕೃತಿಕ-ಸಾಮಾಜಿಕ ಜೀವನದ ಇತ್ತೀಚಿನ ಇತಿಹಾಸದ ಭಾಗವಾಗಿ ಹೋದ ರಾಜೇಶ್ವರಿಯವರು ತೇಜಸ್ವಿಯವರಂತೆಯೇ ಸಮಾಜವಾದಿ ದೃಷ್ಟಿಕೋನದವರಾಗಿದ್ದರು. 'ಹೊಸ ಮನುಷ್ಯ' ಪತ್ರಿಕೆಯ ಕಟ್ಟಾ ಅಭಿಮಾನಿಯಾಗಿದ್ದ ಅವರು ಪತ್ರಿಕೆಗೆ ಪ್ರತಿವರ್ಷ ದೇಣಿಗೆ ನೀಡುತ್ತಿದ್ದರಲ್ಲದೆ ಆಗಾಗ್ಗೆ ಕರೆ ಮಾಡಿ ಪತ್ರಿಕೆಯ ಹೂರಣದ ಬಗ್ಗೆ ಚರ್ಚಿಸುತ್ತಿದ್ದರು. ರಾಜೇಶ್ವರಿಯವರ ನಿಧನಕ್ಕಾಗಿ ಅವರಿಬ್ಬರ ಮಕ್ಕಳಾದ ಸುಸ್ಮಿತಾ, ಈಶಾನ್ಯೆ ಮತ್ತು ಅವರ ಕುಟುಂಬಗಳಿಗೆ ಪತ್ರಿಕೆ ಈ ಮೂಲಕ ತನ್ನ ಸಂತಾಪಗಳನ್ನು ಸೂಚಿಸುತ್ತದೆ.

## ಜ್ಞಾನಪೀಠದ ಸುತ್ತಮುತ್ತ

೨೦೨೦-೨೧ರ ಜ್ಞಾನಪೀಠ ಪ್ರಶಸ್ತಿಗಳು ಪ್ರಕಟವಾಗಿವೆ. ಕ್ರಮವಾಗಿ ಅಸ್ಸಾಮಿ ಮತ್ತು



ಕೊಂಕಣಿ ಭಾಷೆಗಳ ನೀಲಮಣಿ ಫೂಕನ್ ಮತ್ತು ದಾಮೋದರ ಮೌಜೋ ಅವರಿಗೆ ಈ ಪ್ರಶಸ್ತಿ ಸಂದಿದೆ. ಈ ಇಬ್ಬರನ್ನೂ ಪತ್ರಿಕೆ ಅಭಿನಂದಿಸುತ್ತದೆ. ಈ ಬಾರಿ ಈ ಪ್ರಶಸ್ತಿಯ ಸರದಿ ಕನ್ನಡದ್ದು ಮತ್ತು ಈ ಪ್ರಕಾರ ಯಾರಾರ ಹೆಸರು ಇದಕ್ಕೆ ಶಿಫಾರ್ಸಾಗಿತ್ತು ಎಂಬುದನ್ನು ಕೇಳಿದವರಿಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೆ ಈ ಪ್ರತಿಷ್ಠಿತ ಪ್ರಶಸ್ತಿಯ ವಿಶ್ವಾರ್ಹತೆ ಹಾಗೂ ಈ ಪ್ರಶಸ್ತಿಯನ್ನು ಈವರೆಗೆ ಪಡೆದವರ ಹಿರಿಮೆ ಗರಿಮೆಗಳು ಹೇಗೆ ಮಣ್ಣು ಪಾಲಾಗುತ್ತಿತ್ತು ಎಂಬುದು ಅರ್ಥವಾಗಿದೆ. ಈ ಸುದ್ದಿಯ ಮೂಲಗಳನ್ನು ನಂಬುವುದಾದರೆ, ಈ ಬಾರಿ ಕನ್ನಡದ ಪರವಾಗಿ ಶಿಫಾರ್ಸಾಗಿದ್ದ ಹೆಸರುಗಳೆಂದರೆ ವೀರಪ್ಪ ಮೊಯ್ಲಿ ಮತ್ತು ಲತಾ ರಾಜಶೇಖರ್ ಅವರು ರಚಿಸಿರುವ 'ಮಹಾಕಾವ್ಯ'ಗಳಿಗಾಗಿ! ಇವರ ಹೆಸರುಗಳನ್ನು ಶಿಫಾರ್ಸು ಮಾಡಿದ ಭೂಪರು ಮತ್ತು ಈ ಮೂವ್ವರನ್ನು ಶಿಫಾರ್ಸುದಾರರನ್ನಾಗಿ ಶಿಫಾರ್ಸು ಮಾಡಿದವರ ಹೆಸರುಗಳನ್ನು ಇಲ್ಲಿ ಬರೆದರೆ ಕನ್ನಡ ಸಾಹಿತ್ಯ ಲೋಕದ ಕಟ್ಟಡ ಹೇಗೆ ಬುಡದಿಂದ ತುದಿಯವರೆಗೆ ಬಿರುಕು ಬಿಟ್ಟು ಅವನತಿಯ ಸ್ಥಿತಿಗೆ ಈಡಾಗಿದೆ ಎಂಬುದು ಗೊತ್ತಾಗುವಂತಿದೆ. ಇವರೆಲ್ಲ ಮಹಾಕಾವ್ಯ ಎಂಬ ಸಾಹಿತ್ಯ ಪ್ರಕಾರವನ್ನು ಭವ್ಯ-ದಿವ್ಯ ಶಬ್ದಗಳ ಚಮತ್ಕಾರಿಕ ವಿನ್ಯಾಸಗಳ ಬೃಹತ್ ಕಥಾ ಕಟ್ಟಡ ಎಂಬ ಅರ್ಥಕ್ಕೆ ಇಳಿಸಿದಂತಿದೆ. ಮಹಾಕಾವ್ಯಗಳ ಹಿಂದೆ ಒಂದು ಮಹಾ ಮನಸ್ಸು ಇರುತ್ತದೆ ಮತ್ತು ಅದು ಯುಗಾಂತರ ಬಾಳುವ ದ್ರಷ್ಟಾರ ಗುಣವನ್ನು ಹೊಂದಿರುತ್ತದೆ ಎಂಬ ಅರಿವೇ ಇಲ್ಲಿ ಇಲ್ಲವಾಗಿದೆ. ಈ ದ್ರಷ್ಟಾರತೆಯನ್ನು ಶ್ರಮದಿಂದಾಗಲೀ, ಚಿಲ್ಲರೆ ಮಹತ್ವಾಕಾಂಕ್ಷೆಗಳಿಂದಾಗಲೀ ಸಾಧಿಸಲಾಗುವುದಿಲ್ಲ ಎಂಬ ಪರಿವೆ ಇವರಿಗಿದ್ದಂತಿಲ್ಲ. ಅಭಿರುಚಿಯ ಈ ಅವನತಿಗೆ ಯಾರೇ ಕಾರಣರಾಗಿರಲಿ ಅವರು ಸಂಸ್ಕೃತಿಯ ಹತ್ಯೆಯೊಂದರ ಪಾಪದ ಪಾಲುದಾರರೇ ಸರಿ.

## ಸತ್ಯವತಿಯವರಿಗೆ ಕುವೆಂಪು ರಾಷ್ಟ್ರೀಯ ಪುರಸ್ಕಾರ



ಇನ್ನು ಕರ್ನಾಟಕದ 'ಜ್ಞಾನಪೀಠ' ಎಂದು ಕರೆಯಬಹುದಾದ 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಈ ಬಾರಿ ಹಿರಿಯ ತೆಲುಗು ಲೇಖಕಿ ಪಿ. ಸತ್ಯವತಿಯವರಿಗೆ ಸಂದಿದೆ. ಅವರಿಗೆ ಅಭಿನಂದನೆಗಳು. ಕರ್ನಾಟಕದ ಮಾಜಿ ಸಚಿವ ಮತ್ತು ಗಾಂಧಿವಾದಿ ಎಂ. ಚಂದ್ರಶೇಖರ್ ಅವರ ಕುಟುಂಬ ಪ್ರಾಯೋಜಿಸಿ ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಮೂಲಕ ಪ್ರದಾನವಾಗುವ ಈ ಪುರಸ್ಕಾರ ಐದು ಲಕ್ಷ ರೂಪಾಯಿಗಳ ನಗದು ಬಹುಮಾನವನ್ನು ಒಳಗೊಂಡಿದೆ. ಇದನ್ನು ೨೦೧೩ರಿಂದ ಪ್ರತಿವರ್ಷ ಭಾರತೀಯ ಭಾಷೆಯೊಂದರಲ್ಲಿ ಅತ್ಯುತ್ತಮ ಸಾಧನೆ ಮಾಡಿದವರನ್ನು ಆರಿಸಿ ನೀಡಲಾಗುತ್ತದೆ.

ಮೂಲತಃ ಆಂಧ್ರದ ಗುಂಟೂರಿನವರಾದ ಸತ್ಯವತಿಯವರು ವಿಜಯವಾಡದ ಕಾಲೇಜೊಂದರಲ್ಲಿ ಇಂಗ್ಲಿಷ್ ಪ್ರಾಧ್ಯಾಪಕಿಯಾಗಿ ವೃತ್ತಿಜೀವನ ನಡೆಸಿ, ಈಗ ಅಲ್ಲಿಯೇ ನೆಲೆಸಿದ್ದಾರೆ. ತೆಲುಗು ಸಾಹಿತ್ಯಕ್ಕೆ ಆಧುನಿಕ ಸ್ತ್ರೀವಾದವನ್ನು ಪರಿಚಯಿಸಿದ ಲೇಖಕಿ ಎಂದು ಪ್ರಸಿದ್ಧರಾದ ಇವರ 'ಸತ್ಯವತಿ ಕಥೆಗಳು' ಸಂಕಲನ ಇವರನ್ನು ತೆಲುಗು ಸಾಹಿತ್ಯ ಲೋಕದ ಓರ್ವ ಬಹುಮುಖ್ಯ ಲೇಖಕಿಯನ್ನಾಗಿ ಪ್ರತಿಷ್ಠಾಪಿಸಿದೆ. ಇವರಿಗೆ ಕುವೆಂಪು ಅವರ ಹುಟ್ಟುಹಬ್ಬವಾದ ಡಿಸೆಂಬರ್ ೨೯ರ ವಿಶ್ವಮಾನವ ದಿನದಂದು ಕುಪ್ಪಳಿಯಲ್ಲಿ ನಡೆಯುವ ಸಮಾರಂಭದಲ್ಲಿ ಪುರಸ್ಕಾರ ಪ್ರದಾನ ಮಾಡಲಾಗುವುದು.

## ಸರಳ ಖುಷಿಯ ಓದಿಗೆ ಒಂದು ಪುಸ್ತಕ

ಬಿ.ಟಿ.ಬೆಳಗಟ್ಟ ಎಂಬ ಹೆಸರಿನಲ್ಲಿ ಬಹುಮುಖ ಚಟುವಟಿಕೆಗಳಲ್ಲಿ ತೊಡಗಿರುವ




ದಾವಣಗೆರೆಯ ಗೆಳೆಯ ತಿಪ್ಪೇಸ್ವಾಮಿಯವರು ಈ ಹಿಂದಿನ ಸಂಚಿಕೆಯೊಂದರಲ್ಲಿ ಪರಿಚಯಿಸಿದ್ದಂತೆ ತಮ್ಮ ಪತ್ನಿ ಸುನಂದಮ್ಮ ಅವರ ಹೆಸರಿನ ಸಂಪಾದಕತ್ವದಲ್ಲಿ ಬೆಳಗಟ್ಟ ಎಂಬ ಅನಿಯತಕಾಲಿಕ ಪತ್ರಿಕೆಯೊಂದನ್ನು ಹೊರತರುತ್ತಾರೆ. ನಾಲ್ಕೇ ಪುಟಗಳ ಈ ಪತ್ರಿಕೆಯಲ್ಲಿ ಇರದ ವಿಷಯ ಕ್ಷೇತ್ರವೇ ಇಲ್ಲ ಎನ್ನಬಹುದು. ಇಂತಹ ಪತ್ರಿಕೆಯ ಕೆಲ ನಿರ್ದಿಷ್ಟ ಪ್ರಕಾರಗಳ ಲೇಖನಗಳನ್ನು ಇವರು ಪುಟ್ಟ ಪುಸ್ತಕಗಳ ರೂಪದಲ್ಲಿಯೂ ಆಗಾಗ್ಗೆ ಹೊರತರುತ್ತಾರೆ. ಅಂತಹ ಎರಡು ಮೂರು ಪುಸ್ತಕಗಳನ್ನು ನಮ್ಮ ಪತ್ರಿಕೆ ಪರಿಚಯಿಸಿದೆ. ಈಗ ಇವರು ಹಲವು ಪ್ರಖ್ಯಾತರ ಜೀವನದ ಗಮನಾರ್ಹ ದೃಷ್ಟಾಂತಗಳ ಮತ್ತು ರಸಕ್ಷಣಗಳ ಆಯ್ದು ತುಣುಕುಗಳನ್ನು 'ಮಕರಂದ' ಎಂಬ ಹೆಸರಿನಲ್ಲಿ ಹೊರ ತಂದಿದ್ದಾರೆ. ಹೆಸರೇ ಸೂಚಿಸುವಂತೆ ಬೆಳಗಟ್ಟರವರು ಹಲವು ಪುಸ್ತಕಗಳು ಮತ್ತು ಪತ್ರಿಕೆಗಳಿಂದ ಇವನ್ನು ಹೆಕ್ಕಿ ಇಲ್ಲಿ ಜೋಡಿಸಿದ್ದಾರೆ.

ಇಲ್ಲಿ ಮಹಾತ್ಮಗಾಂಧಿ-ಅಂಬೇಡ್ಕರ್, ವಿಶ್ವೇಶ್ವರಯ್ಯನವರಂತಹ ಸಾರ್ವಜನಿಕ ವ್ಯಕ್ತಿತ್ವಗಳಿಂದ ಹಿಡಿದು ಮಾಸ್ತಿ, ಡಿವಿಜಿ, ತಸು ಶಾಮರಾಯರು, ಕುವೆಂಪು, ಅನಕೃ, ಅನಂತಮೂರ್ತಿ ಇತ್ಯಾದಿ ಸಾಹಿತಿಗಳನ್ನು ಹಾದು ಭೀಮಸೇನ ಜೋಷಿ, ರಾಜ್‌ಕುಮಾರ್, ರಜನೀಕಾಂತ್, ಜಯಂತಿ, ಜಯಮಾಲಾರಂತಹವರವರೆಗಿನ ಕಲಾವಿದರ ಬದುಕಿನ ಈ ದೃಷ್ಟಾಂತಗಳ ಹರಹು ಹರಡಿಕೊಂಡಿದೆ. ಕೆಲವು ಅನಾಮಿಕರ ಅನುಭವ ಕಥನಗಳೂ ಇಲ್ಲಿವೆ. ರಾಜ್‌ಕುಮಾರ್ ಬದುಕಿನ ಚಿತ್ರಗಳೇ ಇಲ್ಲಿ ಜಾಸ್ತಿ ಎಂಬ ಸಂಗತಿ ಇಲ್ಲಿನ ಆಯ್ಕೆಗಳ ಒರೆಗಲ್ಲೇನೆಂಬುದನ್ನು ಸೂಚಿಸುವಂತಿದೆ. ಕೆಲವು ದೃಷ್ಟಾಂತಗಳಿಗೆ ಆಕರಗಳೇ ಇಲ್ಲ, ಇವುಗಳ ವಿಶ್ವಾಸಾರ್ಹತೆಗೆ ಬೆಳಗಟ್ಟರವರೇ ಜವಾಬ್ದಾರಿ! ಹಾಗೇ ಇನ್ನು ಕೆಲವು ಆಕರಗಳ ಮೂಲ ಕರ್ತೃಗಳೇ ಕೆಲವರಿಗೆ ಅನುಮಾನಾಸ್ಪದರಾಗಿ ಕಂಡರೆ ಆಶ್ಚರ್ಯವಿಲ್ಲ!

ಅದೇನೇ ಇದ್ದರೂ, ಸಾಮಾನ್ಯ ಓದಿಗೆ ಈ ಕೃತಿ ಒಳ್ಳೆಯ ಆಯ್ಕೆಯಾಗಬಹುದು. ಸುಮಾರು ನೂರು ಪುಟಗಳ ಈ ಪುಸ್ತಕದ ಮುಖಬೆಲೆ ರೂ.೧೦೦/-. ಸಂಪರ್ಕ ಸಂಖ್ಯೆ: ೯೪೪೮೪೮೫೨೨೨

-ಡಿಎಸ್ಸೆನ್

## ಪುಸ್ತಕಾವಲೋಕನ

ಪು: **ಹೋಗಿ ಬನ್ನಿ ಋತುಗಳೇ** (ಎಚ್. ಎಸ್. ಶಿವಪ್ರಕಾಶ್‌ರ ನಾಲ್ಕು ದಶಕದ ಕವಿತೆಗಳು)ಸಂ.: ಕೆ.ವೈ. ನಾರಾಯಣ ಸ್ವಾಮಿ ಮತ್ತು ಕೆ. ರಾಜೇಂದ್ರಪ್ರಸಾದ್ ಪ್ರ: **ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ**, ಬೆಂಗಳೂರು ಪು **೭೨೮**, ಬೆಲೆ ರೂ. ೮೦೦/-

### ಮಹತ್ವದ ಕವಿಯೊಬ್ಬರ ಕಾವ್ಯಸಾಧನೆಯ ದಾಖಲೆ




**ನ**ನ್ನ ತಲೆಮಾರಿನ ಪ್ರಮುಖ ಕವಿ, ನಾಟಕಕಾರ, ಚಿಂತಕ, ಬಹುಭಾಷೆಗಳ ಸಾಹಿತ್ಯದ ಓದಿನ ನಿಕಟ ಪರಿಚಯವಿರುವ, ಭಾರತದ ಬೇರೆ ಬೇರೆ ರಾಜ್ಯಗಳು ಮಾತ್ರವಲ್ಲ ಖಂಡಾಂತರ ಪ್ರಯಾಣವನ್ನೂ ಮಾಡಿ ಸಮೃದ್ಧವಾದ ಅನುಭವ ಗಳಿಸಿರುವ ಶಿವಪ್ರಕಾಶರ ಸಮಗ್ರ ಕಾವ್ಯ ಸಂಪುಟವು ನನ್ನಂಥ ಓದುಗರಿಗೆ ಕಾವ್ಯಸ್ಮೃತಿಗಳನ್ನು ಹೊಸತುಗೊಳಿಸಿಕೊಳ್ಳುವ ಅವಕಾಶವನ್ನು ಒದಗಿಸುತ್ತದೆ, ಕಾವ್ಯ ರಚನೆಯಲ್ಲಿ ಆಸಕ್ತರಾಗಿರುವ ಹೊಸ ಲೇಖಕರಿಗೆ ಪ್ರಮುಖ ಕವಿಯೊಬ್ಬರ ಸುಮಾರು ಅರ್ಧಶತಮಾನದ ಕಾವ್ಯ ಯಾತ್ರೆಯ ಚಿತ್ರಣವನ್ನು ನೀಡುತ್ತದೆ, ಕಾವ್ಯವನ್ನು ಕುರಿತು ಅಧ್ಯಯನ ಮಾಡಲು ಬಯಸುವವರಿಗೆ ಕವಿವ್ಯಕ್ತಿತ್ವ, ಓದುಗ ಸಮೂಹ, ಮತ್ತು ಕಾವ್ಯಾನುಭವಗಳ ಸಂಬಂಧವನ್ನು ಕುರಿತು ಹೊಸ ಚಿಂತನೆಗಳನ್ನು ಮಾಡಲು ಅವಕಾಶ ಮಾಡಿಕೊಡುತ್ತದೆ. ಈ ಸಂಕಲನವನ್ನು ಸಿದ್ಧಪಡಿಸಿದ ಕೆ.ವೈ. ನಾರಾಯಣಸ್ವಾಮಿ ಮತ್ತು ರಾಜೇಂದ್ರಪ್ರಸಾದ್ ಅಭಿನಂದನೆಗೆ ಅರ್ಹವಾದ ಕೆಲಸವನ್ನು ಮಾಡಿದ್ದಾರೆ.

ಶಿವಪ್ರಕಾಶರು ತಮ್ಮ ರಚನೆಯನ್ನು ಓದುವುದನ್ನು ಕೇಳಿದವರಿಗೆ ಅವರ ಕಾವ್ಯದ, ಮುಖ್ಯವಾಗಿ ಅವರ ದೀರ್ಘ ಕವಿತೆಗಳ, ಗುಂಗು ಹಿಡಿಸುವ ಗುಣ ಗೊತ್ತೇ ಇರುತ್ತದೆ. *ಭೂತನಾಥನ ಗೋಳು* ಕವಿತೆಯ **ಎಲ್ಲಿ ಹೂಳುವುದು ಹೇಳು, ಜಗತ್ತೇ, ಜಗತ್ತನ್ನೇ/ ಜಗತ್ತೇ ಹೀಗೆ ಸತ್ತು ಹೋದಾಗ** ಸಾಲುಗಳು ಮೂರು ದಶಕಗಳಿಂದ ಇನ್ನೂ ಕಿವಿಯೊಳಗೆ ಸಮುದ್ರದ ಮೊರೆತದ ನೆನಪಿನ ಹಾಗೆ ಉಳಿದಿವೆ. *ಅಭಿನವ* ಕವಿತೆಯ **ಓ ಕಾಲ ಚಕ್ರಗಳೇ ನಿಮ್ಮ ಜೊತೆ/ಓ ನಕ್ಷತ್ರವ್ಯೋಮಗಳೇ ನಿಮ್ಮ ಜೊತೆ ಓ/ಋತುಮಾನ ದಿನಮಾನ ಕ್ಷಣಮಾನ ಕ್ಷಣಾರ್ಧಮಾನಗಳೇ/ನಿಮ್ಮ ಜೊತೆ ಓ ಅನಂತತೆಯೇ ನಿನ್ನ ಜೊತೆ ಓ/ಅನಾದಿಯೇ ನಿನ್ನ ಜೊತೆ** ಇಂಥ ಸಾಲುಗಳು ಹೇರಳವಾಗಿ ದೊರೆಯುತ್ತವೆ. ಇವು ಶಿವಪ್ರಕಾಶರ ದೀರ್ಘ ರಚನೆಗಳ ನಾಟಕೀಯ ನಿವೇದನೆಯ ಮುಖ್ಯ ಲಕ್ಷಣವಾಗಿಯೇ ಕಾಣುತ್ತವೆ.

ಪುರಾಣ, ಚರಿತ್ರೆಯಿಂದ ವಸ್ತು ನಿದರ್ಶನವನ್ನು ಆಯ್ದು ಗತಕಾಲಕ್ಕೆ ಇರುವ ವರ್ತಮಾನದ ಲಕ್ಷಣವನ್ನು ವರ್ತಮಾನಕ್ಕೆ ನಾಳಿನ ದಾರಿ ತೋರಬಹುದಾದ ಚಿತ್ರಗಳನ್ನು ಕಟ್ಟುವ ರಚನೆಗಳಾಗಿ ಶಂಸ್-ತಬ್ರೀಜ್, ಬಾಗ್ದಾದ್ ಒಂದು ಪ್ರಾರ್ಥನೆ, ನದಿಯ ನಾಡಿನಲ್ಲಿ, ಸಿಂಗಿರಾಜಪುರಾಣ, ಕಲ್ಯಾಣ, ಮರುಳಶಂಕರ ದೇವ, ಸಮಗಾರ ಭೀಮವ್ವ ಇಂಥ ರಚನೆಗಳದು ಒಂದು ಬಗೆಯಾದರೆ ***ನಾನು ಹುಟ್ಟಿದೆ ಅಂತ ನಾನಂದುಕೊಂಡಂಥ/ ಅರ್ಧ ವಾಸ್ತವ ಅರ್ಧ ಕಲ್ಪನೆಯ/ಬಾಲ್ಯ ಅನ್ನುವ ಗಂಧರ್ವ ಮಿಥ್ಯೆಯ/ನಗರ ಬೀದಿಯಲ್ಲಿ*** ಅಲೆದಾಡುತ್ತ, ಅರಸುತ್ತ ತಳಮಳವನ್ನು ಇಲ್ಲವಾಗಿಸಿಕೊಳ್ಳಲು ಹೆಣಗುವ ಕವಿತೆಗಳೂ ದೊಡ್ಡ ಪ್ರಮಾಣದಲ್ಲೇ ಇವೆ. ಗದ್ಯಗಂಧಿಯಾದ *ಚಂದ್ರ ಮತ್ತು ಗಡಿಯಾರ* (೧೯೮೩ರ ಸಂಕಲನದಲ್ಲಿ) ಮತ್ತು ಹಾಯ್ಕುಗಳ ರೂಪದಲ್ಲಿ ಸುದೀರ್ಘವಾದ ಭಾವ ನಿವೇದನೆಯ *ನಿನಗೆ: ಮೂವತ್ತು ವರ್ಷ ಹಳೆಯ ಪ್ರೇಮಕವಿತೆ* (೨೦೦೮ರ ಸಂಕಲನದಲಿ) ಇವು ತಟ್ಟನೆ ನೆನಪಾಗುವ ರಚನೆಗಳು. ಅವರ ಎಲ್ಲ ಸಂಕಲನಗಳಲ್ಲೂ ಖಾಸಗಿ ಅನ್ನಿಸುವಂಥ ನಿವೇದನೆಗಳು ಇದ್ದೇ ಇವೆ. *ಸಿಗರೇಟುಗಳ ನಡುವೆ* ರಚನೆಯಲ್ಲಿರುವ ಹಾಗೆ ಸುಡುವ ರೂಪಕಗಳಾಗಿ ಮೈಪಡೆಯುತ್ತವೆ.

ಹಾಗೆ ನೋಡಿದರೆ *ಮಿಲರೇಪ* ಸಂಕಲನದಲ್ಲೇ ಖಾಸಗಿ ಅನುಭವ, ನಮ್ಮ ನೆಲದ ಮತ್ತು ಬೇರೆಯ ನೆಲದ ಗತಕಾಲದ ವ್ಯಕ್ತಿತ್ವಗಳನ್ನು ಭಾಷೆಯಲ್ಲಿ ರೂಪಿಸುತ್ತ ವ್ಯಕ್ತಿಗೆ ಮತ್ತು ಸಮಾಜಕ್ಕೆ ಅಗತ್ಯವಾದ ಚಲನೆಯ ದಿಕ್ಕನ್ನು ಕಂಡುಕೊಳ್ಳುವ ಅಪೇಕ್ಷೆ, ಛಂದೋ ಪ್ರಯೋಗಗಳು ಇವೆಲ್ಲ ಕಾಣಿಸುತ್ತವೆ. ಖಾಸಗಿ ನೆನಪುಗಳನ್ನು ತೊರೆಯುವ, ಸಾಮೂಹಿಕ ಬದುಕಿಗೆ ಬೇಕಾದ ಹಳೆಯ ನೆನಪುಗಳನ್ನು ಮತ್ತೆ ಕಟ್ಟಿಕೊಳ್ಳುವ, ಹಾಗೆಯೇ ದೇಹ, ಮನಸು, ಆತ್ಮಗಳಿಗೆ ನೆಮ್ಮದಿ ತರುವ ಆಧ್ಯಾತ್ಮಿಕ ಅರಸುವಿಕೆ, ತೊಳಲಾಟಗಳು ಸಮರ್ಥವಾಗುವ ಕವಿತೆಯಾಗಿ *ಸಮಗಾರ ಭೀಮವ್ವದಲ್ಲಿ*, ಹಾಗೇ ಮಳೆಬಿದ್ದ ನೆಲದಲ್ಲಿ ಸಂಕಲನದ ವಚನಯುಗವನ್ನು ಬೆಳಗುವ ನೆನಪುಗಳ ನಿರೂಪಣೆಯಲ್ಲಿ ಕಾಣುತ್ತವೆ. *ಸಿಂಗಿರಾಜಪುರಾಣವಾಗಲೀ ಕಲ್ಯಾಣವಾಗಲೀ ಬಾಗ್ದಾದ್* ನಗರವಾಗಲೀ ತುಕಾರಾಮ, ಮರುಳಶಂಕರ ಇಂಥ ಹಲವು ಪಾತ್ರಗಳೇ ಆಗಲಿ ಶಿವಪ್ರಕಾಶರ ರಚನೆಗಳಲ್ಲಿ ಸ್ಥಾವರಗೊಂಡ ನಿರ್ಜೀವ ಧರ್ಮ ಮತ್ತು ಮನುಷ್ಯತ್ವವಿರದ ಆಳ್ವಿಕೆ, ಭಾವನೆಗಳ ಪಸೆಯಿರದ ನಗರಗಳನ್ನು ಬೇರೆ ನಿದರ್ಶನಗಳ ಮೂಲಕ ನಮ್ಮೆದುರು ಮಂಡಿಸುವುದರಲ್ಲಿ ತೊಡಗಿರುವಂತೆ ಒಮ್ಮೊಮ್ಮೆ ಅನಿಸುತ್ತದೆ. ಅವರ ದೀರ್ಘ ರಚನೆಗಳ ನಾಯಕ ನಾಯಕಿಯರು, ಚಿತ್ರಿಸುವ ನಗರಗಳು, ವ್ಯಕ್ತವಾಗುವ ಹಂಬಲ, ರೂಪು ಪಡೆಯುವ ಕನಸು ಒಂದೇ, ಬೇರೆ ಬೇರೆ ಕೋನಗಳಿಂದ ಅವನ್ನು ಕಾಣುತ್ತೇವೆ ಅನಿಸುತ್ತದೆ. ಸಂಗೀತಗಾರರು ರಾಗವೊಂದರ ಸಾಧನೆಗೆ ಬದುಕನ್ನು ಮುಡಿಪಾಗಿಡುವ ಹಾಗೇ ದೊಡ್ಡ ಕವಿಗಳು ಒಂದೇ ಕವಿತೆಯನ್ನು ಮತ್ತೆ ಮತ್ತೆ ಬೇರೆ ಬೇರೆ ರೂಪಗಳಲ್ಲಿ ಲಯದಲ್ಲಿ ಬರೆಯುತ್ತ ಕಾಣಿಸುತ್ತ ಹೋಗುತ್ತಾರೆ ಅನ್ನುವ ಮಾತು ನಿಜವಿರಬಹುದು.

ವ್ಯಕ್ತಿಯ ಖಾಸಗಿ ಭಾವುಕ ಲೋಕದಲ್ಲಿ ಕಳೆದುಹೋಗುವ ನುಡಿ ಬೇಡ, ವ್ಯಕ್ತಿಯನ್ನು ಲೆಕ್ಕಕ್ಕೆ ಇಡದೆ ಸಮಾಜವನ್ನೇ ಕುರಿತು ನುಡಿಯುವ ರೀತಿಯೂ ಬೇಡ, ವ್ಯಕ್ತಿ ಪಾತ್ರವಾಗಬೇಕು, ಭಾವುಕತೆ ಆದಿಮ ಭಾವವಾಗಬೇಕು, ಭಾವಸಂಚಾರ ಮಂತ್ರವಾಗಬೇಕು ಅನ್ನುವ ಅಪೇಕ್ಷೆಯನ್ನು ಶಿವಪ್ರಕಾಶ ಮಿಲರೇಪದ ಮುನ್ನುಡಿಯಲ್ಲಿ ಹೇಳಿದ್ದಾರೆ. ಕವಿತೆ ಕನ್ನಡದ ಕವಿತೆಯಾಗಬೇಕು ಅನ್ನುವ ಅಪೇಕ್ಷೆ ಹೀಗೆ ಸ್ಪಷ್ಟವಾಗಿಯೇ ವ್ಯಕ್ತವಾಗಿದೆ. ಪಾವಿತ್ರ್ಯವಿರದ, ನಂಬಿಕೆಯಿರದ ನವ್ಯಕಾವ್ಯಕ್ಕಿಂತ ಬೇರೆಯಾಗಿ ಬರೆಯಬೇಕು; ನವೋದಯದ ಭಾವುಕತೆಯನ್ನು ಮೀರಬೇಕು, ಪಾವಿತ್ರ್ಯ ಮತ್ತು ನಂಬಿಕೆಯ ತಿಳಿನೀರನ್ನು ತನಗಾಗಿ, ತಾನು ಬದುಕಿರುವ ಲೋಕಕ್ಕಾಗಿ ಕಾವ್ಯದ ಮೂಲಕ ಪಡೆಯಬೇಕು ಅನ್ನುವ ಅಪೇಕ್ಷೆಯನ್ನು ಅಣುಕ್ಷಣ ಚರಿತೆಯ ಮುನ್ನುಡಿಯಲ್ಲಿ ಹೇಳಿದ್ದಾರೆ. ಹೊಣೆಯರಿತು ನಿಜವಾಗಿ ಬರೆಯಲು ಬಯಸುವ ಕವಿಯ ಎಚ್ಚರ ಈ ಮಾತುಗಳಲ್ಲಿದೆ.

*ಅಣುಕ್ಷಣ ಚರಿತೆ* ಹಾಗೆ ಶಿವಪ್ರಕಾಶರ ಅತ್ಯುತ್ತಮ ರಚನೆಗಳು ಅತಿ ಹೆಚ್ಚಿನ ಪ್ರಮಾಣದಲ್ಲಿರುವ ಸಂಕಲನವೆಂದು ನನಗೆ ತೋರುತ್ತದೆ. ***ನಿಂತಂತೆ ಕಂಡರೂ ನಿರಂತರ ಯಾತ್ರಿಕರು/ಕತ್ತಲಿನ ಸೀಮೆಯಲ್ಲಿ ಬೆಳಕುವಾಡಿಗಳಂತೆ/ಗುಂಪಿನಲ್ಲಿದ್ದರೂ ಒಂಟಿಯಾಗಿ/ ಮೈಯೆಲ್ಲ ಬೆಂಕಿ ಬೆಳಕಾಗಿ ಹೋಗಿ/ದಿಕ್ಕುಗಳ ಹಿಡಿದರೂ/ದಿಕ್ಕುಗೆಟ್ಟವರು/ದಿಕ್ಕು ತೋರುವ ನಾವು*** *ನಕ್ಷತ್ರ ಯಾತ್ರಿಕರು* ಕವಿತೆಯ ಈ ಸಾಲುಗಳು ಕವಿಯ ವಿಧಿಯನ್ನೂ ಕವಿಯಾಗದಿದ್ದರೂ ಇಂಥ ಅನುಭವಕ್ಕೆ ಒಳಗಾಗಿ ಪತರಗುಟ್ಟುವ ಓದುಗರನ್ನೂ ಮನಸಿಗೆ ತರುತ್ತವೆ. ಬಸವನ ***ಮಹಾಮನೆಯ ಲಕ್ಷ್ಮಿ*** ಮರುಳಶಂಕರ ದೇವನಂಥವರ ***ಕರುಳಿರದ ತಾಯಿ, ಕಲಚೂರ್ಯ ವಿಜಯಲಕ್ಷ್ಮಿಯ ಮಲತಂಗಿ.*** ಬಂಡೆಯಂತಾಗಿರುವ ಧರ್ಮ, ***ಬಂಡೆಯ ಅಸ್ಪಷ್ಟ ಕನಸನ್ನು*** ನಿಜಮಾಡುವ ಕವಿತೆಗಾಗಿ ನಡೆಸುವ ಧ್ಯಾನ ಸಿಗರೇಟುಗಳ ನಡುವೆ ಬೂದಿಯಾಗುವ ಖಾಸಗಿ ಬದುಕು, ಪಾಳು ದೇಗುಲದ ಹಿಂದೆ ಎಂದೋ ಮರೆಯಾಗಿ ಹೋದ ಜೀವಂತ ಬದುಕು, ಆಧುನಿಕ ಗೋಳೀಕರಣದಲ್ಲಿ ಕವಿ ಬಂದದ್ದೂ ಗೊತ್ತಾಗದೆ ಮರುಳ ಶಂಕರನ ಹಾಗೆ ಕಣ್ಮರೆಯಾಗಬಹುದಾದ ದುರಂತ ಇವೆಲ್ಲ ಈ ಸಂಕಲನದ ಕವಿತೆಗಳಲ್ಲಿ ಭಾವದ ವಿಚಾರದ ಚಿತ್ರಗಳಾಗಿ ರೂಪುಗೊಂಡಿವೆ.

ನೆನಪುಗಳು ಎಂಬ ಅರ್ಥದ, ಅಮರ್‌ಕಾರ್ಡ್ ಎಂಬ ಹೆಸರಿನ ಫೆಲಿನಿಯ ಚಲನ ಚಿತ್ರದಲ್ಲಿ ತಟ್ಟನೆ ಕಾಣುವ ನವಿಲನ್ನು ಕಾವ್ಯ ಆಕಸ್ಮಿಕ ಸಂಭವಕ್ಕೆ ನಿದರ್ಶನವಾಗಿ ಶಿವಪ್ರಕಾಶ್ ತಮ್ಮೊಂದು ಮುನ್ನುಡಿಯಲ್ಲಿ ಬಳಸಿದ್ದಾರೆ. ನವಿಲು ಬರುವುದು ಅದರಿಚ್ಛೆ. ಎಲ್ಲೆಲ್ಲಿ ಕಾವ್ಯವೆಂಬ ನವಿಲು ನರ್ತಿಸಿದೆಯೋ ಅಲ್ಲೆಲ್ಲ ಶಿವಪ್ರಕಾಶರ ಕವಿತೆ ಕನ್ನಡದ ಸಿರಿ ಸಂಪತ್ತು ಅನಿಸುತ್ತದೆ. ಇವು ಕನ್ನಡದ ಕವಿತೆಗಳೆಂಬ ಹೆಮ್ಮೆಯನ್ನು ಇವನ್ನು ಓದಿದ್ದು ನಮ್ಮ ಭಾಗ್ಯವೆಂಬ ಭಾವವನ್ನೂ ಓದುಗರಿಗೆ ತರುತ್ತವೆ.

ಸಾವಕಾಶವಾಗಿ ಓದಿ ಓದಿನ ಅನುಭವಗಳನ್ನು ಹಂಚಿಕೊಂಡು ನಾವೂ ಬೆಳೆಯಬೇಕಾದ, ಕವಿತೆಗಳನ್ನೂ ಬೆಳೆಸಬೇಕಾದ ರಚನೆಗಳನ್ನು ಬಯಸುವವರು ತಪ್ಪದೆ ಹೊಂದಿರಬೇಕಾದ ಸಂಕಲನ ಇದು.

**-ಓ.ಎಲ್. ನಾಗಭೂಷಣಸ್ವಾಮಿ**

ಪು: **ಅಕ್ಷರವೃಕ್ಷ** ಎಲ್. ನಾರಾಯಣ ರೆಡ್ಡಿ ಅವರ ಆತ್ಮಕಥೆ, ಅವರ ಲೇಖನಗಳೊಂದಿಗೆ) ಅನು: **ಕೆ.ಪಿ. ಸುರೇಶ**, ಪ್ರ: **ಇನಿಶಿಯೇಟಿವ್ಸ್ ಫಾರ್ ಡೆವಲಪ್‌ಮೆಂಟ್ ಫೌಂಡೇಶನ್**, ಬೆಂಗಳೂರು ಹಾಗೂ **ಸಂಕಥನ**, ಮಂಡ್ಯ(೯೮೮೬೧೩೩೪೪೯) ಪು: **೨೬೪ ಬೆ: ರೂ.೨೦೦/**

### ಅನುಭವ ಕಥನದ ಮೂಲಕ ಕೃಷಿ ಚರಿತ್ರೆ




**ವಿ**ಶ್ವವ್ಯಾಪಿ ಪರಿಸರ ನಾಶ, ನೈಸರ್ಗಿಕ ವಿಕೋಪ, ಹವಾಮಾನ ವೈಪರೀತ್ಯಗಳಿಂದ ಆಹಾರ ಉತ್ಪಾದನೆಯ ಮೇಲಾಗುತ್ತಿರುವ ದುಷ್ಪರಿಣಾಮ, ರೈತರ ಬಗೆಗಿನ ನಿರ್ಲಕ್ಷ್ಯದ ಕಾಲಘಟ್ಟದ ಈ ಹೊತ್ತಿನಲ್ಲಿ ಕನ್ನಡನಾಡಿನ ಸಾವಯವ ಕೃಷಿ ತಜ್ಞ ಎಲ್. ನಾರಾಯಣ ರೆಡ್ಡಿಯವರನ್ನು ಕುರಿತ ಕೃತಿ ಮಹತ್ವದ್ದಾಗಿದ್ದು, ಪುಸ್ತಕ ಲೋಕಕ್ಕೊಂದು ಅಮೂಲ್ಯ ಕೊಡುಗೆಯಾಗಿದೆ.

ಭಾರತದ ಫುಕುವೋಕ ಎಂದೇ ಖ್ಯಾತರಾದ ಹಾಗೂ ಸುಸ್ಥಿರ ಕೃಷಿಯ ಮಾರ್ಗಾನ್ವೇಷಕ ನಾರಾಯಣರೆಡ್ಡಿ

ಅವರ ೨ನೇ ಪುಣ್ಯ ಸ್ಮರಣೆ (ನಿಧನ– ಜನವರಿ ೧೪, ೨೦೧೯) ಸಂದರ್ಭದಲ್ಲಿ ಪುಸ್ತಕ ಹೊರ ಬಂದಿದೆ. ರೆಡ್ಡಿಯವರನ್ನು ಪರಿಚಯಿಸಿ ಅರ್ಥ ಮಾಡಿಸಿಕೊಡುವ ಪ್ರಯತ್ನವನ್ನು ಈ ಪುಸ್ತಕ ಮಾಡಿದೆ.

ನಾರಾಯಣರೆಡ್ಡಿಯವರ ೫೨ ಲೇಖನಗಳ ಈ ಸಂಕಲನ ಕೃಷಿ ಕುರಿತ ಆಳವಾದ ಜ್ಞಾನವನ್ನು ಪ್ರತಿಬಿಂಬಿಸಿ, ಹೊಸದಾಗಿ ಕೃಷಿ ಆರಂಭಿಸುವ, ಈಗಾಗಲೇ ಕೃಷಿಯಲ್ಲಿ ತೊಡಗಿರುವವರಿಗೆ ಕಣ್ಣು ತೆರೆಸುವಂತಿದೆ. ಜಾಗತೀಕರಣದ ಉತ್ತುಂಗ ಸ್ಥಿತಿ ತಲುಪಿ, ಕೊರೋನಾ ಕಾಲಘಟ್ಟದಲ್ಲಿ ನಗರಗಳಿಂದ ಮಹಾವಲಸೆ ನಡೆದು, ಗೊಂದಲದ ಗೂಡಾಗಿರುವ ಸಮಾಜಕ್ಕೆ ಕೃಷಿಯೊಂದೇ ಕೊನೆಯ ಆಸರೆ ಎಂಬುದನ್ನು ಈ ಪುಸ್ತಕ ಮಾರ್ಮಿಕವಾಗಿ ಹೇಳುತ್ತದೆ.

ನಾಗೇಶ್ ಹೆಗಡೆ, ಹಾಗೂ ಎಂ.ಜಿ. ಚಂದ್ರಶೇಖರಯ್ಯನವರ ಲೇಖನಗಳು ನಾರಾಯಣ ರೆಡ್ಡಿಯವರ ಸಮಗ್ರ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತವೆ. ಹಾಗೆಯೇ ವಿದೇಶಗಳಲ್ಲಿ ರೆಡ್ಡಿಯವರ ಸಾಧನೆಗಳನ್ನು ಗುರುತಿಸಿದಾಗ ನಮ್ಮವರು ಕಣ್ಣು ಬಿಟ್ಟರು ಎಂಬ, ಸಾಹಿತಿ ಎಸ್.ಜಿ. ಸಿದ್ಧರಾಮಯ್ಯನವರ ಮಾತು ರೆಡ್ಡಿಯವರ ವಿಷಯದಲ್ಲಿ ಸತ್ಯವಾಗಿದೆ. ಹಾಗೆಯೇ ರೆಡ್ಡಿಯವರ ಇಂಗ್ಲಿಷ್ ಲೇಖನಗಳ ಅನುವಾದ ಮನಮುಟ್ಟುವಂತಿದೆ. ಬೇಸಾಯದಲ್ಲಿ ಏಗಲಾರ (ಸಣಕಲು ಎಂಬ ಕಾರಣಕ್ಕೆ) ಎಂದು ಶಾಲೆಗೆ ಹಾಕಲಾಗಿದ್ದ ಹುಡುಗ, ಹೋಟೆಲ್ ಕ್ಲೀನರ್, ಲಾರಿ ಆಫೀಸ್, ಪೀವನ್, ದಕ್ಷತೆಯ ಕಾರಣಕ್ಕೆ ಅದೇ ಆಫೀಸ್‌ನಲ್ಲಿ ಮ್ಯಾನೇಜರ್, ನಂತರ ಜನರಲ್ ಮ್ಯಾನೇಜರ್ ಹುದ್ದೆಗೇರಿ, ಈ ಮಧ್ಯೆ ಹಿಂದಿ, ಇಂಗ್ಲಿಷ್ ಕಲಿತು ಅಚಾನಕ್ಕಾಗಿ ಊರಿಗೆ ಮರಳಿ, ಆಧುನಿಕ ಕೃಷಿಯಿಂದ ಕೈಸುಟ್ಟುಕೊಂಡು, ಜಮೀನು ಮಾರಿ ಲಾರಿ ತಗೊಂಡು ಅದೇ ವ್ಯವಹಾರ ಮಾಡೋಣ ಎಂಬ ನಿರ್ಧಾರಕ್ಕೆ ಬಂದಂತಿದ್ದ ರೆಡ್ಡಿ, ಆಕಸ್ಮಿಕವಾಗಿ ಅಮೆರಿಕನ್ ಪ್ರಜೆ ಟಕ್ಕರ್ ಭೇಟಿಯಿಂದಾಗಿ ಸಾವಯವ ಕೃಷಿ ಮಾಡಲು ಸಲಹೆ ಪಡೆದು, ಕೃಷಿಯಲ್ಲಿ ಅದ್ವಿತೀಯ ಸಾಧನೆಗೈದು, ಕೃಷಿ ಸಂತ ಜಪಾನಿನ ಫುಕುವೋಕಾರಿಂದ ಶಹಭಾಷ್‌ಗಿರಿ ಪಡೆದದ್ದು ನಾರಾಯಣರೆಡ್ಡಿಯವರ ಛಲಕ್ಕೆ ಸಾಕ್ಷಿ.

ಅಪ್ಪನ ಸಿಟ್ಟಿಗೆ ಗುರಿಯಾಗಿ ಮುಂದಾಲೋಚನೆ ಇಲ್ಲದೆ ಮನೆಬಿಟ್ಟ ನಾರಾಯಣರೆಡ್ಡಿ, ಬೆಂಗಳೂರು, ಮುಂಬೈ ತಲುಪಿ, ಹೋಟೆಲ್, ಲಾರಿ ಆಫೀಸ್‌ನಲ್ಲಿ ತಮ್ಮ ಛಾಪನ್ನು ಮೂಡಿಸಿ, ಲಾರಿ ಬಾಡಿಗೆ ಕಾರಣಕ್ಕಾಗಿ ಬೆಂಗಳೂರಿಗೆ ಬಂದಿದ್ದ ಅಣ್ಣನ ಕಣ್ಣಿಗೆ ಬಿದ್ದು, ೮ ವರ್ಷಗಳ ನಂತರ ಊರು ಸೇರಿ, ಕೃಷಿಯಲ್ಲಿ ಸಾಧನೆಗೈದು, ಭತ್ತದ ಬೇಸಾಯದಲ್ಲಿ ಕರ್ನಾಟಕದಲ್ಲಿ ಶ್ರೀ ಪದ್ಧತಿಗೆ ಚಾಲನೆ ನೀಡಿ ಖ್ಯಾತಿಯಾದದ್ದು, ಯಾವುದೇ ರೋಚಕ ಕಥೆ, ಕಾದಂಬರಿಗೆ ಕಡಿಮೆಯಿಲ್ಲ.

ಮರಗಿಡಗಳು ನಿಜವಾದ ದೇವರು–ದೇವತೆಗಳು. ದೇವಸ್ಥಾನಕ್ಕೆ ಹೋಗೋದು ಅಷ್ಟೇನು ಮುಖ್ಯವಲ್ಲ. ಭೂಮಿಯೊಳಗಡೆ ಒಂದು ಅದ್ಭುತವಾದ ಪ್ರಪಂಚವಿದೆ. ಅದು ಜೀವಂತವಾಗಿದ್ದರೆ ಭೂಮಿಯ ಮೇಲಿರುವ ಪ್ರಪಂಚವೂ ಸದಾ ಜೀವಂತವಾಗಿರುತ್ತದೆ ಎಂಬ ನಾರಾಯಣರೆಡ್ಡಿ ಅವರ ಉಪನ್ಯಾಸ ಮಣ್ಣಿನ ಮಹತ್ವವನ್ನು ಸಾರುವಂತಿದೆ.

ಇನ್ನು ಪತ್ರಿಕೆಗೆ ಬರೆದ ಲೇಖನಗಳು ಪುಸ್ತಕದ ೨ ನೇ ಭಾಗದಲ್ಲಿದ್ದು, ಸುಸ್ಥಿರ ಕೃಷಿ, ಬೆಳೆ ವೈವಿಧ್ಯ, ಉಪಕಸುಬಿಗೆ ಆದ್ಯತೆ ನೀಡಿದಲ್ಲಿ ಕೀಟಬಾಧೆಯಿಂದ ತಪ್ಪಿಸಿಕೊಂಡು ಆಹಾರ ಭದ್ರತೆ ಹಾಗೂ ಪರಿಸರಕ್ಕೆ ಸಹಕರಿಸಬಹುದು ಎಂಬ ರೆಡ್ಡಿ ಅವರ ಆಶಯ, ಕೃಷಿಯ ಮೂಲಭೂತ ತಿಳುವಳಿಕೆಯನ್ನು ಕಾಣಿಸುತ್ತದೆ. ಜಾಗತೀಕರಣವನ್ನು ಎದುರಿಸಲು ಇರುವ ದೊಡ್ಡ ಮಾರ್ಗ ಎಂಬ ಹಿನ್ನೆಲೆಯಲ್ಲಿ ಮಹಾತ್ಮಗಾಂಧಿಯವರ ಸರಳ ಜೀವನ ಪ್ರತಿಪಾದಿಸಿರುವುದು ಗಮನಾರ್ಹ.

ನಾರಾಯಣ ರೆಡ್ಡಿಯವರ ಉಪನ್ಯಾಸದಿಂದ ಪ್ರೇರಣೆ ಪಡೆದು, ಅವರ ತೋಟಕ್ಕೆ ಭೇಟಿ ನೀಡಿ, ಅಂತರರಾಷ್ಟ್ರೀಯ ಖ್ಯಾತಿಯ *ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ* ೧೯೮೮ ರಲ್ಲೇ ಪಂಜಾಬ್, ಮಧ್ಯಪ್ರದೇಶಗಳನ್ನು ಹೋಲಿಕೆ ಮಾಡಿ ಆಧುನಿಕ ಕೃಷಿ ಅಭಿವೃದ್ಧಿ ತಂತ್ರೋಪಾಯಗಳ ಅಪಾಯಗಳ ಬಗ್ಗೆ, 'ಏರುತ್ತಿರುವ ವೆಚ್ಚದ ಬಿಕ್ಕಟ್ಟು, ಹೊರದಾರಿ ಇದೆಯೇ? ಎಂಬ ಶೀರ್ಷಿಕೆಯಡಿ ಭಾರತದ ಕೃಷಿ ಬಿಕ್ಕಟ್ಟಿನ ಬಗ್ಗೆ ಚರ್ಚಿಸುತ್ತಾ ಎಂ.ವಿ. ನಾಡಕರ್ಣಿಯವರು ಲೇಖನವೊಂದನ್ನು ಬರೆದಿದ್ದರು.ಅದರಲ್ಲಿನ, ಪರಿಹಾರೋಪಾಯದ ಭಾಗದಲ್ಲಿ, ರೈತನೊಬ್ಬನ ಸಾಧನೆ ಎಂದು ರೆಡ್ಡಿಯವರ ದಾಖಲೆ ಮುಂದಿಟ್ಟಿದ್ದು ಜನತೆಯ ಕಣ್ತೆರೆಸುವಂತಿದೆ.

ಚೀನಾದಲ್ಲಿ ಆರ್ಥಿಕ ಉತ್ಪಾದನೆ ಸಾಧಿಸಲು ಪಾರಂಪರಿಕ ವಿಧಾನಗಳನ್ನೇ ಅಭಿವೃದ್ದಿಪಡಿಸಿದ ಕ್ರಮದಿಂದ ನಾವು ಕಲಿಯುವುದು ಬಹಳಷ್ಟಿದೆ. ಈ ಕಾರಣಕ್ಕೆ ಭಾರತಕ್ಕಿಂತಲೂ ಕಡಿಮೆ ಕೃಷಿಯೋಗ್ಯ ಭೂಮಿ ಹೊಂದಿರುವ ಚೀನಾ ನಮಗಿಂತ ೨.೫ ಪಟ್ಟು ಹೆಚ್ಚು ಆಹಾರ ಉತ್ಪಾದನೆ ಮಾಡುವುದು ಸಾಧ್ಯವಾಗಿದೆ. ಆದರೆ ಭಾರತದಲ್ಲಿ ದಾಸ್ತಾನಿರುವ ರಾಸಾಯನಿಕ ಗೊಬ್ಬರ ಖಾಲಿ ಮಾಡುವುದು ಗುರಿ. ಕೃಷಿ ಅಭಿವೃದ್ಧಿ ಅದಕ್ಕಿರುವ ಸಾಧನ ಎಂಬಂತಾಗಿದೆ ಎಂದಿರುವ ನಾಡಕರ್ಣಿಯವರ ಮಾತುಗಳು ಕೃಷಿ ಕ್ಷೇತ್ರ ಸಾಗಿರುವ, ಸಾಗುತ್ತಿರುವ ದಿಕ್ಕನ್ನು ತೋರಿಸುವಂತಿವೆ.

ಲೀಸಾ ಇಂಡಿಯಾ ತ್ರೈಮಾಸಿಕ ಪತ್ರಿಕೆಗೆ ಬರೆದ ಅನುಭವನಿಷ್ಠ ಲೇಖನಗಳು ನಿರರ್ಗಳವಾಗಿ ಓದಿಸಿಕೊಂಡು, ಜ್ಞಾನೋದಯವನ್ನುಂಟು ಮಾಡುವಂತಿವೆ ಎಂದರೆ ಅತಿಶಯೋಕ್ತಿಯಲ್ಲ. ಇನ್ನು ಚಿತ್ರಸಂಪುಟದ ಮಹಾಭಾರತದ ನಾಟಕದಲ್ಲಿ ದ್ರೋಣನ ಪಾತ್ರಧಾರಿಯಾಗಿ ಅಭಿನಯಿಸಿದ ಫೋಟೋ ರೆಡ್ಡಿಯವರ ಕಲೆ, ವೈವಿಧ್ಯಮಯ ಆಸಕ್ತಿಗೆ ಉದಾಹರಣೆಯಾಗಿದೆ.

ದೆಹಲಿಯಲ್ಲಿ ರೈತರು ಸತತ ಒಂದು ವರ್ಷಗಳ ಕಾಲ ರೈತ ವಿರೋಧಿ ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ಮಾಡಿ ಕೇಂದ್ರ ಸರ್ಕಾರದ ವಿರುದ್ಧ ಸೆಡ್ಡು ಹೊಡೆದು ಮಳೆ, ಚಳಿ, ಬಿಸಿಲನ್ನು ಲೆಕ್ಕಿಸದೆ ಹೋರಾಡಿ ವಿಜಯದ ನಗೆ ಬೀರಿದ ಸಂದರ್ಭದಲ್ಲೇ ಬಂದಿರುವ ನಾರಾಯಣರೆಡ್ಡಿಯವರ ಅಕ್ಷರವೃಕ್ಷ, ಕೃಷಿಯಲ್ಲಿ ನಿಜವಾಗಿಯೂ ರೈತರು ಜಯಶಾಲಿಯಾಗಲು, ಆ ಮೂಲಕ ದೇಶವನ್ನು ಸಮಗ್ರ ಹಾಗೂ ಸುಸ್ಥಿರ ಕೃಷಿಯತ್ತ ಕೊಂಡೊಯ್ಯಲು ಸಹಕಾರಿಯಾಗುತ್ತದೆ ಎಂಬ ಆಶಾಭಾವನೆಯನ್ನು ಈ ಪುಸ್ತಕ ಮೂಡಿಸುತ್ತದೆ.

**–ಉಗಮ ಶ್ರೀನಿವಾಸ್**

ಪು: **ಅಮರಸುಳ್ಯ–೧೮೩೭**(ಬ್ರಿಟಿಶ್ ವಸಾಹತುಶಾಹಿ ವಿರುದ್ಧದ ಸಶಸ್ತ್ರ ಹೋರಾಟ) ಲೇ: **ವಿದ್ಯಾಧರ ಕುಡೆಕಲ್ಲು** ಪ್ರ: **ಬಂಟಮಲೆ ಪ್ರಕಾಶನ**, ಗುತ್ತಿಗಾರು, ಸುಳ್ಯ (೯೪೮೦೨೬೭೦೨೧) ಪು: **೧೮೪** ಬೆ: **ರೂ.೨೦೦/–**

## ಗತಕಾಲ ಎನ್ನುವ ಸಂಕೀರ್ಣ ವಿದ್ಯಮಾನದ ಸುತ್ತಮುತ್ತ




**ಗ**ತಕಾಲವೆನ್ನುವುದು ಅತ್ಯಂತ ಸಂದಿಗ್ಧತೆಯಿಂದ ಕೂಡಿದ ವಿದ್ಯಮಾನವಾಗಿದೆ ಮತ್ತು ಅದನ್ನು ಸಂಘಟಿಸುವ ಚರಿತ್ರಾಶಾಸ್ತ್ರವೆನ್ನುವ ಆಧುನಿಕ ಶೈಕ್ಷಣಿಕ ಶಿಸ್ತು ತೀರಾ ವಾದಗ್ರಸ್ತವಾದದ್ದು. ೧೯ನೆಯ ಶತಮಾನದ ವಸ್ತುನಿಷ್ಠ ಚರಿತ್ರಾಶಾಸ್ತ್ರದ ಪ್ರತಿಪಾದನೆಯಿಂದ ಆರಂಭಿಸಿ ನಮ್ಮ ಕಾಲದ ಅರ್ಥದ ಅರಾಜಕತೆಯ ವಸಾಹತೋತ್ತರ ಚಾರಿತ್ರಿಕ ತತ್ತ್ವದ ತನಕ ನಾವು ಸಂದು ಹೋದ ಕಾಲದ ಕುರಿತು ವಿಭಿನ್ನ ದೃಷ್ಟಿಕೋನಗಳನ್ನು ಗಳಿಸಿಕೊಂಡಿದ್ದೇವೆ. ಹಾಗಾಗಿ ಚರಿತ್ರೆ ಅಥವಾ ಇತಿಹಾಸದ ಕುರಿತು ನಾವು ಏನೇ ಹೇಳಿದರೂ ಅದಕ್ಕೊಂದು ಎದುರು ವಾದ ಅಥವಾ ಅಡ್ಡ ಮಾತು ಇದ್ದೇ ಇರುತ್ತದೆ.

ಚರಿತ್ರೆಯನ್ನು ನಾವು ಒಂದು ರಚನೆ ಎಂದು ಪ್ರತಿಪಾದಿಸುವ ಕಾಲದಲ್ಲಿ ಅದು ವಸ್ತುನಿಷ್ಠವಾಗಿರಬೇಕು ಅಥವಾ ಸಾಕ್ಷ್ಯಾಧಾರಗಳ ನೆಲೆಯಲ್ಲಿ ಮಾತ್ರ ನಿರೂಪಿತವಾಗಬೇಕು ಎನ್ನುವ ಬೆಚ್ಚಗಿನ ಒಮ್ಮತದಲ್ಲಿ ಇರಲು ಸಾಧ್ಯವಿಲ್ಲ. ನಾವು ಎದುರಾಗುವ ಎಲ್ಲಾ ಸಂಕಥನಗಳಂತೆ ಚರಿತ್ರೆಯೂ ಒಂದು ಸಂಕಥನ. ಅದು ಚರಿತ್ರಕಾರ ಗಳಿಸಿಕೊಳ್ಳುವ ಮಾಹಿತಿಗಳಲ್ಲಿ ಮತ್ತು ಆತನ ಸಂಘಟನಾ ಚಾತುರ್ಯದಲ್ಲಿ ರೂಪುತಳೆಯುವಂತಹದು. ಹಾಗಾಗಿ, ಅದು ಗತಕಾಲದ ಕುರಿತು ಏಕಸ್ವಾಮ್ಯವನ್ನು ಹೊಂದಿರುವ ಸಾರ್ವಭೌಮ ಸಿದ್ಧಾಂತವಲ್ಲ. ಆದ್ದರಿಂದಲೇ, ಸಂಸ್ಕೃತಿ ಚಿಂತಕ ಅಶೀಶ್ ನಂದಿ ಗತಕಾಲ ಮತ್ತು ಚರಿತ್ರೆಯ ನಡುವೆ ಒಂದು ಪ್ರಮುಖವಾದ ಜ್ಞಾನ ಸಂಬಂಧಿ ವ್ಯತ್ಯಾಸವನ್ನು ಮಾಡುತ್ತಾರೆ. ಬಹುಶಃ ೨೦ನೆ ಶತಮಾನದ ಪ್ರಖ್ಯಾತ ಚರಿತ್ರಾಶಾಸ್ತ್ರಜ್ಞ ಮತ್ತು ದಾರ್ಶನಿಕ ಇ.ಎಚ್.ಕಾರ್‌ನ ಒಂದು ಪ್ರಖರವಾದ ಮಾತು ನಮ್ಮ ಚರಿತ್ರಾ ಜಿಜ್ಞಾಸೆಗೆ ಸೂಕ್ತವಾದುದಾಗಿದೆ. ಆತ ಹೀಗೆ ಹೇಳುತ್ತಾನೆ; ಚರಿತ್ರೆ ಎನ್ನುವುದು ಗತಕಾಲ ಮತ್ತು ವರ್ತಮಾನಗಳ ನಡುವೆ ನಡೆಯುವ ನಿರಂತರ ಸಂಭಾಷಣೆ. ಅದು ಚರಿತ್ರಕಾರ ಮತ್ತು ಆತನ ಮಾಹಿತಿಗಳ ನಡುವೆ ಸಂಭವಿಸುವ ಕರ್ಷಣೆಯೂ ಹೌದು.

ಚರಿತ್ರೆಯ ಬಗೆಗಿನ ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಗೆಳೆಯ ವಿದ್ಯಾಧರ ಕುಡೆಕಲ್ಲುರವರ "ಅಮರಸುಳ್ಯ –೧೮೩೭: ಬ್ರಿಟಿಷ್ ವಸಾಹತುಶಾಹಿ ವಿರುದ್ಧದ ಸಶಸ್ತ್ರ ಹೋರಾಟ" ಎನ್ನುವ ಶೈಕ್ಷಣಿಕ ಗ್ರಂಥದ ಕುರಿತು ನನ್ನ ಕೆಲವು ಪ್ರತಿಸ್ಪಂದನಗಳನ್ನು ಮುಂದಿಡುವ ಸಾಹಸವನ್ನು ಮಾಡುತ್ತೇನೆ. ಮೊದಲಿಗೆ ಪರಿಚಯ ಮತ್ತು ಪ್ರಶಂಸೆಯ ಕೆಲವು ಮಾತುಗಳು. ನಂತರ ಕೆಲವು ವಿಮರ್ಶಾ ಪ್ರತಿಫಲನಗಳು.

"ಅಮರಸುಳ್ಯ–೧೮೩೭" ಗಂಭೀರವಾದ ಶೈಕ್ಷಣಿಕ ಪರಿಶ್ರಮದಿಂದ ಹೊರಬಂದಿರುವ ಗ್ರಂಥ. ವಿಶ್ವವಿದ್ಯಾನಿಲಯದ ಸಂಶೋಧನೆ ಒಳಗೊಳ್ಳುವ ಎಲ್ಲಾ ವೈಧಾನಿಕ ರೀತಿ ನೀತಿಗಳನ್ನು ವಿದ್ಯಾಧರರವರು ಗಾಂಭೀರ್ಯ ಮತ್ತು ಪರಿಶ್ರಮಗಳಿಂದ ಅನುಸರಿಸಿಕೊಂಡು ಬಂದಿದ್ದಾರೆ. ಅಂತೆಯೇ, ಸಂಕೀರ್ಣವಾದ ಚಾರಿತ್ರಿಕ ವಿದ್ಯಮಾನಗಳನ್ನು ಸರಳವಾದ ಶೈಲಿ ಹಾಗೂ ಸ್ಪಷ್ಟವಾದ ಭಾಷೆಯಲ್ಲಿ ಅವರು ಮಂಡಿಸಿದ್ದಾರೆ. ಒಟ್ಟು ೮ ಅಧ್ಯಾಯಗಳಿರುವ ಈ ಪುಸ್ತಕದ ಶೀರ್ಷಿಕೆಗಳು ಆಕರ್ಷಕವಾಗಿವೆ ಮತ್ತು ಕುತೂಹಲವನ್ನು ಕೆರಳಿಸುತ್ತವೆ. ಒಟ್ಟಿನಲ್ಲಿ, ಆಸಕ್ತಿದಾಯಕ ವಿಷಯಗಳನ್ನು ಶೈಕ್ಷಣಿಕ ಪರಿಶ್ರಮದ ಮೂಲಕ ಮುಂದಿಟ್ಟ ಲೇಖಕರ ಪ್ರಯತ್ನವನ್ನು ನಾನು ಅಭಿನಂದಿಸುತ್ತೇನೆ.

ಆದರೆ ಒಂದು ಚಾರಿತ್ರಿಕ ವಿದ್ಯಮಾನದ ಶೈಕ್ಷಣಿಕ ಪ್ರಬಂಧವಾಗಿ ಈ ಪುಸ್ತಕ ಚರಿತ್ರಾ ತತ್ತ್ವಗಳ ಕಡೆಗೆ ವಿಶೇಷ ಗಮನವನ್ನು ಹರಿಸಿದಂತೆ ಕಾಣುವುದಿಲ್ಲ. ೧೯ನೇ ಶತಮಾನದ ವಸ್ತುನಿಷ್ಠ ಇತಿಹಾಸದ ಕಲ್ಪನೆಯ ಐಡಿಯೋಲಾಜಿಕಲ್ ಹ್ಯಾಂಗೋವರ್ (Ideological Hangover) ಈ ಗ್ರಂಥದಲ್ಲಿ ಪ್ರಖರವಾಗಿ ಕಾಣಿಸುತ್ತದೆ. ಗೆಳೆಯ ಹಿಮಕರ್‌ರವರ ಪ್ರಕಾಶಕರ ನುಡಿಯಲ್ಲಿಯೂ ಇದು ವ್ಯಕ್ತವಾಗುತ್ತದೆ. 'ಸಾಕ್ಷ್ಯಾಧಾರಗಳು ಸ್ವತಃ ಮಾತನಾಡಲಿ' ಎನ್ನುವ ಮಾತು ಕಾರ್‌ರವರದ್ದಾದರೂ ಅದು ಇತಿಹಾಸದ ಕುರಿತು ಪ್ರತ್ಯಕ್ಷ ಪ್ರಮಾಣವಾದಿ (Positivist) ನಿಲುವನ್ನೇ ಪ್ರತಿಬಿಂಬಿಸುತ್ತದೆ. ವಿದ್ಯಾಧರರವರಿಗೆ ಸಬಾಲ್ಟರ್ನ್ ಚರಿತ್ರಶಾಸ್ತ್ರದ ಅಥವಾ ವಸಾಹತೋತ್ತರ ಚರಿತ್ರಾತತ್ತ್ವದ ಪರಿಚಯ ಇಲ್ಲವೆಂದಲ್ಲ. ಹಾಗಿದ್ದೂ, ಅವರ ಈ ಪ್ರಸ್ತುತ ಪುಸ್ತಕ ಚರಿತ್ರಾತತ್ತ್ವಗಳ ಅವರ ಅರಿವನ್ನು ಸ್ಪಷ್ಟವಾಗಿ ಬಿಂಬಿಸುವುದಿಲ್ಲ.

ಅಮರಸುಳ್ಯ ಸಂಘರ್ಷವನ್ನು ವಸಾಹತುಶಾಹಿ ವಿರುದ್ಧದ ಹೋರಾಟವೆಂದು ಬಣ್ಣಿಸುವುದರಲ್ಲಿ ಆಕ್ಷೇಪವೇನು ಇಲ್ಲ. ಆದರೆ ಈ ಹೋರಾಟದ ನಾಯಕತ್ವವನ್ನು ವಹಿಸಿದ ವರ್ಗಕ್ಕೆ ವಸಾಹತುಶಾಹಿಯ ಕುರಿತು ಯಾವ ಕಲ್ಪನೆ ಇದ್ದಿತ್ತು ಎನ್ನುವ ಬಗ್ಗೆ ಈ ಗ್ರಂಥದಲ್ಲಿ ಸ್ಪಷ್ಟತೆ ಇಲ್ಲ. ಅಂತೆಯೇ, ಕೆಲವು ಸ್ಥಳೀಯ ಹೋರಾಟಗಳು ಮಾತ್ರ ಸ್ವಾತಂತ್ರ್ಯ ಹೋರಾಟಗಳಾಗಿ ನಿರೂಪಿಸಲ್ಪಡುವ ರಾಜಕಾರಣದ ಕುರಿತು ನಮಗೆ ಹೆಚ್ಚಿನ ತಾತ್ತ್ವಿಕ ಸ್ಪಷ್ಟತೆಯ ಅಗತ್ಯವಿದೆ.

ಎಡ್ವರ್ಡ್ ಸೈದ್ ತನ್ನ ಸುಪ್ರಸಿದ್ಧ Orientalism ಎನ್ನುವ ಗ್ರಂಥವನ್ನು ಬರೆದ ಮೇಲೆ ವಸಾಹತು ಬದುಕಿನ ಎಲ್ಲಾ ಚಾರಿತ್ರಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿದ್ಯಮಾನಗಳ ಕುರಿತು ನಾವು ಮತ್ತೆ ಮರುಶೋಧನೆಯನ್ನು ನಡೆಸಬೇಕಾದ ಕಾಲಘಟ್ಟದಲ್ಲಿ ಇದ್ದೇವೆ ಎನ್ನುವ ಅರಿವು ವಿದ್ಯಾಧರರ ಈ ಚರಿತ್ರಾ ಸಂಕಥನವನ್ನು ಓದಿದ ಮೇಲೆ ನನಗೆ ಮನದಟ್ಟಾಯಿತು.

**–ರಾಜಾರಾಮ್ ತೋಳ್ಪಾಡಿ**

---

**೯ನೇ ಪುಟದಿಂದ)**

ನಮ್ಮ ದೇಶದಲ್ಲೂ ಸ್ಥಾಪಿಸುವಂತೆ ಪ್ರೇರೇಪಿಸುವ ಪ್ರಯತ್ನದಲ್ಲಿಯೂ ಇದು ಬಿಂಬಿತವಾಗಿದೆ. (ಇದು ಆರಂಭವಾದದ್ದು ನವಉದಾರವಾದಿ ನಿಲುವನ್ನು ಸಮರ್ಥಿಸುವಂತಿದ್ದ ಯು.ಪಿ.ಎ.–೨ರ ಕಾಲದಲ್ಲೇ). ಈ ಚಿಂತನೆ ತಪ್ಪು. ಏಕೆಂದರೆ, ಈ 'ಜಾಗತಿಕ ಮಟ್ಟ' ಎಂಬ ಪರಿಕಲ್ಪನೆಯನ್ನು ಒಪ್ಪಿಕೊಳ್ಳುವುದು ಮತ್ತು ಅದಕ್ಕೆ ತಕ್ಕಂತೆ ನಮ್ಮ ವಿಶ್ವವಿದ್ಯಾನಿಲಯಗಳನ್ನು ಪರಿವರ್ತಿಸುವುದು ಮಹಾನಗರ ವಿಶ್ವವಿದ್ಯಾನಿಲಯಗಳ ಪಾರುಪತ್ಯವನ್ನು ಒಪ್ಪಿಕೊಂಡಂತೆ. ಏಕೆಂದರೆ, ಯಾವ ಮಾನದಂಡಗಳಿಂದ 'ಜಾಗತಿಕ ಮಟ್ಟ' ಎಂಬುದನ್ನು ನಿರ್ಧರಿಸಲಾಗುವುದೋ ಆ ಮಾನದಂಡಗಳ ನಿರ್ಧಾರವಾಗುವುದೂ ಮಹಾನಗರಗಳಲ್ಲೇ! ಯಾವ ತಥಾಕಥಿತ 'ಉಲ್ಲೇಖಾರ್ಹ' ನಿಯತಕಾಲಿಕಗಳು ಪ್ರಕಟಿಸುವ ಲೇಖನಗಳು ಜಾಗತಿಕ ಮಟ್ಟವನ್ನು ಸೂಚಿಸುತ್ತವೆ ಎನ್ನಲಾಗುವುದೋ ಆವು ಮುಖ್ಯವಾಗಿ ಮಹಾನಗರಗಳಲ್ಲೇ ತಮ್ಮ ನೆಲೆಗಳನ್ನು ಹೊಂದಿರುತ್ತವೆ. ವಸಾಹತುಶಾಹಿ ಶೋಷಣೆಯ ಬಗೆಗಿನ ಉಲ್ಲೇಖಗಳನ್ನು ಅವು ನಿರಾಕರಿಸುತ್ತವೆ. ನಮ್ಮ ಗುರಿ ನಿಜವಾಗಿ ವಿಶ್ವವಿದ್ಯಾಲಯಗಳನ್ನು 'ರಾಷ್ಟ್ರನಿರ್ಮಾಣ'ದ ಅಗತ್ಯಗಳಿಗೆ ಪೂರಕವಾಗಿರುವಂತೆ ರೂಪಿಸಬೇಕೇ ಹೊರತು ಜಾಗತಿಕ ಮಟ್ಟದ ಹಿಂದೋಡುವಂತಲ್ಲ.

ಇದರರ್ಥ ನಮ್ಮ ಉನ್ನತ ಅಧ್ಯಯನದ ಹಲವಾರು ಸಂಸ್ಥೆಗಳ ಶೋಚನೀಯ ಗುಣಮಟ್ಟಕ್ಕೆ ಕಣ್ಣು ಮುಚ್ಚಿಕೊಂಡಿರಬೇಕು ಎಂದಲ್ಲ. ಆದರೆ ಈ ಗುಣಮಟ್ಟ ಎಂಬುದನ್ನು ನಮ್ಮದೇ ಮಾನದಂಡಗಳಿಂದ ನಿರ್ಧರಿಸಬೇಕು, ಮತ್ತು ಅವುಗಳ ಸುಧಾರಣೆಯ ಪಥವು ನಮ್ಮ ಶೈಕ್ಷಣಿಕ ವ್ಯವಸ್ಥೆಯ ಗುರಿಯಾದ 'ರಾಷ್ಟ್ರ ನಿರ್ಮಾಣ'ವನ್ನು ಸಂಪೂರ್ಣವಾಗಿ ಕೈಬಿಡುವ ರೀತಿಯದ್ದಾಗಿರಬಾರದು.

ಎರಡನೆಯದಾಗಿ, ಪ್ರಖ್ಯಾತ ಮಹಾನಗರ ವಿಶ್ವವಿದ್ಯಾನಿಲಯಗಳನ್ನು ಅನುಕರಣೆ ಮಾಡುವುದು ಗುಣಮಟ್ಟವನ್ನು ಸಾಧಿಸುವ ವಿಧಾನ ಖಂಡಿತ ಅಲ್ಲ. ಹಾರ್ವರ್ಡ್, ಆಕ್ಸ್‌ಫರ್ಡ್ ಅಥವಾ ಕೇಂಬ್ರಿಡ್ಜ್‌ಗಳನ್ನು ಅನುಕರಿಸುವ ನಮ್ಮ ಸಂಸ್ಥೆಗಳು ಎಂದೆಂದಿಗೂ ಆ ಮಟ್ಟವನ್ನು ತಲುಪಲಾರದೆ ಸಾಧಾರಣ ಮಟ್ಟಕ್ಕೆ ಮಿತಿಗೊಂಡುಬಿಡುತ್ತವೆ. ಅದಕ್ಕಿಂತಲೂ ಹೆಚ್ಚಾಗಿ, ಈ ಪ್ರಕ್ರಿಯೆಯು ನಮ್ಮ ಸಂಪೂರ್ಣ ಶೈಕ್ಷಣಿಕ ವ್ಯವಸ್ಥೆಯನ್ನೇ ಸಾಧಾರಣ ಮಟ್ಟಕ್ಕೆ ದೂಡುತ್ತದೆ. ವಿದೇಶೀ ವಿಶ್ವವಿದ್ಯಾನಿಲಯಗಳಿಗೆ ತುಸುವಾದರೂ ಹೋಲಿಸಬಹುದಾದ, ಬೋಧಕ ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳನ್ನು ಹೊಂದಲು ಸಂಪನ್ಮೂಲವಿಲ್ಲದ ಸಂಸ್ಥೆಗಳು–ಹೆಚ್ಚಿನಂಶ ಅವು ಸಾರ್ವಜನಿಕ ಸಂಸ್ಥೆಗಳೇ ಆಗಿರುತ್ತವೆ–ಮಹಾನಗರ ವಿಶ್ವವಿದ್ಯಾಲಯಗಳೇ ಮಾದರಿ ಎಂಬಂತಹ ವಾತಾವರಣದಲ್ಲಿ, ಕೀಳರಿಮೆಗೆ ಒಳಗಾಗಿ, ಈಗಿರುವ ರೀತಿಯ ಅನ್ನ ಸಂಪಾದನೆಯ ಶಿಕ್ಷಣವನ್ನೂ ನೀಡಲು ಸಾಧ್ಯವಾಗದೆ ಹೋಗಬಹುದು. ಮತ್ತೊಂದೆಡೆ, ಉತ್ತಮ ಬೋಧಕ ಸಿಬ್ಬಂದಿಯನ್ನು ಸೆಳೆಯಬಲ್ಲಷ್ಟು ಮೂಲಭೂತ ಸೌಕರ್ಯಗಳನ್ನು ಹೊಂದಿರುವ ವಿದೇಶೀ ವಿಶ್ವವಿದ್ಯಾಲಯಗಳ ಮಟ್ಟದ ನಮ್ಮ ಸಂಸ್ಥೆಗಳು, ಅವುಗಳೊಂದಿಗಿನ ಸ್ಪರ್ಧೆಯಲ್ಲಿ ಯಾವಾಗಲೂ ತಮ್ಮ ಬೋಧಕ ಸಿಬ್ಬಂದಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಒಬ್ಬ ವ್ಯಕ್ತಿಗೆ ಯೇಲ್ ವಿಶ್ವವಿದ್ಯಾನಿಲಯಕ್ಕೆ ಏಣಿಮೆಟ್ಟಿಲಾಗಬಲ್ಲ ಬೇರೊಂದು ವಿದೇಶೀ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುವ ಸಾಧ್ಯತೆ ತುಸುವಾದರೂ ಇದ್ದರೆ ಅಂತಹ ವ್ಯಕ್ತಿ ಯೇಲ್ ವಿಶ್ವವಿದ್ಯಾಲಯವನ್ನು ಅನುಕರಣೆ ಮಾಡುವ ಒಂದು ತೃತೀಯ ವಿಶ್ವದ ಸಂಸ್ಥೆಯಲ್ಲೇ ಏಕೆ ಉಳಿಯಬಯಸುತ್ತಾನೆ?

ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪಠ್ಯಕ್ರಮ ಮತ್ತು ಪಠ್ಯವಸ್ತುವಿನ ನೆಲೆಗಳಲ್ಲಿ ಶಿಕ್ಷಣದ ಏಕರೂಪೀಕರಣವು ವಿದ್ಯಾರ್ಥಿಗಳನ್ನೂ (ಮುಖ್ಯವಾಗಿ ಮಧ್ಯಮವರ್ಗ) ಮತ್ತು ಕೆಲಸದ ಪ್ರೇರಣೆಯನ್ನೂ ಏಕರೂಪಗೊಳಿಸುವ ಕಾರ್ಯಕ್ಕೂ ಮುಂದಾಗುತ್ತದೆ. ತಮ್ಮ ಸಾಮರ್ಥ್ಯವನ್ನು ವ್ಯವಸ್ಥೆಗೆ ಧಾರೆ ಎರೆದು ವಶಕ್ಕೆ ನೀಡಿ ಜನರ ಸೇವೆ ಮಾಡಬೇಕೆಂಬ ಬಯಕೆಯು ಮಾಯವಾಗಿ ಅದರ ಸ್ಥಾನದಲ್ಲಿ, ಯಾವ ಮೂಲ ಸ್ಥಳಗಳನ್ನು ತಮ್ಮ ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳು ಅನುಕರಣೆ ಮಾಡುತ್ತಿವೆಯೋ ವಿದೇಶಗಳ ಅಂತಹ ಸ್ಥಳಗಳಿಗೆ ವಲಸೆ ಹೋಗುವ ಬಯಕೆ ಮೂಡಬಹುದು.

ಭಾರತದಂತಹ ತೃತೀಯ ಜಗತ್ತಿನ ದೇಶಗಳು, ಕೇವಲ 'ರಾಷ್ಟ್ರ ನಿರ್ಮಾಣ'ಕ್ಕಷ್ಟೇ ಅಲ್ಲದೆ ಒಂದು ಗುಣಮಟ್ಟದ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸುವುದಕ್ಕಾಗಿ ಯೋಗ್ಯವಾದ ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಬೇಕೆಂದರೆ, ಅವು ಹೊರ ದೇಶಗಳಲ್ಲಿ ಇರುವ ಸಂಸ್ಥೆಗಳ, ಅವು ಎಷ್ಟೇ ಪ್ರಖ್ಯಾತವಾಗಿದ್ದರೂ ಅವುಗಳ ಪಠ್ಯಕ್ರಮ, ಪಠ್ಯವಸ್ತು, ಕೆಲಸಕ್ಕೆ ಪ್ರೋತ್ಸಾಹ, ಮತ್ತು ದೃಷ್ಟಿಕೋನವನ್ನು ಅನುಕರಣೆ ಮಾಡುವ ಒತ್ತಡವನ್ನು ತಪ್ಪಿಸಿಕೊಳ್ಳಬೇಕಾಗುವುದು. ಶಿಕ್ಷಣವು ಒಂದು ದೇಶದ ವಾಸ್ತವದಲ್ಲಿ ತನ್ನ ಬೇರುಗಳನ್ನು ಹೊಂದಿರಬೇಕಾಗುತ್ತದೆ, ಹಾಗಲ್ಲದಿದ್ದರೆ ಅದು ದ್ವಿತೀಯ ದರ್ಜೆಯದಾಗಿಬಿಡುತ್ತದೆ.

ಭಾರತದ ಸಮಾಜಕ್ಕೇ ವಿಶಿಷ್ಟವಾದ ಜಾತಿ ಆಧಾರದ ಮೇಲೆ ದಬ್ಬಾಳಿಕೆ ಮಾಡುವಂತಹ ಕೆಲವು ಸಮಸ್ಯೆಗಳು ಶೈಕ್ಷಣಿಕ ದೃಷ್ಟಿಕೇಂದ್ರಗಳಿಂದ ದೂರಾಗುತ್ತವೆ. ಏಕೆಂದರೆ ಜಾಗತಿಕ ಬಂಡವಾಳದ ದೃಷ್ಟಿಯಿಂದ ಇಂತಹ ಸಮಸ್ಯೆಗಳಿಗೆ ಹೆಚ್ಚಿನ ಯಾವ ಮಹತ್ವವೂ ಇರುವುದಿಲ್ಲ. ಹಿಂದುತ್ವ ಪಡೆಗಳ ದೃಷ್ಟಿಯಲ್ಲೂ ಕೂಡ ಇಂತಹ ಸಮಸ್ಯೆಗಳು ಭಾರತೀಯ ಸಂಸ್ಕೃತಿಯ ಮಹತ್ವವನ್ನು ಕಡಿಮೆ ಮಾಡುವಂತಹದ್ದಾಗಿರುತ್ತದೆ. ಆದ್ದರಿಂದ ಅವುಗಳನ್ನು ಚಾಪೆಯ ಕೆಳಗೆ ಜಾಡಿಸುವುದೇ ಉತ್ತಮ ಎಂದು ಅವು ಭಾವಿಸುತ್ತವೆ. ರಾಷ್ಟ್ರೀಯ ಶಿಕ್ಷಣ ನೀತಿಯ ಇಡೀ ಪಠ್ಯದಲ್ಲಿ, ಎಲ್ಲಿಯೂ ಜಾತಿಯ ವಿಚಾರವು ಭಾರತೀಯ ಸಮಾಜದ ಒಂದು ಅಸಹ್ಯಕರ ಲಕ್ಷಣವೆಂದಾಗಲೀ ಅಥವಾ ವಿಶ್ವವಿದ್ಯಾಲಯಗಳ ದಾಖಲಾತಿ, ನೇಮಕಾತಿ ಅಥವಾ ಬಡತಿ ಪ್ರಕ್ರಿಯೆಗಳಲ್ಲಿ ತೆಗೆದುಕೊಳ್ಳಬೇಕಾದ ಸಕಾರಾತ್ಮಕ ಕ್ರಮಗಳಿಗೆ ಅವಶ್ಯಕವೆಂದಾಗಲೀ ಪ್ರಸ್ತಾಪವೇ ಇಲ್ಲದಿರುವುದು ಒಂದು ಆಕಸ್ಮಿಕವಲ್ಲ. ಈ ಮೌನವೂ ಕೂಡ ಏಕರೂಪೀಕರಣದ ಒಂದು ಪರಿಣಾಮವೇ.



**(ಹಿರಿಯ ಅರ್ಥಶಾಸ್ತ್ರಜ್ಞರೂ ಪರಿಣಿತ ರಾಜಕೀಯ ವಿಶ್ಲೇಷಕರೂ ಆದ ಲೇಖಕರು ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ಆರ್ಥಿಕ ಅಧ್ಯಯನ ಮತ್ತು ಯೋಜನಾ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.)**

**(ಕನ್ನಡಕ್ಕೆ: ಎಂ. ರಾಜು ಕೃಪೆ: *ಜನತಾ*, ೧೪, ನವೆಂಬರ್, ೨೦೨೧)**

---

**೧ನೇ ಪುಟದಿಂದ)**

ಮೇಲೆ ಕಟ್ಟಿದ ಸಾರ್ವಜನಿಕ ಉದ್ಯಮ ಸಂಸ್ಥೆಗಳನ್ನು ನಷ್ಟದ ಬಾಬತ್ತಿನ ಹೆಸರಲ್ಲಿ ಖಾಸಗಿ ಉದ್ಯಮಪತಿಗಳ ಸುಪರ್ದಿಗೆ ಕೊಡಲು ಅವುಗಳ ಆಸ್ತಿಪಾಸ್ತಿಗಳ ನಗದೀಕರಣಕ್ಕೆ ಕೈಹಾಕಿರುವ ಸರ್ಕಾರವೊಂದನ್ನು ಈ ಹಿರಿಯ ರಾಜಕೀಯ ವಿಶ್ಲೇಷಕರು ಹೇಗೆ ಎಡಪಂಥಿಯ ಎಂದು ಗುರುತಿಸಲು ಹೊರಟಿದ್ದಾರೋ ತಿಳಿಯದು! ಮೋದಿ ಆಡಳಿತದಡಿ ಭಾರತವೀಗ ಅಂತಾರಾಷ್ಟ್ರೀಯ ವಲಯಗಳಲ್ಲಿ ಭಾಗಶಃ ಪ್ರಜಾಸತ್ತೆ ಎನಿಸಿಕೊಳ್ಳುತ್ತಿದೆ ಮತ್ತೂ ಮುಖ್ಯವಾಗಿ ಮಾನವ ಅಭಿವೃದ್ಧಿ ಮತ್ತು ಹಸಿವಿನ ಸೂಚ್ಯಂಕಗಳ ಪಟ್ಟಿಯಲ್ಲಿ ಅದರ ಸ್ಥಾನ ಗಣನೀಯವಾಗಿ ಕುಸಿದಿದೆ ಎಂಬುದು ಶೇಖರ್ ಗುಪ್ತ ಅವರೇ ತಮ್ಮ ಕಾರ್ಯಕ್ರಮಗಳಲ್ಲಿ ನಿರೂಪಿಸಿದ್ದಾರೆ. ಆದರೂ ಈ ರಾಜಕೀಯ ನಾಮಕರಣದ ಕಸರತ್ತು ಏಕೆ? ಗೋಜಲು ನಿವಾರಣೆಯ ಹೆಸರಿನಲ್ಲಿ ಕಾರ್ಯಕ್ರಮಗಳ ಸರಣಿ ಮಾಡುವ ಇವರೇ ಬಹುಶಃ ಸಂದರ್ಭಗಳ–ತಮ್ಮ ಮಾಧ್ಯಮ ಶಕ್ತಿಯನ್ನು ಇನ್ನಷ್ಟು ವಿಸ್ತರಿಸುವ ಮಹತ್ವಾಕಾಂಕ್ಷೆ ಬೇಡುವ ಹಣಕಾಸಿನದ್ದೂ ಸೇರಿದಂತೆ–ಒತ್ತಡಕ್ಕೆ ಸಿಕ್ಕಿ ಒಂದು ಮಹಾ ಗೋಜಲಿಗೆ ಸಿಕ್ಕಿಹಾಕಿಕೊಂಡಿರುವ ವಿಪರ್ಯಾಸವಿದು! ಹಾಗಾಗಿಯೇ ಕೃಷಿ ಕಾಯ್ದೆಗಳ ವಿರುದ್ಧ ರೈತ ಹೋರಾಟ ಆರಂಭವಾದಾಗ ಈ ಕಾಯ್ದೆಗಳನ್ನು ಬೆಂಬಲಿಸಿ, ಇವನ್ನು ಯಾವುದೇ ಕಾರಣಕ್ಕೂ ಸರ್ಕಾರ ಹಿಂತೆಗೆದುಕೊಳ್ಳಬಾರದೆಂದು ಘಂಟಾಘೋಷವಾಗಿ ಹೇಳಿದ್ದ ಈ ಮಹಾಶಯರು ಮೊನ್ನೆ ಸರ್ಕಾರ ಈ ಕಾಯ್ದೆಗಳನ್ನು ಹಿಂತೆಗೆದುಕೊಂಡಾಗ ಅದನ್ನು ಒಳ್ಳೆಯ ನಿರ್ಧಾರ ಎಂದು ಸ್ವಾಗತಿಸಿ ತನ್ನ ಮಾತುಗಳನ್ನು ತಾನೇ ನುಂಗಿಕೊಳ್ಳುವಂತಾಗಿದ್ದು.

ನಮ್ಮ ಓದುಗರೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು!

**–ಸಂಪಾದಕ**

**'ಹೊಸ ಮನುಷ್ಯ'ದ ಓದುಗರೆಲ್ಲರಿಗೂ**
**ಸಂಕ್ರಾಂತಿಯ ಶುಭಾಶಯಗಳು**



**ಕೆ. ವೆಂಕಟೇಶ**
ಮತ್ತು ಕುಟುಂಬ
ದೊಡ್ಡಬಳ್ಳಾಪುರ

**'ಹೊಸ ಮನುಷ್ಯ'ದ ಓದುಗರೆಲ್ಲರಿಗೂ**
**ಸಂಕ್ರಾಂತಿಯ ಶುಭಾಶಯಗಳು**



**ಕಾಳಚನ್ನೇಗೌಡ**
ಮತ್ತು ಕುಟುಂಬ
ಮೈಸೂರು

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಗಣರಾಜ್ಯೋತ್ಸವದ ಶುಭಾಶಯಗಳು



**ಎ.ಎಂ. ಶಿವಸ್ವಾಮಿ**
**ಮತ್ತು ಗೆಳೆಯರು**
**ಕುವೆಂಪುನಗರ, ಮೈಸೂರು**

## ತಿಂಗಳ ಕೊನೆಯ ಸಾಲುಗಳು



"ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ಪ್ರತಿಪಾದಿಸುವ ಧರ್ಮವೇ ಅತ್ಯುತ್ತಮ ಧರ್ಮ, ಈ ಮೂರೂ ಮೌಲ್ಯಗಳನ್ನು ನಮ್ಮ ಸಂವಿಧಾನದ ಪೀಠಿಕೆಯಲ್ಲೇ ಅಳವಡಿಸಲಾಗಿದೆ. ಹಾಗಾಗಿ ನಮ್ಮ ಸಂವಿಧಾನ ನಿಜವಾದ ಅರ್ಥದಲ್ಲಿ ಧರ್ಮವನ್ನೂ ಒಳಗೊಂಡಿದೆ"

**–ಬಿ.ಆರ್. ಅಂಬೇಡ್ಕರ್**

**ಶುಭಾಶಯಗಳೊಂದಿಗೆ,**

**ಕೆ. ಗೋವಿಂದರಾಜು**
ಮತ್ತು ಕುಟುಂಬ
**ಮೈಸೂರು**

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2022-24**

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)